ಗುರುವಾರ, ಏಪ್ರಿಲ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 106 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಕ್ರಿಯೆ

ಯೋಗಿ ಆದಿತ್ಯನಾಥ ಅವರು ಅತಿದೊಡ್ಡ 'ಭೋಗಿ' (ವಿಲಾಸಿ). ಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಎಷ್ಟು ಮಂದಿ ಮೃತಪಟ್ಟರು? ಸರಿಯಾದ ಅಂಕಿಅಂಶ ನೀಡಿದರೇ? ಉತ್ತರ ಪ್ರದೇಶದಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಅನೇಕರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಶಾಂತಿಯುತ ರ‍್ಯಾಲಿಗಳಿಗೂ ಅವರು ಅವಕಾಶ ನೀಡುವುದಿಲ್ಲ. ಆದರೆ ಬಂಗಾಳದಲ್ಲಿ ಜನರು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

('ವಕ್ಫ್ ಕಾಯ್ದೆ ವಿಚಾರದಲ್ಲಿ ಪಶ್ಚಿಮ ಬಂಗಾಳ ಹೊತ್ತಿ ಉರಿಯುತ್ತಿದೆ, ಗಲಭೆಕೋರರನ್ನು ಶಾಂತಿದೂತರು ಎನ್ನುತ್ತಿದ್ದಾರೆ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೀಡಿದ್ದ ಹೇಳಿಕೆಗೆ ನೀಡಿದ ಪ್ರತಿಕ್ರಿಯೆ)

ಆಳ–ಅಗಲ
ನ್ಯಾಷನಲ್ ಹೆರಾಲ್ಡ್ ಪ್ರಕರಣ ಏನು, ಎತ್ತ...

ಮರಗಳ ಮಾರಣಹೋಮ: 'ಸುಪ್ರೀಂ' ಕಳವಳ 7

ಗ್ರಾ.ಪಂ ಸಿಬ್ಬಂದಿಗಿಲ್ಲ 'ಸೇವಾ ಭದ್ರತೆ' 6

ಸೆನ್ಸೆಕ್ಸ್	ನಿಫ್ಟಿ	₹/$
77,044	23,437	85.64

ಸಂಕ್ಷಿಪ್ತ ಸುದ್ದಿ

ಶಾಲಾ ಪ್ರವೇಶಕ್ಕೆ 5 ವರ್ಷ 5 ತಿಂಗಳು

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಬೆಂಗಳೂರು: ಒಂದನೇ ತರಗತಿ ಪ್ರವೇಶದ ಕನಿಷ್ಠ ವಯೋಮಿತಿಯನ್ನು 5 ವರ್ಷ 5 ತಿಂಗಳಿಗೆ ನಿಗದಿ ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಸರ್ಕಾರದ ಆದೇಶವನ್ನು ಪ್ರಕಟಿಸಿದ ಸಚಿವ ಮಧು ಬಂಗಾರಪ್ಪ, ಜೂನ್ 1ಕ್ಕೆ 5 ವರ್ಷ 5 ತಿಂಗಳು ಪೂರ್ಣಗೊಳಿಸಿದ ಮಕ್ಕಳು ಪ್ರವೇಶ ಪಡೆಯಬಹುದು. ಈ ಅವಕಾಶ 2025–26ನೇ ಸಾಲಿಗೆ ಮಾತ್ರ ಅನ್ವಯವಾಗಲಿದೆ. 2026–27ನೇ ಶೈಕ್ಷಣಿಕ ಸಾಲಿನಿಂದ ರಾಜ್ಯ ಶಿಕ್ಷಣ ನೀತಿಯ ನಿಯಮಗಳನ್ನು ಪಾಲನೆ ಮಾಡಲಾಗುವುದು. ಇದೇ ಶೈಕ್ಷಣಿಕ ಸಾಲಿನಿಂದ ಎಲ್‌ಕೆಜಿ ಪ್ರವೇಶಕ್ಕೆ ಕನಿಷ್ಠ ವಯೋಮಿತಿ 4 ವರ್ಷ, ಯುಕೆಜಿ ಪ್ರವೇಶಕ್ಕೆ 5 ವರ್ಷ ಕಡ್ಡಾಯಗೊಳಿಸಲಾಗಿದೆ ಎಂದರು.

7ನೇ ಪುಟ ನೋಡಿ

ನ್ಯಾ. ಗವಾಯಿ ಮುಂದಿನ ಸಿಜೆಐ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಬಿ.ಆರ್. ಗವಾಯಿ ಹೆಸರನ್ನು ಹಾಲಿ ಸಿಜೆಐ ಸಂಜೀವ್ ಖನ್ನಾ ಅವರು ಕೇಂದ್ರ ಸರ್ಕಾರಕ್ಕೆ ಬುಧವಾರ ಶಿಫಾರಸು ಮಾಡಿದ್ದಾರೆ.

ಗವಾಯಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಖನ್ನಾ ಅವರ ನಂತರದ ಅತ್ಯಂತ ಹಿರಿಯ ನ್ಯಾಯಮೂರ್ತಿ. ಖನ್ನಾ ಅವರು ಸಿಜೆಐ ಸ್ಥಾನದಿಂದ ಮೇ 13 ರಂದು ನಿವೃತ್ತರಾಗಲಿದ್ದಾರೆ. ಗವಾಯಿ ಅವರು 52ನೆಯ ಸಿಜೆಐ ಆಗಿ ಮೇ 14ರಂದು ಅಧಿಕಾರ ಸ್ವೀಕರಿಸಲಿದ್ದಾರೆ. ಗವಾಯಿ ಅವರು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ನ್ಯಾಯಾಂಗ ಕಲಾಪಗಳ ವರದಿಗಾರಿಕೆಯಲ್ಲಿ ತೊಡಗಿರುವ 'ಸುಪ್ರೀಂ ಕೋರ್ಟ್ ಅಬ್ಸರ್ವರ್' ಜಾಲತಾಣ ಉಲ್ಲೇಖಿಸಿದೆ.

ಮುಡಾ ಮೇಲ್ಮನವಿ: ಸಿ.ಎಂಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂಬ ಕೋರಿಕೆ ತಿರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಕೆಲಕಾಲ ಮೇಲ್ಮನವಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಸಿಬಿಐ, ಸಿದ್ದರಾಮಯ್ಯನವರ ಬಾಮೈದ ಮಲ್ಲಿಕಾರ್ಜುನ ಸ್ವಾಮಿ, ಜಮೀನಿನ ಮೂಲ ಮಾಲೀಕ ಜೆ.ದೇವರಾಜು ಸೇರಿದಂತೆ ಇತರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಂಪುಟದ ವಿಶೇಷ ಸಭೆ ಇಂದು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಸ್ತಾವ

ಒಬಿಸಿ ಮೀಸಲು ಶೇ 51ಕ್ಕೆ?

● ರಾಜೇಶ್ ರೈ ಚಟ್ಲ

ಬೆಂಗಳೂರು: ಒಕ್ಕಲಿಗ, ಲಿಂಗಾಯತ, ಮುಸ್ಲಿಂ, ಸೇರಿ ಹಿಂದುಳಿದ ವರ್ಗಗಳಿಗೆ ಇರುವ ಮೀಸಲಾತಿ ಪ್ರಮಾಣವನ್ನು ಶೇ 32ರಿಂದ ಶೇ 51ಕ್ಕೆ ಹೆಚ್ಚಿಸುವಂತೆ ಹಿಂದುಳಿದ ವರ್ಗಗಳ ಆಯೋಗ ಮಾಡಿರುವ ಪ್ರಮುಖ ಶಿಫಾರಸನ್ನು ಅಂಗೀಕರಿಸುವ ಮಹತ್ವದ ವಿಷಯ ಗುರುವಾರ ನಡೆಯಲಿರುವ ಸಚಿವ ಸಂಪುಟದ ವಿಶೇಷ ಸಭೆಯ ಮುಂದೆ ಬರಲಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ 'ದತ್ತಾಂಶ ಅಧ್ಯಯನ ವರದಿ'ಯನ್ನು ಹಿಂದುಳಿದ ವರ್ಗಗಳ ಆಯೋಗದ ಹಿಂದಿನ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರು ಸರ್ಕಾರಕ್ಕೆ ಸಲ್ಲಿಸಿದ್ದರು. ಈ ವರದಿಯನ್ನು ಏಪ್ರಿಲ್ 11ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು. ಈ ಬಗ್ಗೆ ಚರ್ಚಿಸಲು ಗುರುವಾರ ನಾಲ್ಕು ಗಂಟೆಗೆ ಸಚಿವ ಸಂಪುಟದ ವಿಶೇಷ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದಾರೆ.

ಸಚಿವ ಸಂಪುಟದ ಮುಂದೆ ಮಂಡಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಿದ್ಧಪಡಿಸಿದ ಟಿಪ್ಪಣಿ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ವಿವಿಧ ಪ್ರವರ್ಗಗಳಡಿ ಇದ್ದ ಜಾತಿಗಳನ್ನು ಸಾಮಾಜಿಕ, ಶೈಕ್ಷಣಿಕ, ಜೀವನೋಪಾಯ, ಔದ್ಯೋಗಿಕ ಮಾನದಂಡಗಳ ಆಧಾರದ ಮೇಲೆ ಪಡೆದ ಅಂಕಗಳಿಗೆ ಅನುಗುಣವಾಗಿ ಆಂತರಿಕ ಬದಲಾವಣೆಯೊಂದಿಗೆ ಶೇ 32ರ ಮೀಸಲಾತಿ ಪ್ರಮಾಣವನ್ನು ಪ್ರವರ್ಗವಾರು ವರ್ಗೀಕರಿಸುವಂತೆ ಪ್ರಸ್ತಾಪಿಸಿದೆ.

ಆಯೋಗದ ಶಿಫಾರಸಿನಂತೆ ಹಾಲಿ ಜಾರಿಯಲ್ಲಿರುವ ಹಿಂದುಳಿದ ವರ್ಗಗಳ ಪ್ರವರ್ಗವಾರು ಮೀಸಲಾತಿ ಪ್ರಮಾಣವನ್ನು ಶೇ 32ರಿಂದ ಶೇ 51ಕ್ಕೆ ಹೆಚ್ಚಿಸಲು ಅಂಗೀಕಾರ ನೀಡಬೇಕು. ಅಲ್ಲದೆ, ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕೆಂಬ ಈ ಪ್ರಸ್ತಾವವನ್ನು ಸಚಿವ ಸಂಪುಟ ಸಭೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಂಡಿಸಿದೆ.

ಆಯೋಗದ ಎರಡು ಶಿಫಾರಸು

- ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಗುರುತಿಸಲ್ಪಟ್ಟ ಪ್ರವರ್ಗ 1ಎ, ಪ್ರವರ್ಗ 1ಬಿ, ಪ್ರವರ್ಗ 2ಎ, ಪ್ರವರ್ಗ 2ಬಿ, ಪ್ರವರ್ಗ 3ಎ ಮತ್ತು ಪ್ರವರ್ಗ 3ಬಿಗಳಿಗೆ ಕೆನೆಪದರ ನೀತಿ ಅಳವಡಿಸಬೇಕು
- ರಾಜ್ಯದಲ್ಲಿ ಜಾರಿಯಲ್ಲಿರುವ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವನ್ನು ಶೇ 32ರಿಂದ ಶೇ 51ಕ್ಕೆ ಹೆಚ್ಚಿಸಬೇಕು

ಇಲಾಖೆಯ ಪ್ರಸ್ತಾವದಲ್ಲಿ ಏನಿದೆ?: ಜನಸಂಖ್ಯೆ ಆಧರಿಸಿ ತಮಿಳುನಾಡು ರಾಜ್ಯ ಶೇ 69ರಷ್ಟು ಮತ್ತು ಜಾರ್ಖಂಡ್ ರಾಜ್ಯ ಶೇ 77ರಷ್ಟು ಮೀಸಲಾತಿಯನ್ನು ಹೆಚ್ಚಿಸಿ ಅಳವಡಿಸಿಕೊಂಡಿವೆ. ಪ್ರಸ್ತುತ ಆಯೋಗವು ಸಲ್ಲಿಸಿರುವ ವರದಿಯಲ್ಲಿ ಮುಖ್ಯ ಜಾತಿಯೊಂದಿಗೆ ಅದರ ಎಲ್ಲ ಉಪ ಜಾತಿಗಳನ್ನು ತಂದಿರುವುದರಿಂದ ಮತ್ತು ವಿವಿಧ ಪ್ರವರ್ಗಗಳಡಿ ಸೇರಿಸಲು ಈ ಹಿಂದಿನ ಆಯೋಗಗಳು ಶಿಫಾರಸು ಮಾಡಿರುವ ಜಾತಿಗಳನ್ನು ಆಯಾ ಪ್ರವರ್ಗಗಳಡಿ ಸೇರಿಸಿರುವುದರಿಂದ ಪ್ರಸ್ತಾವಿತ ಪರಿಷ್ಕೃತ ಮೀಸಲಾತಿ ಪಟ್ಟಿಯಲ್ಲಿ ಜಾತಿ/ಉಪ ಜಾತಿಗಳ ಸಂಖ್ಯೆ ಮತ್ತು ಅದರಡಿಯಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆ ಹೆಚ್ಚಳವಾಗಿದೆ ಎಂದು ವರದಿಯಲ್ಲಿ ನಮೂದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹೇಳಿದೆ.

ಸಂವಿಧಾನದ ವಿಧಿ 103ರಲ್ಲಿ ಯಾವುದೇ ಮೀಸಲಾತಿ ಪಟ್ಟಿಯಲ್ಲಿ ಸೇರ್ಪಡೆ ಆಗದೇ ಇರುವ ಆರ್ಥಿಕ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ಜಾರಿಗೆ ತರಲಾಗಿದೆ.

7ನೇ ಪುಟ ನೋಡಿ

ಅಧ್ಯಯನ ವರದಿಯಲ್ಲಿರುವ ಜಾತಿ ವಿವರ

ಮುಖ್ಯ ಜಾತಿ ಮತ್ತು ಉಪಜಾತಿಗಳು	ಒಟ್ಟು ಜನಸಂಖ್ಯೆ
ವೀರಶೈವ ಲಿಂಗಾಯತ ಮತ್ತು ಇತರೆ 94	66,35,233
ಒಕ್ಕಲಿಗ ಮತ್ತು ಇತರೆ 47	61,68,652
ಕುರುಬ ಮತ್ತು ಇತರೆ 11	43,72,847
ಮರಾತ/ಮರಾಠ ಮತ್ತು ಇತರೆ 8	14,76,894
ಬೆಸ್ತರ್/ಬೆಸ್ತ/ಬೆಸ್ತರ್ ಮತ್ತು ಇತರೆ 47	14,33,309
ಈಡಿಗ ಮತ್ತು ಇತರೆ 24	14,12,493
ವಿಶ್ವಕರ್ಮ ಮತ್ತು ಇತರೆ 45	12,13,347
ಬಲಿಜ ಮತ್ತು ಇತರೆ 34	10,41,352
ಮುಸ್ಲಿಂ ಮತ್ತು ಇತರೆ 99	76,99,425

ವರದಿ ಅನುಷ್ಠಾನಕ್ಕೆ ಹಿಂದುಳಿದವರ ಒತ್ತಡ

'ಜಾತಿ ಜನಗಣತಿ ವರದಿಯನ್ನು ಸರ್ಕಾರ ಕೂಡಲೇ ಚರ್ಚೆಗೆ ಮುಕ್ತಗೊಳಿಸಬೇಕು. ನ್ಯೂನತೆಗಳಿದ್ದರೆ ಸರಿಪಡಿಸಿ, ಅದರ ಶಿಫಾರಸುಗಳನ್ನು ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸುವ ನಿರ್ಣಯವನ್ನು ಬುಧವಾರ ನಡೆದ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಮತ್ತು ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಭೆಯಲ್ಲಿ ಕೈಗೊಂಡಿದೆ.

7ನೇ ಪುಟ ನೋಡಿ

ಮದ್ದೂರು ಜಾತ್ರೆ ಮದ್ದೂರಿನ ಗ್ರಾಮದೇವತೆ ಮದ್ದೂರಮ್ಮನ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಮುಂಜಾನೆ ಕೊಂಡೋತ್ಸವವು ಅದ್ದೂರಿಯಾಗಿ ನೆರವೇರಿತು ಚಿತ್ರ : ಶಶಿಗೌಡ ಮದ್ದೂರು

ಹಿಂದೂ ಟ್ರಸ್ಟ್‌ಗಳಲ್ಲಿ ಮುಸ್ಲಿಮರು ಇರುವರೇ: 'ಸುಪ್ರೀಂ' ಪ್ರಶ್ನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಹಿಂದೂಗಳ ಧಾರ್ಮಿಕ ಟ್ರಸ್ಟ್‌ಗಳ ಭಾಗವಾಗಲು ಮುಸ್ಲಿಮರಿಗೂ ಅವಕಾಶ ಕಲ್ಪಿಸಲಾಗುವುದೇ ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರವನ್ನು ಬುಧವಾರ ಪ್ರಶ್ನಿಸಿದೆ.

ವಕ್ಫ್ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠವು ಈ ಪ್ರಶ್ನೆ ಎತ್ತಿದೆ.

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ವಕ್ಫ್ ಮಂಡಳಿ ಹಾಗೂ ಕೇಂದ್ರ ವಕ್ಫ್ ಪರಿಷತ್ತಿನ ಎಲ್ಲ ಸದಸ್ಯರು ಮುಸ್ಲಿಮರಾಗಿರಬೇಕು ಎಂದು ಪೀಠವು ಅನಿಸಿಕೆ ವ್ಯಕ್ತಪಡಿಸಿತು.

ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಮುಸ್ಲಿಮರಲ್ಲಿ ಬಹುದೊಡ್ಡ ವರ್ಗವೊಂದಕ್ಕೆ ವಕ್ಫ್ ಕಾಯ್ದೆ ಬೇಕಾಗಿಲ್ಲ ಎಂದರು.

7ನೇ ಪುಟ ನೋಡಿ

ಬಳಕೆಯ ಕಾರಣದಿಂದಾಗಿ ವಕ್ಫ್...

ಹಲವು ಸಂದರ್ಭಗಳಲ್ಲಿ ಆಸ್ತಿಯನ್ನು ವಕ್ಫ್ ಎಂದು ನೋಂದಾಯಿಸಲು ಅಗತ್ಯ ದಾಖಲೆಗಳು ಇರುವುದಿಲ್ಲ, ಹೀಗಿರುವಾಗ 'ಬಳಕೆಯ ಕಾರಣದಿಂದಾಗಿ ವಕ್ಫ್' ಎಂಬ ಪರಿಕಲ್ಪನೆಯನ್ನು ನಿರಾಕರಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಕೂಡ ನ್ಯಾಯಪೀಠವು ಕೇಂದ್ರದ ಮುಂದೆ ಇರಿಸಿದೆ.

'ಬಳಕೆಯ ಕಾರಣದಿಂದಾಗಿ ವಕ್ಫ್' ಅಂದರೆ, ಆಸ್ತಿಯ ಮಾಲೀಕರು ಆ ಆಸ್ತಿಯನ್ನು ವಕ್ಫ್ ಉದ್ದೇಶಕ್ಕಾಗಿ ನೀಡಿದ್ದಕ್ಕೆ ಲಿಖಿತ ದಾಖಲೆ ಇಲ್ಲದಿದ್ದರೂ ಅದು ಬಹಳ ಕಾಲದಿಂದ ವಕ್ಫ್ ಉದ್ದೇಶಕ್ಕಾಗಿ ನಿರಂತರವಾಗಿ ಬಳಕೆಯಾಗುತ್ತ ಇದ್ದರೆ ಅದನ್ನು ವಕ್ಫ್ ಎಂದೇ ಪರಿಗಣಿಸುವುದು. 'ಇಂತಹ ಆಸ್ತಿಗಳನ್ನು ನೀವು ಹೇಗೆ ನೋಂದಾಯಿಸುತ್ತೀರಿ? ಅವರ ಬಳಿ ಯಾವ ದಾಖಲೆಗಳು ಇರುತ್ತವೆ? ಕೆಲವೆಡೆ ದುರ್ಬಳಕೆ ಆಗಿದೆ ನಿಜ. ಆದರೆ ನೈಜ ಉದ್ದೇಶಕ್ಕೆ ಬಳಕೆ ಆಗುತ್ತಿರುವುದೂ ಇದೆ. ಬಳಕೆಯ ಕಾರಣದಿಂದಾಗಿನ ವಕ್ಫ್‌ಗೆ ಮಾನ್ಯತೆ ಇದೆ. ಇದನ್ನು ಇಲ್ಲವಾಗಿಸಿದರೆ ಸಮಸ್ಯೆ ಆಗುತ್ತದೆ' ಎಂದು ಹೇಳಿತು.

ಮುಸ್ಲಿಮರಿಗೆ ಗುತ್ತಿಗೆ: ರಾಜ್ಯಪಾಲರ ತಕರಾರು

ಪ್ರಜಾವಾಣಿ ವಾರ್ತೆ

ಥಾವರಚಂದ್ ಗೆಹಲೋತ್

ಬೆಂಗಳೂರು: ಕಾಮಗಾರಿಗಳ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇಕಡ 4ರಷ್ಟು ಮೀಸಲಾತಿ ಕಲ್ಪಿಸುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ತಕರಾರು ಎತ್ತಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಮಸೂದೆಗೆ ಅಂಕಿತ ಹಾಕಲು ನಿರಾಕರಿಸಿದ್ದಾರೆ.

'ಸಾಂವಿಧಾನಿಕ ತೊಡಕು ಮತ್ತು ನಿರ್ಬಂಧಗಳಿರುವುದರಿಂದ ಪ್ರಸ್ತಾವಿತ ಮಸೂದೆಗೆ ಅಂಕಿತ ಹಾಕುವ ಬದಲು, ರಾಷ್ಟ್ರಪತಿಯ ಪರಿಶೀಲನೆಗೆ ಬಿಡುವುದು ಸೂಕ್ತವೆಂದು ಭಾವಿಸಿದ್ದೇನೆ' ಎಂದೂ ರಾಜ್ಯಪಾಲರು ಸರ್ಕಾರಕ್ಕೆ ಬರೆದ ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಸೇರಿದ ಗುತ್ತಿಗೆದಾರರಿಗೆ ₹1 ಕೋಟಿ ವೆಚ್ಚದವರೆಗಿನ ಕಾಮಗಾರಿಗಳಿಗೆ ಮಾತ್ರ ಮೀಸಲಾತಿ ಕಲ್ಪಿಸಲು ಹಿಂದೆ ಅವಕಾಶ ಇತ್ತು. ಈ ಮಿತಿಯನ್ನು ₹2 ಕೋಟಿಗೆ ಹೆಚ್ಚಿಸುವ ಜೊತೆಗೆ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ಶೇ 4ರಷ್ಟು ಮೀಸಲಾತಿ ಅನ್ವಯವಾಗುವಂತೆ ಮಾಡಲು ಕೆಟಿಟಿಪಿ ಕಾಯ್ದೆಯ ಸೆಕ್ಷನ್ 6ಕ್ಕೆ ತಿದ್ದುಪಡಿ ತರುವ ಮಸೂದೆಗೆ ವಿಧಾನಮಂಡಲ ಅಂಗೀಕಾರ ನೀಡಿತ್ತು.

7ನೇ ಪುಟ ನೋಡಿ

ತುಂಗಭದ್ರಾ ಅಣೆಕಟ್ಟೆ ಸಮೀಪದ ಗುಡ್ಡದಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆ ಸಮೀಪದ ಗುಡ್ಡದಲ್ಲಿ ಬುಧವಾರ ಸಂಜೆ ಕಾಳ್ಗಿಚ್ಚು ಕಾಣಿಸಿದ್ದು, ಅದನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹಾಗೂ ಅರಣ್ಯ ಸಿಬ್ಬಂದಿ ಪ್ರಯತ್ನಿಸಿದರು.

ತುಂಗಭದ್ರಾ ಜಲಾಶಯದ ಬಲದಂಡೆಯ ಮೇಲೆ ಗುಡ್ಡಗಳ ಶ್ರೇಣಿಯಿದ್ದು, ಒಂದು ಗುಡ್ಡದ ಮೇಲೆ ವೈಕುಂಠ ಅತಿಥಿಗೃಹ ಮತ್ತ ಪವನ ವಿದ್ಯುತ್ ಯಂತ್ರಗಳಿವೆ. ವಿಜಯಪುರ–ಚಿತ್ರದುರ್ಗ ಹೆದ್ದಾರಿ ಪಕ್ಕದ ಇನ್ನೊಂದು ಗುಡ್ಡದಲ್ಲಿ ಈ ಬೆಂಕಿ ಕಾಣಿಸಿಕೊಂಡಿದೆ. ಅಲ್ಲೂ ಒಂದು ಪವನ ವಿದ್ಯುತ್ ಯಂತ್ರವಿದೆ. ಗಾಳಿಯ ರಭಸಕ್ಕೆ ಪವನ ವಿದ್ಯುತ್ ಯಂತ್ರದ ರೆಕ್ಕೆಗಳು ತಿರುಗುತ್ತಿರುವಂತೆಯೇ ಬೆಂಕಿಯು ವ್ಯಾಪಿಸುವ ಭೀತಿ ಇದೆ.

'ಇದು ಅರಣ್ಯ ಇಲಾಖೆಗೆ ಸೇರಿದ ಪ್ರದೇಶ ಅಲ್ಲ. ಆದರೆ, ಅಲ್ಲಿ ಕಾಡುಪ್ರಾಣಿಗಳು ಇವೆ. ಅವುಗಳ ಜೀವಕ್ಕೆ ಅಪಾಯ ಆಗಬಾರದು ಎಂಬ ಕಾರಣಕ್ಕೆ ಅಗ್ನಿಶಾಮಕ ಸಿಬ್ಬಂದಿ ಜತೆಗೆ ಅರಣ್ಯ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ನಿರತರಾಗಿದ್ದಾರೆ. ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಸಾಧ್ಯತೆಯಿದೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್ ತಿಳಿಸಿದರು.

ನೀರು ಪೂರೈಕೆ ಪ್ರಮಾಣ ಕಡಿಮೆ; ಬಿಲ್ ಮಾತ್ರ ದುಬಾರಿ– ಬಳಕೆದಾರರ ಆರೋಪ

ಕೋಟಿ ಕೊಟ್ಟರೂ ಮನೆಗೆ ಬಾರದ 'ಕಾವೇರಿ'

• ಗಾಣಧಾಳು ಶ್ರೀಕಂಠ

ಬೆಂಗಳೂರು: 'ಕೋಟಿ ರೂಪಾಯಿ ಕೊಟ್ಟು ಕಾವೇರಿ ಸಂಪರ್ಕ ಪಡೆದರೂ ನಮಗೆ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ, ಮನೆಗಳಿಗೆ ಸರಬರಾಜು ಮಾಡುತ್ತಿರುವ ನೀರು ಸಾಕಾಗುತ್ತಿಲ್ಲ...' ಇದು ವೈಟ್‌ಫೀಲ್ಡ್, ಬೆಳ್ಳಂದೂರು ಸುತ್ತಮುತ್ತಲಿನ ಅಪಾರ್ಟ್‌ಮೆಂಟ್ ನಿವಾಸಿಗಳ ದೂರು.

ಈ ಭಾಗದ ಕೆಲವು ವಸತಿ ಸಮುಚ್ಚಯಗಳಿಗೆ ಮೂರ್ನಾಲ್ಕು ವರ್ಷಗಳಿಂದ ಬರುತ್ತಿದ್ದ ಕಾವೇರಿ ನೀರು, 5ನೇ ಹಂತದ ಯೋಜನೆ ಆರಂಭವಾದ ಮೇಲೆ ನಿಂತೇ ಹೋಗಿದೆ. ಇನ್ನೂ ಕೆಲವು ಅಪಾರ್ಟ್‌ಮೆಂಟ್‌ಗಳಿಗೆ ಸರಿಯಾಗಿ ತಲಾವಾರು ನೀರು ಪೂರೈಕೆಯಾಗುತ್ತಿಲ್ಲ. ಮಹದೇವಪುರ ಭಾಗದಲ್ಲಿ ಹೊಸ ಸಂಪರ್ಕಕ್ಕೆ ಕೊಳವೆಗಳನ್ನು ಜೋಡಿಸಲು ರಸ್ತೆಗಳನ್ನು ಅಗೆದ ನಂತರ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿದೆ ಎಂಬುದು ಸ್ಥಳೀಯರ ಆರೋಪ.

14 ತಿಂಗಳಿನಿಂದ ನೀರಿಲ್ಲ: 'ವೈಟ್‌ಫೀಲ್ಡ್‌ನ ತೂಬರಹಳ್ಳಿ ಸಮೀಪದ ಕೀರ್ತಿ ಗಾರ್ಡೇನಿಯಾ ಅಪಾರ್ಟ್‌ಮೆಂಟ್‌ಗೆ ಕಾವೇರಿ ನೀರು ಪೂರೈಕೆಯಾಗುತ್ತಿತ್ತು. ಕಾವೇರಿ 5ನೇ ಹಂತದ ಯೋಜನೆಯಡಿ ಹೊಸ ಕೊಳವೆಗಳನ್ನು ಜೋಡಿಸಿದ ನಂತರ, ಅಪಾರ್ಟ್‌ಮೆಂಟ್‌ಗೆ ನೀಡಿದ್ದ ಹಳೆಯ ನೀರಿನ ಸಂಪರ್ಕ ನಿಲ್ಲಿಸಿ, ಹೊಸ ಸಂಪರ್ಕ ಕಲ್ಪಿಸಲಾಯಿತು. ಆಗಿನಿಂದ ಕಾವೇರಿ ನೀರು ಬರುತ್ತಿಲ್ಲ. ಟ್ಯಾಂಕರ್ ನೀರಿನ ಮೇಲೆ ಅವಲಂಬನೆಯಾಗಿದ್ದೇವೆ' ಎಂದು ನಿವಾಸಿ ಮನೀಶ್ ತ್ಯಾಗಿ ಹೇಳುತ್ತಾರೆ.

ಕಾಮಗಾರಿ ವಿಳಂಬದಿಂದ ಬೇಸತ್ತ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರು, 'ಒಂಬತ್ತು ತಿಂಗಳಿಗೂ ಹೆಚ್ಚು ಕಾಲ ಬಾಹ್ಯಾಕಾಶದಲ್ಲಿ ಸಿಲುಕಿದ್ದ ಗಗನ-ಯಾತ್ರಿಗಳನ್ನು ಯಶಸ್ವಿಯಾಗಿ ಭೂಮಿಗೆ ಕರೆತರಲಾಯಿತು. ಆದರೆ, 14 ತಿಂಗಳ ಹಿಂದೆ 1 ಕಿ.ಮೀ ದೂರದಲ್ಲಿ ಕಡಿತಗೊಂಡಿರುವ ಕಾವೇರಿ ಸಂಪರ್ಕವನ್ನು ಸರಿಪಡಿಸಿ ನೀರನ್ನು ಮರಳಿ ಪಡೆಯಲು ನಮಗೆ ಸಾಧ್ಯವಾಗುತ್ತಿಲ್ಲ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪೋಸ್ಟ್‌ನಲ್ಲಿ 2024ರ ಜನವರಿಯಿಂದ 2025ರ ಮಾರ್ಚ್‌ವರೆಗೆ ಏನೆಲ್ಲ ಕಾಮಗಾರಿ ನಡೆದಿದೆ ಎಂಬ ಮಾಹಿತಿಯನ್ನೂ ಹಂಚಿಕೊಂಡು, ಜಲಮಂಡಳಿ ಅಧ್ಯಕ್ಷರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಟ್ಯಾಗ್ ಮಾಡಿದ್ದಾರೆ.

ವರ್ತೂರು ಮುಖ್ಯ ರಸ್ತೆಯಲ್ಲಿರುವ ಶ್ರೀರಾಮ್ ಸಮೃದ್ಧಿ ಅಪಾರ್ಟ್‌ಮೆಂಟ್‌ಗೂ ಒಂದು ವರ್ಷದಿಂದ ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ. ಇದೂ ಕೂಡ, ಕೀರ್ತಿ ಗಾರ್ಡೇನಿಯಾ ಅಪಾರ್ಟ್‌ಮೆಂಟ್ ಕತೆಯೇ.

'ನಮ್ಮದು ಮಾತ್ರವಲ್ಲ, ಸುತ್ತಮುತ್ತಲಿನ ಏಳೆಂಟು ಅಪಾರ್ಟ್‌ಮೆಂಟ್ ಗಳಿಗೂ ಕಾವೇರಿ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ಈ ಬಗ್ಗೆ ಜಲಮಂಡಳಿಗೆ ದೂರು ನೀಡಿದ್ದಾಗಿದೆ. ಸಮಸ್ಯೆ ಬಗೆಹರಿದಿಲ್ಲ' ಎನ್ನುತ್ತಾರೆ ಶ್ರೀರಾಮ್ ಸಮೃದ್ಧಿ ಅಪಾರ್ಟ್‌ಮೆಂಟ್ ನಿವಾಸಿ ಸಲೀಂ.

ಕಡಿಮೆ ನೀರು ಪೂರೈಕೆ: ಮಹದೇವಪುರ ವ್ಯಾಪ್ತಿಯಲ್ಲಿ ವೈಟ್‌ಫೀಲ್ಡ್ ಮುಖ್ಯ ರಸ್ತೆಯಲ್ಲಿರುವ ಟ್ರೈಫೆಕ್ಟ ಸ್ಟಾರ್‌ಲೈಟ್ ಅಪಾರ್ಟ್‌ಮೆಂಟ್‌ನಲ್ಲಿ ವಾರಕ್ಕೆ ಎರಡು ದಿನ ಕಾವೇರಿ ನೀರು ಪೂರೈಕೆಯಾಗುತ್ತದೆ. ಆದರೆ, ಜಲಮಂಡಳಿ ತಲಾವಾರು ನಿಗದಿಪಡಿಸಿರುವಂತೆ ಪ್ರತಿ ಮನೆಗೆ ನಿತ್ಯ 200 ಲೀಟರ್ ನೀರು ಪೂರೈಕೆಯಾಗುತ್ತಿಲ್ಲ ಎಂಬುದು ನಿವಾಸಿಗಳ ಆರೋಪ.

'ಜಲಮಂಡಳಿ ಪ್ರಕಾರ, ನಾಲ್ಕು ಜನರಿರುವ ಒಂದು ಮನೆಗೆ ಪ್ರತಿ ನಿತ್ಯ 200 ಲೀಟರ್ ನೀರು ಪೂರೈಕೆ ನಿಗದಿಪಡಿಸಿದೆ. ಆದರೆ, ನಮ್ಮ ಅಪಾರ್ಟ್‌ಮೆಂಟ್‌ನ ಪ್ರತಿ ಮನೆಗೆ, ನಿತ್ಯ 172 ಲೀಟರ್‌ಗಿಂತ ಹೆಚ್ಚು ನೀರು ಪೂರೈಕೆಯಾಗುತ್ತಿಲ್ಲ' ಎಂದು ಟ್ರೈಫೆಕ್ಟ ಸ್ಟಾರ್‌ಲೈಟ್ ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ಬೆಂಗಳೂರು ಅಪಾರ್ಟ್‌ಮೆಂಟ್‌ಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿಷ್ಣು ಗಟ್ಟುಪಲ್ಲಿ ಅಂಕಿ ಅಂಶಗಳನ್ನು ತೆರೆದಿಡುತ್ತಾರೆ.

'ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ 172 ಫ್ಲ್ಯಾಟ್‌ಗಳಿವೆ. ಪ್ರತಿ ಫ್ಲ್ಯಾಟ್‌ನಲ್ಲಿ ಸರಾಸರಿ 4 ಮಂದಿ ಇರುತ್ತಾರೆಂದು ಅಂದಾಜಿಸಿದರೆ, ಜಲಮಂಡಳಿ ಪ್ರಕಾರ, ನಿತ್ಯ, ಪ್ರತಿ ವ್ಯಕ್ತಿಗೆ 50 ಲೀಟರ್ ನೀರು ಪೂರೈಸಬೇಕು. ಆದರೆ ಈಗ ಪೂರೈಕೆಯಾಗುತ್ತಿರುವುದು 43 ಲೀಟರ್ ಮಾತ್ರ' ಎಂದು ಅವರು ಲೆಕ್ಕಾಚಾರ ನೀಡುತ್ತಾರೆ.

'ನೀರು ಪೂರೈಕೆ ಕಡಿಮೆಯಾಗಿರುವುದರಿಂದ, ಟ್ಯಾಂಕರ್ ನೀರು ತರಿಸಿಕೊಳ್ಳಬೇಕಿದೆ. ನೀರಿಗಾಗಿ ತಿಂಗಳಿಗೆ ₹3 ಸಾವಿರದಿಂದ ₹4 ಸಾವಿರದವರೆಗೆ ಹೆಚ್ಚುವರಿ ವೆಚ್ಚವಾಗುತ್ತಿದೆ. ಕಾವೇರಿ ಸಂಪರ್ಕ ಪಡೆಯಲು ₹1.4 ಕೋಟಿ ಶುಲ್ಕ ಪಾವತಿಸಿದ್ದರೂ, ಟ್ಯಾಂಕರ್ ನೀರು ತರಿಸಿಕೊಳ್ಳುವುದು ತಪ್ಪಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಈ ಅಪಾರ್ಟ್‌ಮೆಂಟ್‌ಗೆ ಎಂಟು ವರ್ಷಗಳ ಹಿಂದೆ ಕಾವೇರಿ ಸಂಪರ್ಕ ಪಡೆಯಲಾಗಿದೆ. ಕಳೆದ ವರ್ಷದವರೆಗೂ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿತ್ತು. ವರ್ಷದಿಂದ ಈಚೆಗೆ ಸಮಸ್ಯೆಯಾಗಿದೆ. ಈ ಬಗ್ಗೆ ಜಲಮಂಡಳಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಅಲ್ಲಿನ ನಿವಾಸಿಗಳು.



ಕೀರ್ತಿ ಗಾರ್ಡೇನಿಯಾ ಅಪಾರ್ಟ್‌ಮೆಂಟ್‌ನ ನಿವಾಸಿಗಳು 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್

'ನೀರಿನ ಪ್ರಮಾಣ ಹೆಚ್ಚಿಸಬೇಕು'

ಆರ್.ಆರ್.ನಗರ ವಲಯದ ಕೆಂಗುಂಟೆ ವ್ಯಾಪ್ತಿಯಲ್ಲಿ, ಕೆ.ಆರ್.ಪುರ ಭಾಗದ ರಾಮಮೂರ್ತಿ ನಗರ, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ನೀರು ಬರದಿದ್ದರೂ ದುಬಾರಿ ಬಿಲ್ ಬರುತ್ತಿದೆ ಎಂದು ನಾಗರಿಕರು ಆರೋಪಿಸುತ್ತಾರೆ.

ಕೆಂಗುಂಟೆಯಲ್ಲಿ ಹಳೇ ಪೈಪುಗಳನ್ನು ತೆಗೆದು ಹೊಸ ಕೊಳವೆ ಅಳವಡಿಸಿದ ಮೇಲೆ, ನೀರಿನ ಪೂರೈಕೆ ಪ್ರಮಾಣ ಕಡಿಮೆಯಾಗಿದೆ. ಬಿಡುವ ಅವಧಿಯೂ ಕಡಿಮೆಯಾಗಿದೆ. ಬಿಲ್ ಮಾತ್ರ ಹೆಚ್ಚು ಬರುತ್ತದೆ ಎನ್ನುತ್ತಾರೆ ನಾಗರಿಕರು.

ಜಲಮಂಡಳಿ ನಗರದ ಕೆಲವೆಡೆ ವಾರಕ್ಕೆ ಎರಡು ದಿನ, ಇನ್ನೂ ಕೆಲವು ಕಡೆ ಮೂರು ದಿನ ಕಾವೇರಿ ನೀರು ಪೂರೈಸುತ್ತಿದೆ. ಆದರೆ, ನೀರು ಪೂರೈಕೆ ಅವಧಿ ತೀರಾ ಕಡಿಮೆ. ಪೂರೈಕೆಯಾಗುವ ನೀರಿನ ಪ್ರಮಾಣವೂ ತೀರಾ ಕಡಿಮೆ ಇರುತ್ತದೆ ಎಂದು ದೂರುತ್ತಾರೆ.

ಕಾವೇರಿ 5ನೇ ಹಂತದ ಯೋಜನೆಯಿಂದಾಗಿ ನಗರಕ್ಕೆ 775 ಎಂಎಲ್‌ಡಿ ನೀರು ಲಭ್ಯವಾಗಿದೆ. ಈಗ ಸುಮಾರು 150 ಎಂಎಲ್‌ಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನೀರಿಗೆ ಕೊರತೆ ಇಲ್ಲ. ಎಲ್ಲಿ ನೀರಿನ ಕೊರತೆ ಇದೆ, ಪೂರೈಕೆಯಲ್ಲಿ ಸಮಸ್ಯೆಯಾಗುತ್ತಿದೆ ಎಂಬುದನ್ನು ಮಂಡಳಿಯ ಗಮನಕ್ಕೆ ತಂದರೆ, ಸಮಸ್ಯೆಯನ್ನು ಸರಿಪಡಿಸಲಾಗುತ್ತದೆ.
ರಾಮ್‌ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ

'ಜಿಎಸ್‌ಟಿ ಪಾವತಿ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಸತಿ ಸಂಕೀರ್ಣದ ಕಟ್ಟಡ ನಿರ್ಮಾಣಕ್ಕೂ ಮುನ್ನವೇ ಫ್ಲ್ಯಾಟ್ ಕಾಯ್ದಿರಿಸಿದ್ದ ಅಂತಹ ಸಮಯದಲ್ಲಿ ಖರೀದಿದಾರರು; ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸುವುದು ಕಡ್ಡಾಯ' ಎಂದು ಹೈಕೋರ್ಟ್ ಆದೇಶಿಸಿದೆ.

'ಕೇಂದ್ರ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017ರ (ಜಿಎಸ್‌ಟಿ) ಅನ್ವಯ ಫ್ಲ್ಯಾಟ್ ನೋಂದಣಿಗೂ ಮುನ್ನ ಜಿಎಸ್‌ಟಿ ಪಾವತಿಸಬೇಕು' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೀಡಿದ್ದ ನೋಟಿಸ್ ಪ್ರಶ್ನಿಸಿ ಮಲ್ಲತ್ತಹಳ್ಳಿಯ ಬಿ.ಜಿ.ಪರಮೇಶ್ವರ ಸೇರಿ ಇತರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕಟ್ಟಡದ ಸಿಸಿ (ಕಂಪ್ಲೀಶನ್ ಸರ್ಟಿಫಿಕೇಟ್-ಪೂರ್ಣತಾ ಪ್ರಮಾಣ ಪತ್ರ) ವಿತರಣೆಗೂ ಮುನ್ನ ಭಾಗಶಃ ಅಥವಾ ಪೂರ್ಣ ಹಣ ಪಾವತಿಸಿದ್ದರೆ ಅದು ಸೇವೆಯಾಗಲಿದೆ. ಅದಕ್ಕೆ ಜಿಎಸ್‌ಟಿ ಅನ್ವಯವಾಗುತ್ತದೆ' ಎಂದು ತಿಳಿಸಿದೆ.

ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಜಿಎಸ್‌ಟಿ ನಿಬಂಧನೆ ಅನುಸಾರ; ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಮೊದಲೇ ಒಪ್ಪಂದ ಮಾಡಿಕೊಂಡರೆ ಅದು ಕೆಲಸದ ಒಪ್ಪಂದ ಎನಿಸುತ್ತದೆ. ಅದಕ್ಕೆ ನಿರ್ದಿಷ್ಟ ದರದಲ್ಲಿ ಸೇವಾ ತೆರಿಗೆ ಪಾವತಿಸಲೇಬೇಕಾಗುತ್ತದೆ' ಎಂದು ವಿವರಿಸಿದೆ.

ಎಲ್ಲ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಪೀಠ, 'ಅರ್ಜಿದಾರರು ಈಗಾಗಲೇ ಫ್ಲ್ಯಾಟ್ ಹಂಚಿಕೆಯನ್ನು ನೋಂದಾಯಿಸಿಕೊಂಡಿಲ್ಲ ಎಂದಾದರೆ ಬಿಡಿಎ ಕೋರಿರುವ ಜಿಎಸ್‌ಟಿಯನ್ನು ಕಾನೂನಿನ ಪ್ರಕಾರ ಪಾವತಿಸಿದ ನಂತರ ಫ್ಲ್ಯಾಟ್ ವಿತರಣೆ ಸೇರಿದಂತೆ ವಹಿವಾಟು ಪೂರ್ಣಗೊಳಿಸಿಕೊಳ್ಳಲು ಅರ್ಹರಾಗಿರುತ್ತಾರೆ' ಎಂದು ಸ್ಪಷ್ಟಪಡಿಸಿದೆ.

ಮಂಜುನಾಥ ಬಡಾವಣೆ ನಿವಾಸಿಗಳ ಆಕ್ರೋಶ

ವಾಸನೆಯುಕ್ತ ನೀರು ಪೂರೈಕೆ

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ಸಮೀಪದ ದೇವಸಂದ್ರ ಮುಖ್ಯರಸ್ತೆಯ ಕಾವೇರಿ ಬೇಕರಿ ಹಿಂಭಾಗದಲ್ಲಿರುವ ಮಂಜುನಾಥ ಬಡಾವಣೆಗೆ ಪೂರೈಕೆಯಾಗುತ್ತಿರುವ ಕಾವೇರಿ ನೀರು ದುರ್ವಾಸನೆಯಿಂದ ಕೂಡಿದೆ ಎಂದು ನಾಗರಿಕರು ದೂರಿದ್ದಾರೆ.

'ಮೂರು ತಿಂಗಳಿನಿಂದ ನೀರು ಇದೇ ರೀತಿ ವಾಸನೆ ಬರುತ್ತಿದೆ. ನೀರು ಬಳಕೆಗೆ ಯೋಗ್ಯವಾಗಿಲ್ಲ' ಎಂದು ಸ್ಥಳೀಯರು ಹೇಳುತ್ತಾರೆ. 'ಇಂಥ ನೀರು ಬಳಸುವುದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ' ಎಂಬುದು ಅವರ ಆತಂಕವಾಗಿದೆ.

'ಸಂಪ್ ಮತ್ತು ಮನೆಯ ನೀರಿನ ಟ್ಯಾಂಕ್‌ಗಳಲ್ಲಿ ಸಂಗ್ರಹಿಸುವ ಕಾವೇರಿ ನೀರಿನಿಂದಲೂ ದುರ್ವಾಸನೆ ಬರುತ್ತಿದೆ.

ಕಲುಷಿತ ನೀರು

ಇದರಿಂದಾಗಿ ವಾರಕ್ಕೊಮ್ಮೆ ನೀರಿನ ಟ್ಯಾಂಕ್ ಮತ್ತು ಸಂಪ್‌ಗಳನ್ನು ಸ್ವಚ್ಛಗೊಳಿಸುತ್ತಿದ್ದೇವೆ' ಎನ್ನುತ್ತಾರೆ ಸ್ಥಳೀಯ ನಿವಾಸಿ ಸುರೇಶ್.

'ಈ ಸಮಸ್ಯೆಯನ್ನು ಜಲಮಂಡಳಿ ಅಧಿಕಾರಿಗಳ ಗಮನಕ್ಕೆ ತಂದು, ಪರಿಹರಿಸುವಂತೆ ಮನವಿ ಮಾಡಿದ್ದೇವೆ. ಆದರೆ, ಏನೂ ಕ್ರಮ ಕೈಗೊಂಡಿಲ್ಲ' ಎಂದು ಸ್ಥಳೀಯ ನಿವಾಸಿ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

'ಶಾಸಕ ಬೈರತಿ ಬಸವರಾಜ ಅವರು ಕಾರ್ಯಕ್ರಮವೊಂದಕ್ಕೆ ಇಲ್ಲಿಗೆ ಭೇಟಿ ನೀಡಿದ್ದಾಗ, ಈ ಸಮಸ್ಯೆ ಬಗ್ಗೆ ಮನವರಿಕೆ ಮಾಡಿದ್ದೆವು. ಆಗ ಅವರು ಸ್ಥಳದಲ್ಲಿಯೇ ಜಲಮಂಡಳಿ ಅಧಿಕಾರಿಗಳಿಗೆ ಕರೆ ಮಾಡಿ ಸಮಸ್ಯೆ ಪರಿಹರಿಸುವಂತೆ ತಾಕೀತು ಮಾಡಿದ್ದರು. ಈವರೆಗೂ ಸಮಸ್ಯೆ ಬಗೆಹರಿದಿಲ್ಲ' ಎಂದು ಸ್ಥಳೀಯ ನಿವಾಸಿಗಳು ದೂರಿದರು.

ಸಮಸ್ಯೆ ಕುರಿತು ಜಲಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವೆಂಕಟರಮಣ ಅವರನ್ನು ಕೇಳಿದಾಗ, 'ಕಲುಷಿತ ನೀರು ಬರುತ್ತಿದೆ ಎಂದು ಹೇಳಿದ್ದಾರೆ. ಆದರೆ, ಈ ಸಂಬಂಧ ಲಿಖಿತವಾಗಿ ದೂರು ಬಂದಿಲ್ಲ' ಎಂದು ಉತ್ತರ ನೀಡಿದರು. ಕಾರ್ಯಪಾಲಕ ಎಂಜಿನಿಯರ್ ಚನ್ನಬಸವಯ್ಯ ಅವರು, 'ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಸಮಸ್ಯೆ ಪರಿಹರಿಸುತ್ತೇವೆ' ಎಂದು ಅವರು ತಿಳಿಸಿದರು.

ಬೀದರ್–ಬೆಂಗಳೂರು ವಿಮಾನಯಾನಕ್ಕೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಬೀದರ್: ಒಂದೂವರೆ ವರ್ಷದ ಹಿಂದೆ ಸ್ಥಗಿತಗೊಂಡಿದ್ದ ಬೀದರ್–ಬೆಂಗಳೂರು ನಾಗರಿಕ ವಿಮಾನಯಾನ ಸೇವೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದ ವಿಮಾನ ನಿಲ್ದಾಣದಲ್ಲಿ ಬುಧವಾರ ಸಂಜೆ ಕೇಕ್ ಕತ್ತರಿಸಿ ಚಾಲನೆ ನೀಡಿದರು.

ಏ. 17ರಂದು ಬೀದರ್‌ನಿಂದ ಬೆಂಗಳೂರಿಗೆ ಪಯಣ ಬೆಳೆಸಲಿರುವ ಐದು ಜನರಿಗೆ ಬೋರ್ಡಿಂಗ್ ಪಾಸ್ ವಿತರಿಸಿ, ವಿಧ್ಯುಕ್ತವಾಗಿ ಹಸಿರು ನಿಶಾನೆ ತೋರಿದರು.

ಸ್ಟಾರ್ ಏರ್ ವಿಮಾನವು ಪ್ರತಿದಿನ ಬೆಳಿಗ್ಗೆ 7.30ಕ್ಕೆ ಬೆಂಗಳೂರಿನಿಂದ ಹೊರಟು ಬೆಳಿಗ್ಗೆ 8.45ಕ್ಕೆ ಬೀದರ್ ತಲುಪಲಿದೆ. ಅದೇ ದಿನ ಬೆಳಿಗ್ಗೆ 9.10ಕ್ಕೆ ಬೀದರ್‌ನಿಂದ ಹೊರಟು ಬೆಳಿಗ್ಗೆ 10.25ಕ್ಕೆ ಬೆಂಗಳೂರು ಸೇರಲಿದೆ.

ಸುದ್ದಿ 2 ನಿಮಿಷ

ಬೈಕ್ ಟ್ಯಾಕ್ಸಿ ಸೇವೆ ನಿಷೇಧ ಮರುಪರಿಶೀಲಿಸಲು ಮನವಿ

ಬೆಂಗಳೂರು: ಬೈಕ್ ಟ್ಯಾಕ್ಸಿ ಸೇವೆಗಳನ್ನು ನಿಷೇಧಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಮರುಪರಿಶೀಲಿಸಬೇಕು ಎಂದು ಒತ್ತಾಯಿಸಿ ನಗರದ ಬೈಕ್ ಟ್ಯಾಕ್ಸಿ ಮಹಿಳಾ ಚಾಲಕರು ನಗರದ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ.

ಮೇ ಮಧ್ಯ ಭಾಗದೊಳಗೆ ಎಲ್ಲ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸುವುದಾಗಿ ಸರ್ಕಾರ ಹೇಳಿದೆ. ಅದಕ್ಕೆ ಸಂಬಂಧಿಸಿದಂತೆ ಹೊಸ ನಿಯಮಗಳನ್ನು ರೂಪಿಸಲು ಸರ್ಕಾರವನ್ನು ಒತ್ತಾಯಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ. ಮೇ ತಿಂಗಳ ಗಡುವು ಹತ್ತಿರ ಬರುತ್ತಿರುವುದರಿಂದ ಸರ್ಕಾರವು ಈ ನಿರ್ಧಾರವನ್ನು ಮರುಪರಿಶೀಲಿಸಬೇಕು. ಬೈಕ್ ಟ್ಯಾಕ್ಸಿಯ ಆದಾಯವನ್ನೇ ನಂಬಿ ಬದುಕುತ್ತಿರುವವರು ಬೀದಿಗೆ ಬೀಳುವಂತಾಗಬಾರದು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಪರ್ಯಾಯ ಉದ್ಯೋಗಗಳ ಕೊರತೆ ಇದೆ. ಈ ಆದೇಶವು ಅವಲಂಬಿತರಿಗೆ ಆತಂಕವನ್ನು ಸೃಷ್ಟಿಸಿದೆ. ಹಾಗಾಗಿ ಸ್ಪಷ್ಟ ನಿಯಮಗಳನ್ನು ರೂಪಿಸಬೇಕು. ನಿಯಮ ಪಾಲಿಸುವವರ ಪರವಾನಗಿ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಹಳೆ ವಸ್ತ್ರ ಮರುಬಳಕೆ ಅಭಿಯಾನ

ಬೆಂಗಳೂರು: ಬಿಬಿಸಿ ಮೀಡಿಯಾ ಆ್ಯಕ್ಷನ್ ದತ್ತಿ ಸಂಸ್ಥೆಯು ಹಳೆ ವಸ್ತ್ರದ ಮರುಬಳಕೆ ಅಭಿಯಾನದಡಿ 'ಡಿಸಿಸ್ ಕಾರ್ಡ್' ಪರಿಚಯಿಸಿದ್ದು, ಸಂಗ್ರಹಿಸಿ ಸಂಸ್ಕರಿಸಿ ಬಟ್ಟೆಯನ್ನು ಚಿಂದಿ ಆಯುವವರಿಗೆ ಒದಗಿಸುವ ಮೂಲಕ ಆದಾಯಕ್ಕೆ ನೆರವಾಗಲಿದೆ.

ಈ ಕಾರ್ಡ್ ಹಳೆ ವಸ್ತ್ರ ಮರುಬಳಕೆಯ ಜಾಲವನ್ನು ರೂಪಿಸಲಿದೆ. 'ಹಳೆಯ ಬಟ್ಟೆಗಳಿವೆಯೇ ?' ಎಂಬ ಶೀರ್ಷಿಕೆಯ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ವಸ್ತ್ರ ತ್ಯಾಜ್ಯವು ಭೂಮಿಗೆ ಸೇರುವುದನ್ನು ತಪ್ಪಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಹಳೆಯ ವಸ್ತ್ರಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಹ ಈ ಅಭಿಯಾನ ನೆರವಾಗಲಿದೆ.

'ವಸ್ತ್ರ ತ್ಯಾಜ್ಯ ಭೂಮಿಗೆ ಸೇರುವುದನ್ನು ತಪ್ಪಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರಿಂದ ಚಿಂದಿ ಆಯುವವರ ಆರ್ಥಿಕ ಸ್ಥಾನಮಾನ ಸುಧಾರಿಸಿ, ಘನತೆಯ ಜೀವನ ನಡೆಸಬಹುದಾಗಿದೆ. ನಗರದ ವಿವಿಧ ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳ ವಿವರ ಹಾಗೂ 50 ಕೆ.ಜಿಗಿಂತ ಅಧಿಕ ವಸ್ತ್ರ ತ್ಯಾಜ್ಯವಿದ್ದಲ್ಲಿ ಮನೆ ಬಾಗಿಲಿನಲ್ಲಿಯೇ ಸಂಗ್ರಹಕ್ಕೆ ಸಂಬಂಧಿಸಿದಂತೆ ವಾಟ್ಸ್ ಆ್ಯಪ್ ಸಂಖ್ಯೆ 97417308548 ಸಂಪರ್ಕಿಸಬಹುದು' ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸೋಮ ಕಟಿಯಾರ್ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೆ.ಆರ್. ಶ್ರೀ ಜಯದರ್ಶಿನಿಗೆ ಶೇ 99.16 ಅಂಕ

ಬೆಂಗಳೂರು: ಮಲ್ಲೇಶ್ವರದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ ಕೆ.ಆರ್.ಶ್ರೀ ಜಯದರ್ಶಿನಿ ಅವರು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇಕಡ 99.16ರಷ್ಟು (595) ಅಂಕಗಳನ್ನು ಪಡೆದಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಕೆ.ಆರ್.ಶ್ರೀ ಜಯದರ್ಶಿನಿ

ಮೌಢ್ಯ ಬಿಡಿ ಆಧ್ಯಾತ್ಮದತ್ತ ಬನ್ನಿ: ನಿರ್ಮಲಾನಂದನಾಥ ಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೆ ಮೌಢ್ಯ ಹೆಚ್ಚಿದ್ದವು. ಅವು ಬಹುತೇಕ ಅಳಿದು ಹೋಗಿವೆ. ಈಗ ವಿಜ್ಞಾನ ಮತ್ತು ತಂತ್ರಜ್ಞಾನದ ಹಿಂದೆ ಹೋದವರೇ ಮೂಢನಂಬಿಕೆಯ ಭಾಗವಾಗುತ್ತಿರುವುದು ಹೆಚ್ಚಾಗುತ್ತಿದೆ. ಆದರೆ, ಆತ್ಯಂತಿಕ ಆನಂದವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಮೌಢ್ಯ ಬಿಟ್ಟು ಅಧ್ಯಾತ್ಮದೆಡೆಗೆ ಸಾಗಬೇಕು ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಮಹಾಲಕ್ಷ್ಮಿ ಬಡಾವಣೆಯ ಬಿಜಿಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬುಧವಾರ ನಡೆದ ಅಭಯಾಂಜನೇಯ ಸ್ವಾಮಿ, ಪ್ರಸನ್ನ ಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣೆ ಬಳಿಕ ನಡೆದ ಸ್ವಸ್ತಿ ವಿದ್ಯಾರ್ಥಿನಿ ನಿಲಯ ಉದ್ಘಾಟನೆ, ಭಕ್ತ ಸಮಾಗಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆಧುನಿಕ ವಿಜ್ಞಾನ, ತಂತ್ರಜ್ಞಾನದ ಕಾಲದಲ್ಲಿ ಅಧ್ಯಾತ್ಮ ಸದಾಕಾಲ ಇರಬೇಕು. ಧಾರ್ಮಿಕ ಮತ್ತು ಆಧ್ಯಾತ್ಮಿಕ ಶ್ರದ್ಧೆಯನ್ನು ಮೂಡಿಸಬೇಕು ಎಂಬ ಕಾರಣದಿಂದ ಆಂಜನೇಯ ಸ್ವಾಮಿಯ ದೇವಾಲಯ ನಿರ್ಮಾಣ ಮಾಡಲಾಗಿದೆ. ಆಂಜನೇಯ ಅಂದರೆ ಬುದ್ಧಿ, ಯಶಸ್ಸು, ಶಕ್ತಿ. ಆಂಜನೇಯನನ್ನು ಸ್ಮರಿಸಿದರೆ ನಮ್ಮ ಬದುಕು ಬೆಳಗುತ್ತದೆ' ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ಕಲ್ಲುಬೆಟ್ಟಗಳ ಗುಡ್ಡದಲ್ಲಿ ವಿದ್ಯಾಸಂಸ್ಥೆಯನ್ನು ನಿರ್ಮಿಸಿ ವಿದ್ಯಾದಾನ ಮಾಡುತ್ತಿರುವ ಇದೇ ಪ್ರದೇಶದಲ್ಲಿ ಆಂಜನೇಯ ದೇವರನ್ನು ಪ್ರತಿಷ್ಠಾಪಿಸಿ ಭಕ್ತಿ ಮತ್ತು ಶಕ್ತಿಯನ್ನು ಆದಿಚುಂಚನಗಿರಿ ಸ್ವಾಮೀಜಿ ನೀಡಿದ್ದಾರೆ. ಆಸ್ಪತ್ರೆಯನ್ನು ನಿರ್ಮಿಸುವ ಸಂಕಲ್ಪ ಅವರದ್ದಾಗಿದೆ' ಎಂದು ತಿಳಿಸಿದರು.

ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದ ಡಾ.ಕೆ. ಸುಧಾಕರ್, ಶಾಸಕರಾದ ಕೆ. ಗೋಪಾಲಯ್ಯ, ಡಾ.ಸಿ. ಎನ್. ಅಶ್ವಥ್ ನಾರಾಯಣ, ಎಸ್. ಆರ್. ವಿಶ್ವನಾಥ್, ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಿದ್ದರು. 'ಗೋರಕ್ಷ ಬೋಧೆ', 'ಸಿದ್ಧ ಸಿದ್ಧಾಂತ ಪದ್ಧತಿ' ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು. ದೇವಾಲಯದಲ್ಲಿ ಕುಂಭಾಭಿಷೇಕ, ಮಹಾಮಂಗಳಾರತಿ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

ಮಹಾಲಕ್ಷ್ಮಿ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಅಭಯಾಂಜನೇಯಸ್ವಾಮಿ, ಶ್ರೀ ಪ್ರಸನ್ನ ಮಹಾಗಣಪತಿ ಮತ್ತು ಶ್ರೀ ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮತ್ತು ಲೋಕಾರ್ಪಣೆ ಸಮಾರಂಭದ ಭಕ್ತಸಮಾಗಮದಲ್ಲಿ ಬುಧವಾರ ಸೇರಿದ್ದ ಸಭಿಕರು

ನಿರ್ಮಲಾನಂದನಾಥ ಸ್ವಾಮೀಜಿ ಅವರು ಅಭಯಾಂಜನೇಯಸ್ವಾಮಿಗೆ ಆರತಿ ಬೆಳಗಿದರು. ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರಗಳು

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ

'ಅ.ನ.ರಮೇಶ್ ಸ್ಮರಣ ಗ್ರಂಥ ಹೊರಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅ.ನ. ರಮೇಶ್ ಕೇವಲ ಬೆಳಕು ತಜ್ಞರಾಗಿರದೆ, ಕನ್ನಡ ರಂಗಭೂಮಿಯ ಮಾನವೀಯ ಪ್ರಜ್ಞೆಯಾಗಿದ್ದರು. ಅವರ ಸ್ಮರಣ ಗ್ರಂಥವನ್ನು ಹೊರತರಬೇಕು' ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಆಶಯ ವ್ಯಕ್ತಪಡಿಸಿದರು.

ರಂಗಚಂದಿರ ಮತ್ತು ರಂಗ ನಾಯಕ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಬೆಳಕಬಳ್ಳಿ ಅ.ನ. ರಮೇಶ್ ನೆನಪು' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಈ ನಾಡಿನ ಶ್ರೇಷ್ಠ ಬೆಳಕಿನ ತಜ್ಞರಾದ ರಮೇಶ್ ಅವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಅವರ 75ನೇ ವರ್ಷದ ಜನ್ಮ ದಿನವನ್ನಾದರೂ ಅರ್ಥ-ಪೂರ್ಣವಾಗಿ ಆಚರಿಸಬೇಕು' ಎಂದರು.

ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, 'ರಂಗಭೂಮಿ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಅ.ನ. ರಮೇಶ್ ಅವರು ಪರಿಹಾರೋಪಾಯ ಸೂಚಿಸುತ್ತಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಾ ನಿರ್ದೇಶಕ ಶಶಿಧರ ಅಡಪ, ಸಂಚಯ ತಂಡದ ಅಧ್ಯಕ್ಷ ಎನ್.ಎಸ್. ಚಂದ್ರಶೇಖರ್, ಮೈಕೊದ ಚಂದ್ರಶೇಖರ್ ಅವರು ಅ.ನ. ರಮೇಶ್ ಅವರ ಒಡನಾಟ ಸ್ಮರಿಸಿಕೊಂಡರು.

ಬೆಳಕು ವಿನ್ಯಾಸಕಾರರಾದ ಮಂಜು ನಾರಾಯಣ ಮತ್ತು ಟಿ.ಎಂ. ನಾಗರಾಜು ಅವರಿಗೆ ಗೌರವ ಸನ್ಮಾನ ಮಾಡಲಾಯಿತು. ರಂಗಚಂದಿರ ಟ್ರಸ್ಟ್ ಕಾರ್ಯದರ್ಶಿ ಎ.ಎಸ್. ಚಂದ್ರಶೇಖರ್ (ಜಿಪಿಓ ಚಂದ್ರು) ಉಪಸ್ಥಿತರಿದ್ದರು.

ಸಂಚಯ ತಂಡವು ರಂಗಗೀತೆ-ಗಳನ್ನು ಪ್ರಸ್ತುತಪಡಿಸಿತು. 'ಜಲಗಾರ' ನಾಟಕದ ದೃಶ್ಯಾಭಿನಯ, ಸಂಚಯ ವಿಜಯ್ ಅವರಿಂದ 'ಮತ್ತೆ ವಸಂತ' ಏಕವ್ಯಕ್ತಿ ಪ್ರದರ್ಶನ ನಡೆಯಿತು.

(ಕುಳಿತವರು ಎಡದಿಂದ) ನಾಗರತ್ನಮ್ಮ ಮರಿಯಮ್ಮನಹಳ್ಳಿ, ಜೆ. ಲೋಕೇಶ್, ಮಂಜು ನಾರಾಯಣ, ಟಿ.ಎಂ. ನಾಗರಾಜು, ಜಿ.ಎನ್. ಮೋಹನ್, ಜಯಶ್ರೀ ಕಂಬಾರ ಮತ್ತು ಟಿ.ಎಸ್. ವಿವೇಕಾನಂದ ಅವರಿಗೆ ರಂಗ ಗೌರವ ಸಲ್ಲಿಸಲಾಯಿತು. ಶಶಿಧರ್ ಭಾರಿಘಾಟ್, ಜಿಪಿಓ ಚಂದ್ರು, ಚಂದ್ರಶೇಖರ್, ಶ್ರೀನಿವಾಸ ಜಿ. ಕಪ್ಪಣ್ಣ, ಕೆ.ವಿ. ನಾಗರಾಜ ಮೂರ್ತಿ, ಎನ್.ಎಸ್. ಚಿತ್ರಶೇಖರ್, ಶಶಿಧರ ಅಡಪ ಮತ್ತು ರಾಧಾಕೃಷ್ಣ ಹೆಗಡೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನೈರುತ್ಯ ರೈಲ್ವೆ

ಟೆಂಡರು ಸೂಚನೆ ಸಂ. 04/2025/SBC ದಿನಾಂಕ: 10.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8255561	ತಾಂತ್ರಿಕ ಮಾನದಂಡಗಳೊಂದಿಗೆ ಸರಿಹೊಂದುವ ಹಾಗೂ ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/ಪಿಇ/ಎಸ್‌ಪಿಇಸಿ/ಎಸಿ/0184–2015ಗೆ ಅನುಗುಣವಾಗಿರುವ, ಆನ್‌ಬೋರ್ಡ್ ಪ್ಯಾನೆಲ್‌ನಲ್ಲಿ ಕಾರ್ಟ್ರಿಡ್ಜ್ 1 ನಂ. 8/10 ಗ್ರಾಂ.ನ ಪೂರೈಕೆ ಹಾಗೂ 1 ನಂ. 100 ಗ್ರಾಂ. ಅಂಡರ್ ಸ್ಲಂಗ್ ಪ್ಯಾನೆಲ್‌ನೊಂದಿಗೆ ಏರೋಸಾಲ್ ಅಗ್ನಿ ಪತ್ತೆಹಚ್ಚುವ ಮತ್ತು ಶಾಮಕ ಸಿಸ್ಟಮ್‌ನ ಪೂರೈಕೆ ಮತ್ತು ಸ್ಥಾಪನೆ. (ಪರಿಮಾಣ: 557 ನಂ.)

ಬಿಡ್‌ಗಳನ್ನು ಸಲ್ಲಿಸಲು/ ಬಿಡ್‌ನ ಕೊನೆಯ ದಿನಾಂಕ: 05.05.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/45/AAF/PRB/SWR/2025-26 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಆನೇಕಲ್ ತಾಲ್ಲೂಕು, ಆನೇಕಲ್

ಸಂಖ್ಯೆ: ಸಿ7(ಆ3) ದೂರು/5/2020–21 ದಿನಾಂಕ: 07–04–2025

ಪತ್ರಿಕಾ ಪ್ರಕಟಣೆಗಾಗಿ

ಶ್ರೀಮತಿ ಜಯಶೀಲ ಪಿ., ಪದವೀಧರ ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಂಟಪ, ಆನೇಕಲ್ ತಾಲ್ಲೂಕು ಇವರು ದಿನಾಂಕ: 02–07–2021 ರಿಂದ ಪ್ರಸ್ತುತ ದಿನಾಂಕದವರೆಗೆ ನಿರಂತರವಾಗಿ ಗೈರು ಹಾಜರಾಗಿರುತ್ತೀರಿ. ಈ ಕಛೇರಿಯಿಂದ ದಿನಾಂಕ: 28.10.2024, 05.11.2024 ಮತ್ತು 12.11.2024 ರಂದು ನೋಟೀಸ್ ಜಾರಿ ಮಾಡಿದ್ದರೂ ನೀವು ಸೇವಾ ವಹಿಯ ಖಾಯಂ ವಿಳಾಸಕ್ಕೆ ನೀಡಿರುವ ವಿಳಾಸ **'ಶ್ರೀಮತಿ ಜಯಶೀಲ ಪಿ. #57, ಒಬಿ ಚೂಡಹಳ್ಳಿ, ಉದಯಪುರ, ಕನಕಪುರ ರಸ್ತೆ, ಬೆಂಗಳೂರು ದಕ್ಷಿಣ, ಬೆಂಗಳೂರು–560082** ಇಲ್ಲಿಗೆ ಸ್ವೀಕೃತಗೊಳ್ಳದೆ ವಾಪಸ್ಸಾಗಿರುತ್ತದೆ. ಇದರಿಂದ ನಿಮ್ಮ ಗೈರು ಹಾಜರಿ ಬಗ್ಗೆ ಯಾವುದೇ ಮಾಹಿತಿ ಒದಗಿರುವುದಿಲ್ಲ. ಈ ಹಿನ್ನಲೆಯಲ್ಲಿ ತಿಳಿಯಪಡಿಸುವುದೇನೆಂದರೆ ನಿಮಗೆ ಅಂತಿಮ ಅವಕಾಶ ನೀಡಲಾಗಿ ಈ ಪ್ರಕಟಣೆ ಹೊರಡಿಸಿದ 07 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗುವುದು ಅಥವಾ ನಿಮ್ಮ ಲಿಖಿತ ಸಮಜಾಯಿಷಿಯನ್ನು ಈ ಕಛೇರಿಗೆ ಖುದ್ದು ತಾವೇ ಹಾಜರಾಗಿ ನೀಡುವುದು. ಇಲ್ಲವಾದಲ್ಲಿ ನಿಮ್ಮ ವಿರುದ್ಧ ಶಿಸ್ತು ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಹಾಗೂ ಮುಂದಿನ ಆಗುಹೋಗುಗಳಿಗೆ ನೀವೇ ನೇರ ಜವಾಬ್ದಾರರಾಗಿರುತ್ತೀರೆಂದು ಈ ಮೂಲಕ ತಿಳಿಸಿದೆ.

ಸಹಿ/– ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆನೇಕಲ್ ತಾಲ್ಲೂಕು.

PUBLIC NOTICE

The general public is hereby informed that the residential property, described in the Schedule hereunder, belonging to (1) Mr. **Gopinath Hiremagalur Anantharaman**, s/o. Late HN Anantharaman, r/o. 9G/H, Chez Leila, 9, Moyenville Road, Langford Town, Bangalore-560025; and (2) Mr. **Srinidhi Anantharaman**, s/o. Late HN Anantharaman, r/o. No. 48, 10th A Main Road, 17th Cross, Malleswaram, Bangalore-560055, stands mortgaged to **Phoenix IT City Private Limited**, 1335, Road No. 45, Jubilee Hills, Hyderabad-500033, Telangana, vide the Deposit of Title Deeds dated 16-03-2019 registered as Document No. 3527/2018-19 in the Office of the Senior Sub-Registrar, Malleshwaram, Bangalore, to secure payment of the Amounts with interest due from **Makeorbuy Contracting Private Limited**, 204, 2nd Floor, Abhishek Complex, No.259, Sampige Road, 17th Cross, Malleshwaram, Bangalore- 560003, Karnataka; and the original title deeds stand deposited with Phoenix IT City Private Limited.

The general public is hereby cautioned not to deal with the following Schedule Property in any manner. If any individual, concern, firm, LLP, company or anybody whosoever deals with the Schedule Property in any manner, they will be doing so at their own risk and consequences.

Schedule

All that the land admeasuring 7,416 square feet along with residential house and all structures present and future with all rights and easements, privileges, liberties, whatsoever, to the said piece or parcel of land located at Municipal No. 32 (Old) and at present bearing Municipal No. 48 on 17th Cross Road, Malleshwaram, Bangalore-3 (Old) and presently Bangalore-55, bounded by **North**: Site No. 23 (Old) and currently private property; **South**: 17th Cross Road, Malleshwaram, **East**: Road; and **West**: Site No.31 (Old), subsequently by Municipal No. 47 of Mrs. Shakuntala Nadig, Daughter of GA Acharya, and currently by Cloud 9 Hospital, and measuring on that side 103'.

PAVAN KUMAR PIDATALA
SAI TEJA PIDATALA
Advocates,
F2, Krishna Sindhu Residency, 8-2-120/86/2/A&3,
Road No. 3, Banjara Hills, Hyderabad-500 034.Telangana.
eMail: lexxpavan@gmail.com

ನೈರುತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/71/2025
ಮೇಲಿನ ತಿದ್ದುಪಡಿ. ದಿನಾಂಕ: 17.02.2025

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ದಂಡು ಮತ್ತು ಮೈಸೂರು ಪ್ರದೇಶದಲ್ಲಿ ವಿವಿಧ ಉಪ ಮುಖ್ಯ ಇಂಜಿನಿಯರುಗಳ ವ್ಯಾಪ್ತಿಗಳಲ್ಲಿ ಬರುವ ವಿವಿಧ ನಿರ್ಮಾಣ ಸ್ಥಳಗಳು / ವಿಭಾಗಗಳಲ್ಲಿ ಯೋಜನೆಯ ಮೇಲ್ವಿಚಾರಣೆ ಸೇವೆಗಳಿಗಾಗಿ ಯೋಜನಾ ಮೇಲ್ವಿಚಾರಕ ಸೇವಾ ಏಜೆನ್ಸಿಯ (ಪಿಎಸ್‌ಎಸ್‌ಎ) ನೇಮಕಾತಿ. (ಟೆಂಡರು ಉಲ್ಲೇಖ ಸಂ. PSSA-BNC-MYS))	ರೂ. 27,63,34,528/-

ಕೊನೆಯ ದಿನಾಂಕ

ಪ್ರಸ್ತುತ	ಪರಿಷ್ಕರಣೆ
15.04.2025 (15:00 ಗಂಟೆಗೆ)	23.04.2025 (15.00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು
PUB/47/AAF/PRB/SWR/2025-26

South Western Railway - SWR | SWRRLY | SWRRLY

ನೈರುತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/105/2025
ದಿನಾಂಕ: 09.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಹುಲಕೋಟಿ ಮತ್ತು ಗದಗ ನಿಲ್ದಾಣಗಳ ನಡುವೆ ಹುಲಕೋಟಿ – ಚಿಕ್ಕಂಡೊಗೊಲ ರೋಡ್ ಮೇಲಿನ ಹುಲಕೋಟಿ ಯಾರ್ಡ್‌ನ ಕಿಮೀ. 46.122 ರಲ್ಲಿ ಎಲ್‌ಸಿ ನಂ. 26ಕ್ಕೆ ಬದಲು 1x9.25x5.5 ಮೀ. ಅಳತೆಯ ಆರ್‌ಸಿಸಿ ಬಾಕ್ಸ್‌ನಿಂದ ಬಾಕ್ಸ್ ಪುಶಿಂಗ್ ತಂತ್ರಜ್ಞಾನದ ಅಡಿಯಲ್ಲಿ ಆರ್‌ಯುಬಿ ಯ ನಿರ್ಮಾಣ. (ಟೆಂಡರು ಉಲ್ಲೇಖ ಸಂ.: RUB-LC26-LKTYARD)	ರೂ. 17,82,50,802/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.05.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು
PUB/38/AAF/PRB/SWR/2025-26

South Western Railway - SWR | SWRRLY | SWRRLY

PUBLIC NOTICE

It is hereby notified that, our clients have agreed to purchase the Schedule Property from its Owner **SMT.GIRIJA RAMEGOWDA** W/o late Sri.K. Ramegowda, residing at No.6, 'Krishna', 24th Main Road, J P Nagar 1st Phase, Bengaluru-560078. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **7 (Seven) days** from the date of publication of this notice. Objection/s received thereafter will not be binding on our clients.

SCHEDULE

All that piece and parcel of the immovable property bearing **Municipal No.34** (CITB/BDA Site No.17) PID No.60-135-34, E.P.I.D.No. 1974099201, measuring East to West 60ft and North to South 39ft, in all measuring 2340 Sq.ft, with a house building thereon, situated at **11th Main Road, 4th Block, Jayanagar East,** Bengaluru, within the administrative jurisdiction of Bruhat Bengaluru Mahanagara Palike (BBMP) Ward No.169-Byrasandra and bounded as follows:

East by : Property bearing No.20;
West by : Road;
North by : Property bearing No.16;
South by : Property bearing No.18

Sd/- BAYYA REDDY. M
For ISHA LAW CHAMBERS LLP
Advocates & Solicitors
No.101, 2nd Floor, Sri Manjunatha Complex, 22nd Main Road, BSK 2nd Stage, Opp : Banashankari BDA Complex, Bengaluru-560070.

IN THE COURT OF THE VI ADDL. DISTRICT AND SESSIONS JUDGE, AT TUMAKURU
Com.O.S. No. 36/2024
Plaintiff : Canara Bank, Main Branch,
-V/S-
Defendant : Smt.Satyadevi
PAPER PUBLICATION
Notice to the Defendant in the above case
Defendant: **Smt. Satyadevi**
W/o Sri Shivarudrappa, Aged about 68 years, **Residing at,** No. 167, 1st Floor,4th Main, 4th Stage, 4th Block,West of Chord Road, Basaweshwaranagar, Bengaluru-560079. **Also at,** Door No.40, 6th Cross, Agrahara, Dasarahalli, Rajaji Nagar, Bengaluru-560010.
Whereas, the above Plaintiff has instituted the above Suit against the defendant, for the recovery of Claim amount of **Rs.34,19,265.00**
Bank Detail :
With reference to the above subject-
Name of the Bank : **Canara Bank,** (Main Branch)
Place of The Branch : Ashoka Road, Tumakuru,
Saving Bank Account : **0522101048593**
The defendant, in the above Suit avoiding to receive the Court summons and managing to receive the same hence, the above suit is posted for your appearance on **21-4-2025** at 11A.M before the Court of the VI Addl. District and Sessions Judge, at Tumakuru. Therefore you are hereby summoned to appear on the said date to answer the Petition, failing which the case will be heard and determined in your absence by placing you as Ex-parte.
Given under my hand and seal of this court, this **15th day of April 2025.**
Mohamed Afroze Ahamed,
Advocate and Legal adviser
Opp. State Bank of India,
M.G. Road, Tumakuru.
By the Order of This Court
CHIEF ADMINISTRATIVE OFFICER
DISTRICT AND SESSIONS COURT
TUMKUR.

ನಮ್ಮ ಮೆಟ್ರೊ ಕಾಮಗಾರಿ ವೇಳೆ ಅವಘಡ: ಪ್ರಯಾಣಿಕ ಪಾರು • ನಾಗವಾರ: 2023ರಲ್ಲಿಯೂ ನಡೆದಿತ್ತು ಘಟನೆ

ಗರ್ಡರ್ ಉರುಳಿ ಆಟೊ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೋಗಿಲು ಕ್ರಾಸ್ ಬಳಿ ನಮ್ಮ ಮೆಟ್ರೊ ಕಾಮಗಾರಿಗಾಗಿ ಲಾರಿಯಲ್ಲಿ ಸಾಗಿಸುತ್ತಿದ್ದ ಬೃಹತ್ ಸಿಮೆಂಟ್ ತೊಲೆ (ಗರ್ಡರ್) ಉರುಳಿ ಬಿದ್ದು ಆಟೊ ಚಾಲಕ ಮೃತಪಟ್ಟ ಘಟನೆ ಮಂಗಳವಾರ ತಡರಾತ್ರಿ ಸಂಭವಿಸಿದೆ. ಆಟೊದಲ್ಲಿದ್ದ ಪ್ರಯಾಣಿಕ ಪಾರಾಗಿದ್ದಾರೆ.

ಖಾಸೀಂ ಸಾಬ್

ಹೆಗಡೆ ನಗರದಲ್ಲಿ ನೆಲಸಿದ್ದ, ಶಿಡ್ಲಘಟ್ಟದ ಆಟೊ ಚಾಲಕ ಖಾಸಿಂ ಸಾಬ್ (43) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಬಳಿಕ ಸ್ಥಳದಲ್ಲೇ ಲಾರಿ ಬಿಟ್ಟು ಪರಾರಿಯಾಗಿದ್ದ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗದ ಮೆಟ್ರೊ ಕಾಮಗಾರಿಗೆ ಬಳಸಲು ಬೃಹತ್ ಗಾತ್ರದ ಗರ್ಡರ್ ಕೊಂಡೊಯ್ಯಲಾಗುತ್ತಿತ್ತು. ರಾತ್ರಿ 12.05 ರ ಸಮಯದಲ್ಲಿ ಕೋಗಿಲು ಕ್ರಾಸ್‌ನಲ್ಲಿ ತಿರುವು ತೆಗೆದುಕೊಳ್ಳುವ ವೇಳೆ 18 ಚಕ್ರದ ವಾಹನವೇ ತುಂಡಾಗಿದೆ. ಈ ವೇಳೆ ಪಕ್ಕದಲ್ಲಿ ಸಂಚರಿಸುತ್ತಿದ್ದ ಆಟೊ ಮೇಲೆ ಗರ್ಡರ್ ಬಿದ್ದಿದೆ. ಆಟೊ ಸಂಪೂರ್ಣ ನಜ್ಜುಗುಜ್ಜಾಗಿದೆ.

ಮುಖ್ಯಾಂಶಗಳು

- ಆರು ಚಕ್ರದ ಲಾರಿಯೇ ತುಂಡು
- ನಾಗವಾರದ ಕಡೆ ಹೋಗುವಾಗ ದುರಂತ
- ಘಟನೆಯಲ್ಲಿ ಆಟೊ ಅಪ್ಪಚ್ಚಿ

ಗರ್ಡರ್ ಉರುಳಿ ಬೀಳುತ್ತಿದ್ದಂತೆ ಪ್ರಯಾಣಿಕ ತಕ್ಷಣ ಇಳಿದು ಓಡಿ ಹೋಗಿದ್ದಾರೆ. ಆದರೆ, ಚಾಲಕ ಖಾಸೀಂ ಇಳಿಯುವಷ್ಟರಲ್ಲಿ ಆಟೊ ಮೇಲೆ ತೊಲೆ ಬಿದ್ದು ಸ್ಥಳದಲ್ಲೇ ಸಾವಿಗೀಡಾದರು.

ಗರ್ಡರ್ ತೆರವು: ಅವಘಡ ಸಂಭವಿಸುತ್ತಿದ್ದಂತೆ ಸ್ಥಳೀಯರು ರಕ್ಷಣೆಗೆ ಧಾವಿಸಿದರು. ಆದರೆ ಸಿಮೆಂಟ್ ತೊಲೆ ತೆರವುಗೊಳಿಸಲು ಕ್ರೇನ್ ಇರದ ಕಾರಣ ಪ್ರಯತ್ನ ವಿಫಲವಾಗಿದೆ. ಘಟನೆ ನಡೆದ ಎರಡು ಗಂಟೆಗಳ ಬಳಿಕ ಕ್ರೇನ್ ತರಿಸಿ ಗರ್ಡರ್ ತೆರವುಗೊಳಿಸಿ, ಮೃತದೇಹವನ್ನು ಹೊರ ತೆಗೆಯಲಾಗಿದೆ.

ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಿ, ಸುರಕ್ಷತಾ ಕ್ರಮ ಕೈಗೊಳ್ಳದಿರುವುದರಿಂದ ಅವಘಡ ಸಂಭವಿಸಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗರ್ಡರ್ ಸಾಗಿಸುತ್ತಿದ್ದ ವಾಹನದ ಚಾಲಕ ಹಾಗೂ ಬಿಎಂಆರ್‌ಸಿಎಲ್ ಕಾಮಗಾರಿಯ ಗುತ್ತಿಗೆ ಪಡೆದಿರುವ ಎನ್‌ಸಿಸಿ ವಿರುದ್ಧ ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 281, 106 ಅಡಿ ಪ್ರಕರಣ ದಾಖಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ನೀಡಲು ಸಿದ್ಧತೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ: ಘಟನೆ ಖಂಡಿಸಿ ಮೃತನ ಕುಟುಂಬಸ್ಥರು ಹಾಗೂ ಸಾರ್ವಜನಿಕರು ಕೋಗಿಲು ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ಮೆಟ್ರೊ ಕಾಮಗಾರಿ ಗುತ್ತಿಗೆ ಪಡೆದಿರುವ ಕಂಪನಿಯ ನಿರ್ಲಕ್ಷ್ಯದಿಂದ ಈ ಘಟನೆ ಸಂಭವಿಸಿದೆ. ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

2023ರಲ್ಲೂ ಇದೇ ರೀತಿಯ ಘಟನೆ ನಡೆದಿತ್ತು. ನಾಗವಾರ ಬಳಿ ನಿರ್ಮಾಣ ಹಂತದ 40 ಅಡಿ ಎತ್ತರದ ಮೆಟ್ರೊ ಪಿಲ್ಲರ್ ದಿಢೀರ್ ಕುಸಿತಗೊಂಡು ತಾಯಿ, ಮಗ ಮೃತಪಟ್ಟಿದ್ದರು.

ಆಟೊ ಮೇಲೆ ಬಿದ್ದಿರುವ ಸಿಮೆಂಟ್ ತೊಲೆ

ಸಿಮೆಂಟ್ ತೊಲೆ ಸಾಗಿಸುತ್ತಿದ್ದ ವಾಹನವೇ ತುಂಡಾಗಿದೆ

ಹೊಸ ಆಟೊ ಖರೀದಿಸಿ 20 ದಿನ

ಶಿಡ್ಲಘಟ್ಟದ ಖಾಸೀಂ ಸಾಬ್ ಅವರು ಹೆಗಡೆ ನಗರದಲ್ಲಿ ಸಂಬಂಧಿಕರ ಮನೆಯಲ್ಲಿ ವಾಸವಿದ್ದರು. ಅವರ ಕುಟುಂಬ ಶಿಡ್ಲಘಟ್ಟದಲ್ಲಿ ವಾಸವಿತ್ತು. ಖಾಸಗಿ ಫೈನಾನ್ಸ್‌ನಲ್ಲಿ ಸಾಲ ಮಾಡಿ 20 ದಿನದ ಹಿಂದಷ್ಟೇ ಆಟೊ ಖರೀದಿಸಿದ್ದರು. ಪ್ರಯಾಣಿಕರನ್ನು ಕರೆದುಕೊಂಡು ನಾಗವಾರದ ಕಡೆ ಹೋಗುತ್ತಿದ್ದಾಗ ದುರ್ಘಟನೆ ಸಂಭವಿಸಿದೆ. ಘಟನೆಯಲ್ಲಿ ಆಟೊ ಸಂಪೂರ್ಣ ನಜ್ಜುಗುಜ್ಜಾಗಿದೆ.

'ತಾಯಿ ಹೃದ್ರೋಗದಿಂದ ಬಳಲುತ್ತಿದ್ದಾರೆ. ಖಾಸಿಂ ಹಲವು ವರ್ಷದಿಂದ ಆಟೊ ಓಡಿಸುತ್ತಿದ್ದರು. ಆರೋಗ್ಯ ಸರಿ ಇರಲಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಮಗಳ ಮದುವೆಗೆ ಹಣ ಹೊಂದಿಸಲು ರಾತ್ರಿ ಕೆಲಸಕ್ಕೆ ಹೋಗಿದ್ದರು' ಎಂದು ಖಾಸೀಂ ಸಂಬಂಧಿ ಲತೀಫ್ ಹೇಳಿದರು.

'ತಂದೆಗೆ ಆರೋಗ್ಯ ಸರಿ ಇರಲಿಲ್ಲ. ಆಸ್ಪತ್ರೆಗೆ ಹೋಗಿ ಬಂದಿದ್ದರು. ರಾತ್ರಿ ಒಂದು ಟ್ರಿಪ್ ಹೋಗಿ ಬರುವೆ ಎಂದು ಹೋದವರು ಶವವಾಗಿ ಬಂದರು. ನಾವು ಮೂರು ಜನ ಮಕ್ಕಳು. ತಂದೆಯ ದುಡಿಮೆಯಿಂದಲೇ ಕುಟುಂಬ ನಡೆಯುತ್ತಿತ್ತು. ಈಗ ದಿಕ್ಕು ತೋಚುತ್ತಿಲ್ಲ' ಎಂದು ಮೃತರ ಮಗ ಆರಿಫ್ ಕಣ್ಣೀರಿಟ್ಟರು.

'ಮೃತನ ಕುಟುಂಬಕ್ಕೆ ಪರಿಹಾರ'

'ವಾಡಿಯಾರ್‌ಪುರ ಕಾಸ್ಟಿಂಗ್ ಯಾರ್ಡ್‌ನಿಂದ ಗರ್ಡರ್ ಸಾಗಿಸುತ್ತಿದ್ದ ವಾಹನ ತಿರುವು ಪಡೆಯುವ ವೇಳೆ ತುಂಡಾಗಿದೆ. ಈ ವೇಳೆ ಗರ್ಡರ್ ಆಟೊ ಮೇಲೆ ಬಿದ್ದು ಚಾಲಕ ಮೃತಪಟ್ಟಿದ್ದಾರೆ. ಕೆಳಗೆ ಸಿಕ್ಕಿ ಹಾಕಿಕೊಂಡಿದ್ದ ಚಾಲಕನ ಶವವನ್ನು ಕ್ರೇನ್ ಬಳಸಿ ಹೊರತೆಗೆಯಲಾಯಿತು. ನಿಯಮದ ಪ್ರಕಾರ ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು' ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

'ಕಾರ್ಯಾಚರಣೆಯಲ್ಲಾಗಲಿ ಅಥವಾ ನಿರ್ಮಾಣದಲ್ಲಾಗಲಿ, ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಪ್ಪಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಅದು ಹೇಳಿದೆ.

ಇಟ್ಟಿಗೆಯಿಂದ ಹಲ್ಲೆ ನಡೆಸಿ ಆರೋಪಿ ಪರಾರಿ

ಏಪ್ರಿಲ್ 13 ರಂದು ರಾತ್ರಿ 10.30ರ ಸುಮಾರಿಗೆ ಸಂತ್ರಸ್ತೆ ಮಲಗಲು ಕೊಠಡಿಗೆ ಹೋಗುತ್ತಿದ್ದ ವೇಳೆ, ಪಕ್ಕದ ಮನೆಯ ನಿವಾಸಿ ಕಾರ್ತಿಕ್ ತನ್ನ ಬಟ್ಟೆಗಳನ್ನು ಬಿಚ್ಚಿ ಖಾಸಗಿ ಅಂಗಾಂಗಳನ್ನು ತೋರಿಸಿದ್ದಾನೆ. ಅಲ್ಲದೇ ಅಶ್ಲೀಲ ಸನ್ನೆಗಳನ್ನು ಮಾಡಿದ್ದಾನೆ.

ಮಹಿಳೆ ಜತೆ ಅಸಭ್ಯ ವರ್ತನೆ: ಮಗ, ತಂದೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಪಕ್ಕದ ಮನೆಯ ಮಹಿಳೆಯ ಜತೆ ಅಸಭ್ಯವಾಗಿ ವರ್ತಿಸಿದ ಹಾಗೂ ಇದನ್ನು ಪ್ರಶ್ನಿಸಿದವರ ಮೇಲೆ ಸಿಮೆಂಟ್ ಇಟ್ಟಿಗೆಯಿಂದ ಹಲ್ಲೆ ನಡೆಸಿದ ಆರೋಪಿ ಯುವಕ ಮತ್ತು ಆತನ ತಂದೆ ವಿರುದ್ಧ ಶಿವಾಜಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ರವೀಂದ್ರ ಬಾಬು ಅವರ ದೂರು ಆಧರಿಸಿ, ಗಾಂಧಿ ಕಾಲೊನಿ ನಿವಾಸಿ ಕಾರ್ತಿಕ್ ಹಾಗೂ ಅವರ ತಂದೆ ವೆಂಕಟೇಶ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದರು.



'ಕಾರ್ತಿಕ್ ವಿಚಾರವನ್ನು ಸಂತ್ರಸ್ತೆ ತನ್ನ ಪತಿ ಹಾಗೂ ಕುಟುಂಬದ ಸದಸ್ಯರಿಗೆ ತಿಳಿಸಿದ್ದಾರೆ. ಮಹಿಳೆಯರು, ಮಕ್ಕಳು ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ. ಈ ರೀತಿ ಮಾಡದಂತೆ ಆರೋಪಿಗೆ ಬುದ್ಧಿ ಹೇಳಿದ್ದಾರೆ. ಮಗನ ವರ್ತನೆ ಬಗ್ಗೆ ಆತನ ತಂದೆಯ ಗಮನಕ್ಕೆ ತಂದಿದ್ದಾರೆ. ಮಗ ಏನಾದರೂ ಮಾಡಿಕೊಳ್ಳುತ್ತಾನೆ. ಕೇಳಲು ನೀವು ಯಾರು ಎಂದಿದ್ದಾರೆ. ಈ ವಿಚಾರಕ್ಕೆ ಎರಡೂ ಕಡೆಯವ ನಡುವೆ ಜಗಳ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

'ಜಗಳ ವಿಕೋಪಕ್ಕೆ ತಿರುಗಿ, ಆರೋಪಿಯು ಸಿಮೆಂಟ್ ಇಟ್ಟಿಗೆ, ಹೂವಿನ ಕುಂಡದಿಂದ ಸಂತ್ರಸ್ತೆ, ಪತಿ, ಹಾಗೂ ಅವರ ಕುಟುಂಬದ ಸದಸ್ಯರ ಮೇಲೆ ಹಲ್ಲೆ ನಡೆಸಿದ್ದಾನೆ. ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ. ಆರೋಪಿಗಳಿಬ್ಬರೂ ಪರಾರಿಯಾಗಿದ್ದಾರೆ' ಎಂದು ಹೇಳಿದರು.

'ಕಾರ್ತಿಕ್ ಸಣ್ಣ ಹೋಟೆಲ್ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದಾನೆ. ನಾಪತ್ತೆಯಾಗಿರುವ ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿಗಳು

ಟಿಂಬರ್ ಅಂಗಡಿ ಮಾಲೀಕನ ಸಹೋದರನ ಕೊಲೆ

ಬೆಂಗಳೂರು: ತನ್ನ ಮಗಳ ಜತೆ ಸಲುಗೆಯಿಂದ ಇರಬೇಡ ಎಂದು ಬುದ್ಧಿ ಹೇಳಿದ ಯುವತಿಯ ತಂದೆಯನ್ನು ಕೆಲಸಗಾರನೇ ಮಾರಕಾಸ್ತ್ರದಿಂದ ಹೊಡೆದು ಕೊಲೆ ಮಾಡಿರುವ ಘಟನೆ ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯ ಹೊರ ವರ್ತುಲ ರಸ್ತೆ ಬಳಿಯಿರುವ ಎಸ್.ಬಿ ಟಿಂಬರ್ ಅಂಗಡಿಯಲ್ಲಿ ನಡೆದಿದೆ.

ಟಿಂಬರ್ ಅಂಗಡಿ ಮಾಲೀಕನ ಸಹೋದರ ಸೈಯದ್ ಅಸ್ಲಮ್ (60) ಕೊಲೆಯಾದವರು. ಇಲಿಯಾಸ್ ನಗರದ 23 ವರ್ಷದ ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸೈಯದ್ ಅಸ್ಲಮ್ ಅವರು ತನ್ನ ಸಹೋದರನ ಟಿಂಬರ್ ಅಂಗಡಿಯ ಮೇಲ್ವಿಚಾರಣೆ ಮಾಡುತ್ತಿದ್ದರು. ಅದೇ ಅಂಗಡಿಯಲ್ಲಿ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಆರೋಪಿ, ಮೃತರ ಮಗಳೊಂದಿಗೆ ಸಲುಗೆಯಿಂದ ಇರುತ್ತಿದ್ದ. ಇದನ್ನು ಸಹಿಸದ ಸೈಯದ್, 'ಮಗಳ ತಂಟೆಗೆ ಬರಬೇಡ' ಎಂದು ಆರೋಪಿಗೆ ಎಚ್ಚರಿಸಿದ್ದರು. ಬೆಳಿಗ್ಗೆ ಪಾನಮತ್ತನಾಗಿ ಅಂಗಡಿ ಬಳಿ ಬಂದಿದ್ದ ಆರೋಪಿ ಹಾಗೂ ಸೈಯದ್ ಮಧ್ಯೆ ಇದೇ ವಿಚಾರವಾಗಿ ಗಲಾಟೆಯಾಗಿತ್ತು. ಸಿಟ್ಟಿಗೆದ್ದ ಆರೋಪಿ, ಅಂಗಡಿಯಲ್ಲಿದ್ದ ಮಾರಕಾಸ್ತ್ರದಿಂದ ಹೊಡೆದು ಕೊಲೆ ಮಾಡಿದ್ದಾನೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್ ತಿಳಿಸಿದರು.

ತಂದೆ–ತಾಯಿಗೆ ಚಾಕು ಇರಿತ: ಮಗನ ಬಂಧನ

ಬೆಂಗಳೂರು: ಕುಟುಂಬದ ಮೂವರಿಗೆ ಚಾಕುವಿನಿಂದ ಇರಿದ ಆರೋಪದ ಮೇಲೆ 22 ವರ್ಷದ ಯುವಕನನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಾಣಾವರ ನಿವಾಸಿ, ಡಿಪ್ಲೊಮಾ ಪದವೀಧರ ಕೆ. ಹರ್ಷ ಬಂಧಿತ ಆರೋಪಿ.

ಏಪ್ರಿಲ್ 14ರ ತಡರಾತ್ರಿ ಈ ಘಟನೆ ನಡೆದಿದೆ. ಆರೋಪಿಯು ತನ್ನ ತಂದೆ ಕೃಷ್ಣಮೂರ್ತಿ ವೈ.ವಿ (51), ತಾಯಿ ಪಾರ್ವತಮ್ಮ (45) ಮತ್ತು ಅಕ್ಕ ನಯನಾ (24) ಅವರೊಂದಿಗೆ ವಾಸಿಸುತ್ತಿದ್ದ. ದಾಳಿ ನಡೆದ ರಾತ್ರಿ ತಂದೆ ಹಾಲ್‌ನಲ್ಲಿ ಮಲಗಿದ್ದರೆ, ಪಾರ್ವತಮ್ಮ ಟಿ.ವಿ ನೋಡುತ್ತಿದ್ದರು. ನಯನಾ ತನ್ನ ಕೋಣೆಯಲ್ಲಿ ಮಲಗಿದ್ದರು ಎಂದು ಪೊಲೀಸರು ತಿಳಿಸಿದರು.

'ರಾತ್ರಿ 11 ಗಂಟೆ ಸುಮಾರಿಗೆ ಇದ್ದಕ್ಕಿದ್ದಂತೆ ಹರ್ಷ ನನ್ನಲ್ಲಿ ಬಂದು, 'ನೀವು ನನ್ನ ತಂದೆ, ತಾಯಿ ಅಲ್ಲ. ನಯನಾ ನನ್ನ ಅಕ್ಕ ಅಲ್ಲ' ಎಂದು ಕಿರುಚಾಡಿದ. ಮಗನ ವರ್ತನೆ ಕಂಡು ಗಾಬರಿಯಾಯಿತು. ತಕ್ಷಣ ಆತನನ್ನು ಆಸ್ಪತ್ರೆಗೆ ಕರೆದೊಯ್ಯುವುದಾಗಿ ಪತ್ನಿಗೆ ತಿಳಿಸಿದೆ. ಇದನ್ನು ಕೇಳಿದ ಹರ್ಷ, 'ನನ್ನನ್ನು ಕೊಲೆ ಮಾಡಲು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದೀರಾ ಎಂದು ಕೂಗಾಡಿದ' ಎಂದು ಕೃಷ್ಣಮೂರ್ತಿ ಅವರು ದೂರಿನಲ್ಲಿ ತಿಳಿಸಿದ್ದಾರೆ. 'ಬೆಳಗಿನ ಜಾವ 2 ಗಂಟೆಯವರೆಗೆ ಜಗಳವಾಡಿದ ಬಳಿಕ ಹರ್ಷ, ಪೊಲೀಸರಿಗೆ ಕರೆ ಮಾಡಿ ಮನೆಗೆ ಬೀಗ ಹಾಕಿ ಕೀಲಿಯನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದ. ಬಾಗಿಲು ತೆರೆಯಲು ಹೇಳಿದಾಗ ಕೋಪಗೊಂಡು ಅಡುಗೆ ಮನೆಯಿಂದ ಚಾಕು ತೆಗೆದುಕೊಂಡು ಬಂದು ಮೂವರಿಗೆ ಇರಿದಿದ್ದಾನೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಗಾಯಗೊಂಡ ಮೂವರನ್ನು ಪೊಲೀಸರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರ ಸ್ಥಿತಿ ಸ್ಥಿರವಾಗಿದೆ. ಆರೋಪಿಯನ್ನು ಬಂಧಿಸಲಾಗಿದ್ದು, ಪ್ರಸ್ತುತ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ರಜತ್ ಕಿಶನ್‌ಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ಜಾಮೀನು ಷರತ್ತು ಉಲ್ಲಂಘಿಸಿದ ಆರೋಪದಡಿ ಕಿರುತೆರೆಯ ನಟ ರಜತ್ ಕಿಶನ್ ಅವರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿ ನಗರದ 24ನೇ ಎಸಿಜೆಎಂ ನ್ಯಾಯಾಲಯ ಆದೇಶಿಸಿದೆ.

ಮತ್ತೊಬ್ಬ ಆರೋಪಿ, ಕಿರುತೆರೆ ನಟ ವಿನಯ್ ಗೌಡ ಅವರಿಗೆ ನ್ಯಾಯಾಲಯ ₹500 ದಂಡ ವಿಧಿಸಿದೆ.

ಇದೇ ವೇಳೆ, ಜಾಮೀನು ಕೋರಿ ರಜತ್ ಕಿಶನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದು, ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಾಧೀಶರು ಆದೇಶ ಪ್ರಕಟಣೆಯನ್ನು ಗುರುವಾರಕ್ಕೆ ಕಾಯ್ದಿರಿಸಿದ್ದಾರೆ.

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿ ಅದನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಹೆಸರಿನ ಖಾತೆಯಲ್ಲಿ ಹಾಕಿದ್ದ ಇಬ್ಬರನ್ನು ಮಾರ್ಚ್ 25ರಂದು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದರು. ಬಳಿಕ ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದ್ದ ನ್ಯಾಯಾಲಯ, ವಿಚಾರಣೆಯ ಸಂದರ್ಭದಲ್ಲಿ ಖುದ್ದು ಹಾಜರಿರುವಂತೆ ಷರತ್ತು ವಿಧಿಸಿತ್ತು.

ಆದರೆ, ನ್ಯಾಯಾಲಯದ ವಿಚಾರಣೆಗೆ ರಜತ್ ಕಿಶನ್ ಹಾಜರಾಗಿರಲಿಲ್ಲ. ಹಾಜರಾತಿಯಿಂದ ವಿನಾಯಿತಿ ಕೋರಿ ಸೂಕ್ತ ಕಾರಣ ನೀಡಿ ಅರ್ಜಿಯನ್ನೂ ಸಲ್ಲಿಸಿರಲಿಲ್ಲ. ಹಾಗಾಗಿ ರಜತ್ ವಿರುದ್ಧ ನ್ಯಾಯಾಲಯ ವಾರಂಟ್ ಜಾರಿಗೊಳಿಸಿತ್ತು. ವಾರಂಟ್‌ನ ಅನ್ವಯ ರಜತ್ ಅವರನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ರಜತ್ ಬಂಧನ ವಿಚಾರ ತಿಳಿದು ವಿನಯ್ ಗೌಡ ನ್ಯಾಯಾಲಯಕ್ಕೆ ಹಾಜರಾದರು.

ವಿನಯ್‌ಗೌಡ ಹಾಗೂ ರಜತ್

ಕೋರ್ಟ್ ವಿಚಾರಣೆಗೆ ಹಾಜರಾಗದೆ ನಿರ್ಲಕ್ಷ್ಯ ತೋರಿದ ರಜತ್‌ಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಮತ್ತೊಂದೆಡೆ, ವಿನಯ್ ಗೌಡ ವಿನಾಯಿತಿ ಕೋರಿದ್ದರಿಂದ ನ್ಯಾಯಾಲಯ ದಂಡ ವಿಧಿಸಿದೆ. ಪೊಲೀಸರು, ರಜತ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದರು.

ವಿನಯ್ ಗೌಡ ಮಾತನಾಡಿ, 'ಕಣ್ಣಿನ ಸಮಸ್ಯೆಯ ಕಾರಣಕ್ಕೆ ಮೊದಲ ಬಾರಿ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಪ್ರತಿ 15 ದಿನಕ್ಕೊಮ್ಮೆ ಪೊಲೀಸ್ ಠಾಣೆಗೆ ತೆರಳಿ ಸಹಿ ಮಾಡುತ್ತಿದ್ದೇನೆ. ನನ್ನ ಸಮಸ್ಯೆಯನ್ನು ಕೋರ್ಟ್‌ಗೆ ತಿಳಿಸಿದ್ದೇನೆ. ಮುಂದಿನ ವಿಚಾರಣೆಗೆ ತಪ್ಪದೇ ಹಾಜರಾಗುತ್ತೇನೆ. ರಜತ್ ಬಗ್ಗೆ ಏನೂ ಹೇಳುವ ಸ್ಥಿತಿಯಲ್ಲಿ ಇಲ್ಲ. ನಾನು ದಂಡ ಕಟ್ಟಿ, ನ್ಯಾಯಾಲಕ್ಕೆ ಮನವಿ ಮಾಡಿದ್ದೇನೆ' ಎಂದರು.

ಕಳ್ಳತನ: ಆಟೊ ಚಾಲಕ ಸೇರಿ ಇಬ್ಬರ ಸೆರೆ

ಬೆಂಗಳೂರು: ಮನೆಗಳ್ಳತನ, ದ್ವಿಚಕ್ರ ವಾಹನ ಹಾಗೂ ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಆಟೊ ಚಾಲಕ ಸೇರಿ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿ, ₹20 ಲಕ್ಷ ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆ.ಆರ್.ಪುರ ನಿವಾಸಿ, ಆಟೊ ಚಾಲಕ ಇಮ್ರಾನ್ ಖಾನ್ ಮತ್ತು ಜಯನಗರದ ದಯಾನಂದ ನಗರ ಕೊಳೆಗೇರಿ ನಿವಾಸಿ ಸೈಯದ್ ಇಮ್ತಿಯಾಜ್ ಅಲಿಯಾಸ್ ಚಾಕು ಬಂಧಿತ ಆರೋಪಿಗಳು.

ಮನೆಯ ಬೀಗ ಮುರಿದು ಒಳನುಗ್ಗಿ ಆಭರಣ ಕಳ್ಳತನ ಆಗಿದ್ದ ಬಗ್ಗೆ ಮನೆಯ ಮಾಲೀಕರಾದ ಮಂಜುಳಾ ಅವರು ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಹಳೆ ಆರೋಪಿ ಸೈಯದ್ ಇಮ್ತಿಯಾಜ್‌ನನ್ನು ಬಂಧಿಸಿ ವಿಚಾರಣೆ ನಡೆಸಿದರು. ಬಳಿಕ ಆತ ನೀಡಿದ ಮಾಹಿತಿ ಆಧರಿಸಿ ಇಮ್ರಾನ್ ಖಾನ್‌ನನ್ನು ಬಂಧಿಸಿ, ಚಿನ್ನದ ಉಂಗುರವನ್ನು ವಶಪಡಿಸಿಕೊಂಡಿದ್ದಾರೆ.

ಸೈಯದ್‌ನಿಂದ ಒಟ್ಟು 173 ಗ್ರಾಂ. ತೂಕದ ಚಿನ್ನದ ಆಭರಣ, 570 ಗ್ರಾಂ. ತೂಕದ ಬೆಳ್ಳಿ, ಐದು ಮೊಬೈಲ್ ಹಾಗೂ ನಾಲ್ಕು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ಬಂಧನದಿಂದ ಸಿದ್ದಾಪುರ ಪೊಲೀಸ್ ಠಾಣೆಯ ಐದು ಪ್ರಕರಣ, ಆಡುಗೋಡಿಯ ಎರಡು, ಕಬ್ಬನ್ ಪಾರ್ಕ್, ಹಲಸೂರು ಗೇಟ್ ಠಾಣೆಯ ತಲಾ ಒಂದು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದರು.

ಶ್ರೀ ರಾಮನವಮಿ ಸಂಗೀತೋತ್ಸವ ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಬುಧವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ಪಣಂಬೂರಿನಲ್ಲಿ ಬೈಕ್‌ವೊಂದು ರಾಷ್ಟ್ರೀಯ ಹೆದ್ದಾರಿ 66ರ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮಂಗಳವಾರ ತಡರಾತ್ರಿ ಮೃತಪಟ್ಟಿದ್ದಾನೆ.

ಬೆಂಗಳೂರಿನ ಶ್ರೀಕಾಂತ್ (24) ಮೃತ ಯುವಕ. ಆತ ಕೆಲ ಸಮಯದಿಂದ ನಗರದ ಬಿಜೈನಲ್ಲಿ ಸೋದರಿಯ ಮನೆಯಲ್ಲಿ ಉಳಿದುಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀಕಾಂತ್ ಮಂಗಳವಾರ ರಾತ್ರಿ ಪಣಂಬೂರು ಕಡಲ ಕಿನಾರೆಗೆ ತೆರಳಿದ್ದ. ರಾತ್ರಿ 12 ಗಂಟೆ ಬಳಿಕ ಅಲ್ಲಿಂದ ಹೊರಟು, ಸೋದರಿಯ ಮನೆಗೆ ಬೈಕಿನಲ್ಲಿ ಮರಳುತ್ತಿದ್ದ. ಬೈಕ್ ಪಣಂಬೂರು ಜಂಕ್ಷನ್ ಬಳಿ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ಬಿದ್ದು ಗಾಯಗೊಂಡಿದ್ದ ಯುವಕನನ್ನು ಎ.ಜೆ.ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅಷ್ಟರಲ್ಲೇ ಆತ ಮೃತಪಟ್ಟಿದ್ದಾನೆ ಎಂಬುದಾಗಿ ವೈದ್ಯರು ತಿಳಿಸಿದ್ದರು ಎಂದರು.

'ಬಿದ್ದ ಬೈಕ್ ಹೆದ್ದಾರಿಯಲ್ಲಿ ಸುಮಾರು 20 ಮೀ ದೂರದವರೆಗೆ ಸಾಗಿತ್ತು. ಸ್ಥಳೀಯರು ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ಆಂಬುಲೆನ್ಸ್ ತಲುಪಲು ಸಮಯ ಹಿಡಿದಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸುರತ್ಕಲ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಲಕ್ಷ್ಮೀ ಹೆಬ್ಬಾಳಕರ ಕಾರು ಅಪಘಾತ: ಚಾಲಕ ಬಂಧನ

ಬೆಳಗಾವಿ: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಕಾರಿಗೆ ಡಿಕ್ಕಿ ಹೊಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಚಾಲಕ ಮಧುಕರ ಕೊಂಡಿರಾಮ್ ಸೋಮವಂಶಿ (65) ಎಂಬುವರನ್ನು ಈಚೆಗೆ ಬಂಧಿಸಿದ್ದು, ಲಾರಿ ವಶಕ್ಕೆ ಪಡೆಯಲಾಗಿದೆ. ಅವರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು.

ಲಕ್ಷ್ಮೀ ಹೆಬ್ಬಾಳಕರ

'ಮಹಾರಾಷ್ಟ್ರದ ಪುಣೆ ಜಿಲ್ಲೆಯ ಇಂದಾಪುರ ತಾಲ್ಲೂಕಿನ ತಕರಾರವಾಡಿ ಗ್ರಾಮದ ನಿವಾಸಿ ಮಧುಕರ ಕೊಂಡಿರಾಮ್ ಸೋಮವಂಶಿ ಅವರನ್ನು ವಿಚಾರಣೆ ಮಾಡಲಾಗಿದೆ. ಎಫ್‌ಎಸ್‌ಎಲ್ ತಂಡಗಳು ವಾಹನ ಪರಿಶೀಲಿಸಿದ್ದು, ಅಪಘಾತದ ಬಗ್ಗೆ ಸಾರಿಗೆ ಇಲಾಖೆಯೂ ವರದಿ ನೀಡಿದೆ' ಎಂದು ಅವರು ತಿಳಿಸಿದರು.

ಜ.14ರಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಪ್ರಯಾಣಿಸುತ್ತಿದ್ದ ಕಾರು, ಚನ್ನಮ್ಮನ ಕಿತ್ತೂರು ಬಳಿ ಅಪಘಾತಕ್ಕೆ ಒಳಗಾಗಿತ್ತು.

ಅಪಘಾತ: ಶಿಕ್ಷಣ ಇಲಾಖೆ ಮಹಿಳಾ ಸಿಬ್ಬಂದಿ ಸಾವು

ಮಾಗಡಿ: ಬೆಂಗಳೂರು-ಮೈಸೂರು ರಸ್ತೆಯ ಪಿಇಎಸ್ ಕಾಲೇಜು ಬಳಿ ಬುಧವಾರ ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಶಿಕ್ಷಣ ಇಲಾಖೆಯ ಮಹಿಳಾ ಸಿಬ್ಬಂದಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಾಗಡಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ದ್ವಿತೀಯ ದರ್ಜೆ ಸಹಾಯಕಿ ರಕ್ಷಿತ (26) ಮೃತ ಯುವತಿ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಅವರು ಬೆಂಗಳೂರಿನಲ್ಲಿ ನೆಲಸಿದ್ದರು.

ರಕ್ಷಿತ

ಬೆಂಗಳೂರಿನ ಬಸವನಗುಡಿಯ ವಿದ್ಯಾಪೀಠದ ಬಳಿ ಸಹೋದರನೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಮಾಗಡಿ ರಂಗನಾಥ ಜಾತ್ರೆ ಅಂಗವಾಗಿ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆದ ಚಿತ್ರಮಂಟಪ ಉತ್ಸವದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮ ಮುಗಿಸಿ ಬಸ್‌ನಲ್ಲಿ ಬೆಂಗಳೂರಿಗೆ ತೆರಳಿದ್ದ ಅವರು ಗೊಲ್ಲರಹಟ್ಟಿ ಸ್ಟಾಪ್‌ನಲ್ಲಿ ಇಳಿದು, ಅಲ್ಲಿ ನಿಲ್ಲಿಸಿದ್ದ ತಮ್ಮ ದ್ವಿಚಕ್ರ ವಾಹನದಲ್ಲಿ ವಿದ್ಯಾಪೀಠದ ಮನೆಗೆ ತೆರಳುವಾಗ ಕಾರು ಡಿಕ್ಕಿ ಹೊಡೆದಿದೆ.

'ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ: ಯೂರೋಪ್ ಮತ್ತು ಭಾರತದಿಂದೊಂದು ದೃಷ್ಟಿಕೋನ' 'ಚಾಣಕ್ಯ ಸಂವಾದ'ದಲ್ಲಿ ಚಾರು ರತನ್ ದುಬೆ, ಕೋರ್ಟ್ ಜಾಕೋಬೈಟ್, ಶಾಂತಲಾ ಧರ್ಮರಾಜ್, ಸೌರವ್ ಶರ್ಮ ಭಾಗವಹಿಸಿದ್ದರು

ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ: 'ಚಾಣಕ್ಯ' ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೌಗೋಳಿಕ ಅಸ್ಥಿರತೆ, ಬಲಗೊಳ್ಳುತ್ತಿರುವ ರಕ್ಷಣಾತ್ಮಕ ನೀತಿ ಮತ್ತು ಬದಲಾಗುತ್ತಿರುವ ಮೈತ್ರಿಗಳು ವಿಚಾರಗಳನ್ನು ಇಟ್ಟುಕೊಂಡು ಚಾಣಕ್ಯ ವಿಶ್ವವಿದ್ಯಾಲಯವು 'ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ: ಯೂರೋಪ್ ಮತ್ತು ಭಾರತದಿಂದೊಂದು ದೃಷ್ಟಿಕೋನ' 'ಚಾಣಕ್ಯ ಸಂವಾದ' ವಿಚಾರ ವಿನಿಮಯ ಕಾರ್ಯಕ್ರಮವನ್ನು ನಡೆಸಿತು.

ಹ್ಯಾಂಬರ್ಗ್ ವಿಶ್ವವಿದ್ಯಾಲಯದ ವ್ಯಾಪಾರ, ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ಪೀಠದ ಡೀನ್ ಕೋರ್ಟ್ ಜಾಕೋಬೈಟ್ ದಿಕ್ಸೂಚಿ ಭಾಷಣ ಮಾಡಿದರು. ಯೂರೋಪಿಯನ್ ದೃಷ್ಟಿಕೋನದಿಂದ ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯು ಎದುರಿಸುತ್ತಿರುವ ಸವಾಲುಗಳು, ಜಾಗತಿಕ ವ್ಯಾಪಾರದ ಸಂಕಷ್ಟ, ಬಹುಪಕ್ಷೀಯತೆಯ ಅನಿರೀಕ್ಷಿತ ಸ್ವಭಾವ ಮತ್ತು ಅನಿಶ್ಚಿತತೆಯ ನಡುವೆಯೂ ಭಾರತ-ಯೂರೋಪ್ ನಡುವಿನ ಸಹಕಾರದ ಸಾಧ್ಯತೆಗಳನ್ನು ಅವರು ವಿವರಿಸಿದರು.

ಕಲಾ, ಮಾನವಿಕ ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ಸಹ ಪ್ರಾಧ್ಯಾಪಕ ಸೌರವ್ ಶರ್ಮಾ ಅವರು ಭಾರತವು ಎದುರಿಸುತ್ತಿರುವ ಜಾಗತಿಕ ಅನುಭವಗಳು ಮತ್ತು ಅದರ ರೂಪಾಂತರಗೊಳ್ಳುತ್ತಿರುವ ಜಾಗತಿಕ ಸ್ಥಾನವನ್ನು ವಿವರಿಸಿದರು. ಪತ್ರಕರ್ತೆ ಶಾಂತಲಾ ಧರ್ಮರಾಜ್ ಅವರು ಭಾರತೀಯ ಮಾಧ್ಯಮಗಳಲ್ಲಿ ಜಾಗತಿಕ ರಾಜಕೀಯದ ವರದಿ ಮತ್ತು ವಿಶ್ಲೇಷಣೆಯ ಮೇಲೆ ಬೆಳಕು ಚೆಲ್ಲಿದರು.

ಕಲಾ, ಮಾನವಿಕ ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ಸಹ ಪ್ರಾಧ್ಯಾಪಕರಾದ ಚಾರು ರತನ್ ದುಬೆ ನಿರೂಪಿಸಿದರು.

ಎರಡನೇ ಟರ್ಮಿನಲ್‌ನಲ್ಲಿ 'ಆರ್ಟ್ ಪಾರ್ಕ್' ಆಯೋಜನೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರ ಮುಂಭಾಗ ಬುಧವಾರ ಕಲಾಸಕ್ತರು ಮತ್ತು ಸಾರ್ವಜನಿಕರಿಗಾಗಿ 'ಆರ್ಟ್ ಪಾರ್ಕ್' ಎಂಬ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಿಶ್ವದ 67 ಕಲಾವಿದರ 210ಕ್ಕೂ ಹೆಚ್ಚು ಕಲಾಕೃತಿ ಪ್ರದರ್ಶಿಸಲಾಗಿದೆ. ಅಲ್ಲದೇ, ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಸಮಕಾಲೀನ ಕಲಾ ಪ್ರಕಾರಗಳು ಇಲ್ಲಿವೆ.

ಕಲಾವಿದರು ತೆರೆದ ಆವರಣದಲ್ಲಿ ರಚಿಸಿದ ಚಿತ್ರಗಳು ನೋಡುಗರ ಮನಗೆದ್ದವು.

ಬೆಂಗಳೂರಿನಲ್ಲಿ 75ಕ್ಕೂ ಹೆಚ್ಚು ಆವೃತ್ತಿಗಳಲ್ಲಿ ಆರ್ಟ್ ಪಾರ್ಕ್ ಕಾರ್ಯಕ್ರಮ ನಡೆಸಲಾಗಿದ್ದು, ಕಲಾವಿದರು ಸಾರ್ವಜನಿಕರೊಂದಿಗೆ ಬೆರೆಯಲು ವೇದಿಕೆ ಕಲ್ಪಿಸಿದೆ. ಜೊತೆಗೆ ಸಮಕಾಲೀನ ಕಲೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಕಲಾವಿದ ಎಸ್.ಜಿ. ವಾಸುದೇವ್ ಹೇಳಿದರು.

ಆರ್ಟ್ ಪಾರ್ಕ್‌ನಲ್ಲಿ ಚಿತ್ರ ಬಿಡಿಸುತ್ತಿರುವ ಬಾಲಕಿ

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕೇವಲ ಪ್ರಯಾಣ ತಾಣವಾಗದೇ, ಪ್ರಯಾಣಿಕರ ಮನಸೂರೆಗೊಳಿಸುವ ತಾಣವಾಗಿಸುವುದು ನಮ್ಮ ಆಶಯ' ಎಂದು ವಿಮಾನ ನಿಲ್ದಾಣ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಹರಿ ಮಾರಾರ್ ತಿಳಿಸಿದರು.

ನ್ಯಾಯಮೂರ್ತಿ ಅರವಿಂದ ಕುಮಾರ್ ಅಭಿಮತ

'ಕಾರ್ಮಿಕ ಕಾಯ್ದೆ ಕುರಿತು ಅರಿವಿರಲಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಪ್ರಸಕ್ತವಿರುವ ಔದ್ಯಮಿಕ ನೀತಿಗಳು ಉದ್ಯಮ ಹಾಗೂ ಕಾರ್ಮಿಕರ ನಡುವಿನ ಕಂದಕವನ್ನು ಹೆಚ್ಚಿಸುತ್ತಿವೆ' ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅರವಿಂದ ಕುಮಾರ್ ಅಭಿಪ್ರಾಯಪಟ್ಟರು.

ಕೆಎಲ್‌ಇ ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಮತ್ತು 'ಸಾಂವಿಧಾನಿಕ ತತ್ವಗಳ ಹುಡುಕಾಟ, ಕೈಗಾರಿಕಾ ಸಂಬಂಧಗಳು ಮತ್ತು ಕಾರ್ಮಿಕ ಅಭಿವೃದ್ಧಿಯ ಕಾನೂನುಗಳ ಪರಿಶೀಲನೆ' ಕುರಿತ ರಾಷ್ಟ್ರಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಯಡಿ ಕಾರ್ಯ ನಿರ್ವಹಿಸುವ ಉದ್ಯೋಗಿಗಳು ಕಾರ್ಮಿಕ ಕಾಯ್ದೆಗಳ ಅರಿವು ಹೊಂದಿರಬೇಕು. ಔದ್ಯೋಗಿಕ ಸಮಸ್ಯೆಗಳನ್ನು ಕಾನೂನಾತ್ಮಕವಾಗಿ ಬಗೆಹರಿಸಿಕೊಳ್ಳುವ ಜ್ಞಾನ ದಕ್ಕಿಸಿಕೊಳ್ಳಬೇಕು ಎಂದರು.

ಮುಖ್ಯಾಂಶಗಳು

- ಕಾನೂನಾತ್ಮಕವಾಗಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಜ್ಞಾನ ದಕ್ಕಿಸಿಕೊಳ್ಳಲು ಸಲಹೆ
- ಕಾರ್ಮಿಕರ ಹಿತಾಸಕ್ತಿಗೆ ಮಾರಕವಾದ ಬದಲಾವಣೆ ಒಪ್ಪಿಕೊಳ್ಳುವ ಸ್ಥಿತಿ ಸರಿಯಲ್ಲ

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಮುಖ್ಯಸ್ಥ ಪ್ರೊ. ಸಿ.ಎಸ್.ಪಾಟೀಲ್ ಮಾತನಾಡಿ, 'ನವ-ಉದಾರೀಕರಣದ ಹಿಡಿತದಲ್ಲಿ ಇರುವ ಜಗತ್ತಿನಲ್ಲಿ ಕಾರ್ಮಿಕರ ಹಿತಾಸಕ್ತಿಗೆ ಮಾರಕವಾಗುವ ಹಲವಾರು ಬದಲಾವಣೆಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಿದ್ದೇವೆ. ಇವುಗಳಿಗೆ ಕಾನೂನಾತ್ಮಕ ಪರಿಹಾರಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಇದೆ' ಎಂದರು. ಸಮ್ಮೇಳನದಲ್ಲಿ 25ಕ್ಕೂ ಹೆಚ್ಚು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು. 80 ಸಂಶೋಧನಾ ಪ್ರಬಂಧಗಳು ಮಂಡನೆಯಾದವು.



ಸಮ್ಮೇಳನದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಮಾತನಾಡಿದರು

ಮೇ 12ಕ್ಕೆ ಟೆಕ್ ಹ್ಯಾಕಥಾನ್ 2.0

ಬೆಂಗಳೂರು: ಈಶಾನ್ಯ ಪ್ರಾದೇಶಿಕ ಸಮುದಾಯ ಸಂಪನ್ಮೂಲ ನಿರ್ವಹಣಾ ಸೊಸೈಟಿ (ಎನ್‌ಇಆರ್‌ಸಿಒಆರ್‌ಎಂಎಸ್) ಮತ್ತು ಅಮಂತ್ಯ ಟೆಕ್ನಾಲಜೀಸ್ ಮೇ 12ರಂದು ಹೆಬ್ಬಾಳದ ಕೋರ್ಟ್ ಯಾರ್ಡ್‌ನಲ್ಲಿ ಎನ್‌ಇಆರ್ ಟೆಕ್ ಹ್ಯಾಕಥಾನ್ 2.0 ಆಯೋಜಿಸಿದೆ.

'5ಜಿ ಬಳಕೆಯ ಪ್ರಕರಣಗಳಲ್ಲಿ ವೈಜ್ಞಾನಿಕ ಸಂಶೋಧನೆ ಹೆಚ್ಚಿಸುವ' ಕುರಿತು ಹ್ಯಾಕಥಾನ್ ಆಯೋಜಿಸಲಾಗಿದೆ. ವಿಜೇತ ತಂಡಕ್ಕೆ ₹10 ಲಕ್ಷ, 3 ತಂಡಗಳಿಗೆ ತಲಾ ₹2 ಲಕ್ಷ ಸಮಾಧಾನಕರ ಬಹುಮಾನ ನೀಡಲಾಗುವುದು. ಏ.28ರೊಳಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ: www.nec5g.org, 93424 83454.

WALK-IN INTERVIEW ALERT!
Popular Vehicles & Services Ltd.
Join one of India's top Maruti Suzuki dealers!
We're hiring: Sales Executives | Team Leaders | Evaluators | Mechanics | Supervisors |
Date: April 18th To 20th (Friday to Sunday)
Time: 10 AM – 5 PM
Interview Location: Next to CHC, Old Madras Road, Avalahalli, Bengaluru - 560049
Bring your resume & certificates!
Contact: 9035030720 | blr.region.hr@popularv.com

ಸ್ಪರ್ಧಾ ವಾಣಿ

ಸಾಮಾನ್ಯ ವರ್ಗದ ಕ್ರೀಡಾಪಟುಗಳಿಗೆ : **38** ವರ್ಷ
ಪ್ರವರ್ಗ-1ಅನ್ನು ಹೊರತುಪಡಿಸಿ ಉಳಿದ ಹಿಂದುಳಿದ ವರ್ಗಗಳ ಕ್ರೀಡಾಪಟುಗಳಿಗೆ: **40** ವರ್ಷ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1ರ ಕ್ರೀಡಾಪಟುಗಳಿಗೆ : **45** ವರ್ಷ

ಪೊಲೀಸ್ ಇಲಾಖೆ ನೇಮಕಾತಿ

ಕ್ರೀಡಾ ಕೋಟಾ ಪ್ರಮಾಣ ಹೆಚ್ಚಳ

ರಾಮಸ್ವಾಮಿ ಹುಲಕೋಡು

ರಾಜ್ಯದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪೊಲೀಸ್ ಇಲಾಖೆ ಸಿಹಿ ಸುದ್ದಿ ನೀಡಿದೆ. ಇಲಾಖೆಯಲ್ಲಿನ ಎಲ್ಲ ಹುದ್ದೆಗಳ ನೇಮಕದ ಸಂದರ್ಭದಲ್ಲಿ ಪ್ರತಿಭಾವಂತ ಕ್ರೀಡಾಪಟುಗಳಿಗೆ ನೀಡುತ್ತಿದ್ದ ಮೀಸಲಾತಿ ಪ್ರಮಾಣವನ್ನು ಶೇ 2ರಿಂದ ಶೇ 3ಕ್ಕೆ ಹೆಚ್ಚಿಸಿದೆ. ಈ ಸಂಬಂಧ ಇದೇ ಏಪ್ರಿಲ್ 8ರಂದು ಅಧಿಸೂಚನೆ ಹೊರಡಿಸಲಾಗಿದೆ.

ಇದರ ಜತೆಯಲ್ಲಿಯೇ, ಈ ಕ್ರೀಡಾ ಕೋಟಾದಡಿ ನೇಮಕವಾಗುವ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನೂ ಹೆಚ್ಚಿಸಲಾಗಿದೆ. ಇದರಿಂದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಕ್ರೀಡೆಯಲ್ಲಿ ಸಾಧನೆ ಮಾಡಿ, ನಂತರ ಪೊಲೀಸ್ ಇಲಾಖೆಯಲ್ಲಿ 'ಉದ್ಯೋಗ ಭದ್ರತೆ' ಪಡೆಯಲು ಸಾಧ್ಯವಾಗಲಿದೆ. ರಾಜ್ಯದಲ್ಲಿ 2021ರವರೆಗೆ ಅರಣ್ಯ ಇಲಾಖೆ ಮಾತ್ರ ಕ್ರೀಡಾ ಕೋಟಾದಡಿ ನೇಮಕ ಮಾಡಿಕೊಳ್ಳುತ್ತಿತ್ತು. ಪೊಲೀಸ್ ಇಲಾಖೆಯೂ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅವಕಾಶ ನೀಡಿ, ಉದ್ಯೋಗ ಭದ್ರತೆ ಒದಗಿಸಬೇಕೆಂದು ಒತ್ತಾಯಿಸಲಾಗುತ್ತಿತ್ತು.

ಹೀಗಾಗಿ 2020ರಲ್ಲಿ ಇಲಾಖೆಯು ಈ ಮೀಸಲು ಜಾರಿಗೆ ಸಂಬಂಧಿಸಿದಂತೆ ವಿಶೇಷ ನಿಯಮ ರೂಪಿಸಿತ್ತು. ಇದಕ್ಕೆ 'ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು (ಪೊಲೀಸ್ ಕಾನ್‌ಸ್ಟೆಬಲ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಪೊಲೀಸ್ ಉಪಾಧೀಕ್ಷಕರ ಹುದ್ದೆಗೆ ಪ್ರತಿಭಾವಂತ ಕ್ರಿಡಾಪಟುಗಳ ನೇರ ನೇಮಕಾತಿ) (ವಿಶೇಷ) ನಿಯಮಗಳು-2020' ಎಂದು ಹೆಸರಿಡಲಾಗಿತ್ತು. 2021ರ ಮಾ. 2ರಂದು ಈ ವಿಶೇಷ ನೇಮಕಾತಿ ನಿಯಮ ಜಾರಿಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿತ್ತು.

ಇದರ ಪ್ರಕಾರ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಬಹುಮಾನ ಪಡೆದು ಅರ್ಹತೆ ಹೊಂದಿದ (ಮೆರಿಟೋರಿಯಸ್ ಸ್ಪೋರ್ಟ್ಸ್ ಪರ್ಸನ್ಸ್) ಕ್ರೀಡಾಪಟುಗಳು ಮಾತ್ರ ಈ ಮೀಸಲು ಸೌಲಭ್ಯ ಪಡೆಯಲು, ಅಂದರೆ ಕ್ರೀಡಾ ಕೋಟಾದಡಿ ನೇಮಕಗೊಳ್ಳಲು ಅರ್ಹರು ಎಂದು ಹೇಳಲಾಗಿತ್ತು. ಇದರ ಪ್ರಕಾರವೇ ಕಳೆದ ನಾಲ್ಕು ವರ್ಷಗಳಿಂದ ನೇಮಕ ನಡೆಯುತ್ತಿದೆ.

ಇನ್ನು ಮುಂದೆ ಇಲಾಖೆಯು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಶೇ 2ಕ್ಕೆ ಬದಲಾಗಿ ಶೇ 3ರಷ್ಟು ಹುದ್ದೆಗಳನ್ನು ಕ್ರೀಡಾಪಟುಗಳಿಗೆ ಮೀಸಲಿಡಲಿದೆ. ಪೊಲೀಸ್ ಇಲಾಖೆಯೂ ಕ್ರೀಡಾ ಕೋಟಾ ಜಾರಿಗೆ ತಂದ ಮೇಲೆ ಸರ್ಕಾರದ ಎಲ್ಲ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿಯೂ ಪ್ರತಿಭಾವಂತ ಕ್ರೀಡಾಪಟುಗಳಿಗೆ ಮೀಸಲು ನೀಡಬೇಕೆಂಬ ಬೇಡಿಕೆ ತೀವ್ರಗೊಂಡಿತ್ತು. ಈ ಸಂಬಂಧ ಕಳೆದ ವರ್ಷ ನಿರ್ಧಾರ ತೆಗೆದುಕೊಂಡಿದ್ದ ರಾಜ್ಯ ಸರ್ಕಾರ, ಕರ್ನಾಟಕ ನಾಗರಿಕ ಸೇವಾ ನೇಮಕಾತಿ ನಿಯಮಗಳ ಅಡಿಯಲ್ಲಿ ನೇಮಕಮಾಡಿಕೊಳ್ಳುವಾಗ ಪ್ರತಿ ಇಲಾಖೆಯ ಮಂಜೂರಾದ ವೃಂದ ಬಲದ ಶೇಕಡಾ ಎರಡರಷ್ಟು ಹುದ್ದೆಗಳನ್ನು ಕ್ರೀಡಾ ಸಾಧಕ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದು ಎಂದು 2024ರ ಸೆಪ್ಟೆಂಬರ್ 18ರಂದು ಅಧಿಸೂಚನೆ ಹೊರಡಿಸಿತ್ತು. ಆದರೆ, ಈ ಮೀಸಲು ಜಾರಿಗೆ ಡಿಸೆಂಬರ್‌ನಲ್ಲಿ ಸರ್ಕಾರವೇ ತಡೆ ನೀಡಿದೆ. ಈ ಸಂಬಂಧ ನೇಮಕಾತಿ ಪ್ರಾಧಿಕಾರಗಳಿಗೆ ಆದೇಶ ನೀಡಿದೆಯಾದರೂ, ಕಾರಣವೇನೆಂದು ಸ್ಪಷ್ಟಪಡಿಸಿಲ್ಲ. ಈ ತಡೆಯಾಜ್ಞೆ ತೆರವುಗೊಳ್ಳಬಹುದೆಂದು ನಿರೀಕ್ಷಿಸಲಾಗುತ್ತಿದೆ.

ಕ್ರಿಕೆಟರಿಗಿಲ್ಲ ಅವಕಾಶ!

ಪೊಲೀಸ್ ಇಲಾಖೆಯು ಈ ಮೀಸಲು ನೀಡಲು ಪಟ್ಟಿ ಮಾಡಿರುವ 20 ಕ್ರೀಡೆಗಳಲ್ಲಿ ಜನಪ್ರಿಯ ಕ್ರೀಡೆಯಾದ ಕ್ರಿಕೆಟ್ ಇಲ್ಲ. ಹೀಗಾಗಿ ಪ್ರತಿಭಾವಂತ ಕ್ರಿಕೆಟಿಗರು ಈ ಮೀಸಲು ಸೌಲಭ್ಯ ಪಡೆದು ಪೊಲೀಸ್ ಇಲಾಖೆಯಲ್ಲಿ ಹುದ್ದೆ ಪಡೆಯಲು ಸಾಧ್ಯವಾಗುವುದಿಲ್ಲ. ನಮ್ಮ ಹೆಮ್ಮೆಯ ಗ್ರಾಮೀಣ ಕ್ರೀಡೆ ಕಬಡ್ಡಿ ಆಟಗಾರರಿಗೆ ಅವಕಾಶ ನೀಡಲಾಗಿದೆ. ಅಥ್ಲೆಟಿಕ್ಸ್, ಆರ್ಚರಿ, ಬ್ಯಾಸ್ಕೆಟ್ ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್ಬಾಲ್, ಜಿಮ್ನಾಸ್ಟಿಕ್, ಹಾಕಿ, ಹ್ಯಾಂಡ್ಬಾಲ್, ಜುಡೊ, ಶೂಟಿಂಗ್, ವಾಲಿವಾಲ್, ವೇಟ್ ಲಿಫ್ಟಿಂಗ್, ಕುಸ್ತಿ (Wrestling), ಸ್ವಿಮ್ಮಿಂಗ್, ವಾಟರ್ ಸ್ಪೋರ್ಟ್ಸ್ (ರೋಯಿಂಗ್, ಕೆನೊಯಿಂಗ್), ಟೆನಿಸ್, ಬ್ಯಾಡ್ಮಿಂಟನ್ ಆಟಗಳು ಈ ಪಟ್ಟಿಯಲ್ಲಿವೆ.

ಈ ಎಲ್ಲ ಬದಲಾವಣೆಗಳನ್ನು ಮಾಡಿರುವ ಅಧಿಸೂಚನೆ ಈಗಾಗಲೇ ಪ್ರಕಟವಾಗಿರುವುದರಿಂದ ಇನ್ನು ಮುಂದೆ ನೇಮಕ ಪ್ರಕ್ರಿಯೆ ನಡೆಸುವಾಗ ಇದನ್ನು ಅನ್ವಯಿಸಲಾಗುತ್ತದೆ. ಗೃಹಸಚಿವ ಡಾ. ಜಿ. ಪರಮೇಶ್ವರ ನೀಡಿರುವ ಹೇಳಿಕೆ ಪ್ರಕಾರ ಪೊಲೀಸ್ ಇಲಾಖೆಯಲ್ಲಿ ಈಗ ಒಟ್ಟು 18,581 ಹುದ್ದೆ ಖಾಲಿ ಇವೆ. ಇವುಗಳಲ್ಲಿ ಶೇ 3ರಷ್ಟು ಹುದ್ದೆಗಳನ್ನು ನೇಮಕಾತಿ ಸಂದರ್ಭದಲ್ಲಿ ಪ್ರತಿಭಾವಂತ ಕ್ರೀಡಾಪಟುಗಳು ತಮ್ಮದಾಗಿಸಿಕೊಳ್ಳಬಹುದಾಗಿದೆ.

ನೇಮಕ ಹೇಗೆ?

ಪೊಲೀಸ್ ಇಲಾಖೆಯು ಕ್ರೀಡಾ ಕೋಟಾದಡಿ ನೇಮಕ ಮಾಡಿಕೊಳ್ಳಲು ಪ್ರತ್ಯೇಕವಾಗಿ ನೇಮಕ ಪ್ರಕ್ರಿಯೆ ನಡೆಸುತ್ತದೆ. ವಿಶೇಷ ನೇಮಕಾತಿ ನಿಯಮದಂತೆಯೇ ಇದಕ್ಕಾಗಿ ನೇಮಕಾತಿ ಮತ್ತು ತರಬೇತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ನೇತೃತ್ವದಲ್ಲಿ ಆರು ಸದಸ್ಯರ ನೇಮಕಾತಿ ಸಮಿತಿ ರಚಿಸಲಾಗುತ್ತದೆ. ಈ ಸಮಿತಿಯಲ್ಲಿ, ಭಾರತೀಯ ಕ್ರೀಡಾ ಪ್ರಾಧಿಕಾರದ ನಿರ್ದೇಶಕರು, ಪೊಲೀಸ್ ಇಲಾಖೆಯ ಕ್ರೀಡಾ ಪ್ರೋತ್ಸಾಹ ಮಂಡಳಿಯ ಅಧ್ಯಕ್ಷರು ಇರಲಿದ್ದಾರೆ. ಕ್ರೀಡಾ ಪ್ರೋತ್ಸಾಹ ಮಂಡಳಿಯ ಕಾರ್ಯದರ್ಶಿ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಅಗತ್ಯವೆನಿಸಿದರೆ, ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್ ಪ್ರತಿನಿಧಿಯನ್ನು ಮತ್ತು ಹೆಸರಾಂತ ಕ್ರೀಡಾಪಟುವನ್ನು ಅಥವಾ ಕ್ರೀಡಾತಜ್ಞರನ್ನು ಈ ನೇಮಕಾತಿ ಸಮಿತಿಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನೀಡಲಾಗಿದೆ. ಒಟ್ಟು 20 ಆಟಗಳಲ್ಲಿ ಸಾಧನೆ ಮಾಡಿದವರನ್ನು ಮಾತ್ರ ಈ ನೇಮಕಾತಿಯಲ್ಲಿ ಪರಿಗಣಿಸಲಾಗುತ್ತದೆ. ಈ ಆಟಗಳಿಗೆ ಸಂಬಂಧಿಸಿದ 29 ಕ್ರೀಡಾಕೂಟಗಳನ್ನು ಪಟ್ಟಿ ಮಾಡಲಾಗಿದ್ದು, ಇದರಲ್ಲಿ ಕ್ರೀಡಾಪಟು ಪದಕ ಪಡೆದಿರಬೇಕು. ಚಿನ್ನ, ಬೆಳ್ಳಿ, ಕಂಚು ಇವುಗಳಲ್ಲಿ ಯಾವ ಪದಕ ಪಡೆದಿರುತ್ತಾರೆ ಎಂಬುದರ ಮೇಲೆ 'ಕೃಪಾಂಕ' ಅಥವಾ ಗ್ರೇಡಿಂಗ್ ನಿಗದಿಮಾಡಲಾಗುತ್ತದೆ. ಉದಾಹರಣೆಗೆ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಕ್ರೀಡಾಪಟುಗೆ 75 ಕೃಪಾಂಕ ನೀಡಲಾಗುತ್ತದೆ. ಬೆಳ್ಳಿ ಗೆದ್ದಿದ್ದರೆ 74 ಕೃಪಾಂಕ ನೀಡಲಾಗುತ್ತದೆ. ಈ ಅಂಕಗಳ ಆಧಾರದಲ್ಲಿಯೇ ನೇಮಕ ನಡೆಯಲಿದೆ.

ಈ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಅಥವಾ ಸಹಿಷ್ಣುತೆ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ. ಪ್ರತಿಭಾವಂತರು ಮಾತ್ರ ಈ ಮೀಸಲಿನ ಪ್ರಯೋಜನ ಪಡೆಯುವಂತೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ನೇಮಕಾತಿ ಸಮಿತಿಯು ಅಭ್ಯರ್ಥಿಯಾಗಿರುವ ಕ್ರೀಡಾಪಟುವಿನ ಸಾಧನೆಯನ್ನು ಪರಿಶೀಲಿಸಿ, ಆಯ್ಕೆ ಪಟ್ಟಿ ಸಿದ್ಧಪಡಿಸುತ್ತದೆ. ಈ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲೂ ಅವಕಾಶ ನೀಡಲಾಗಿರುತ್ತದೆ.

ಯಾವ ಹುದ್ದೆಗೆ ಎಷ್ಟು ಕೃಪಾಂಕ?

ವಿಶೇಷ ನೇಮಕಾತಿ ನಿಯಮದಲ್ಲಿ, ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ 46 ಮತ್ತು ಅದಕ್ಕಿಂತ ಹೆಚ್ಚು ಕೃಪಾಂಕ ಪಡೆದಿರಬೇಕು. ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಕೃಪಾಂಕ ಪಡೆದಿರಬೇಕು ಎಂದು ಹೇಳಲಾಗಿತ್ತು. ಇದೀಗ ಈ ನಿಯಮಕ್ಕೂ ತಿದ್ದುಪಡಿ ತರಲಾಗಿದ್ದು, ಯಾವುದೇ ಹುದ್ದೆಗೆ ನೇಮಕಗೊಳ್ಳಬೇಕಾದರೂ ಅಭ್ಯರ್ಥಿಯು 55 ಅಥವಾ ಅದಕ್ಕಿಂತ ಹೆಚ್ಚು ಕೃಪಾಂಕ ಪಡೆದಿರಲೇಬೇಕೆಂದು ಕಡ್ಡಾಯಗೊಳಿಸಲಾಗಿದೆ.

ಡಿವೈಎಸ್‌ಪಿ ಹುದ್ದೆಗೆ 55 ಅಥವಾ ಅದಕ್ಕಿಂತ ಹೆಚ್ಚು ಕೃಪಾಂಕ ಪಡೆದಿರಬೇಕು. ಸಾರ್ಕ್, ಕಾಮನ್‌ವೆಲ್ತ್, ಏಷಿಯನ್ ಗೇಮ್ಸ್, ಒಲಿಂಪಿಕ್ಸ್, ಡೇವಿಸ್ ಕಪ್, ಟೆನಿಸ್ ವರ್ಲ್ಡ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಪಡೆದವರು ಮಾತ್ರ ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ನೇಮಕಾತಿ ಅಧಿಸೂಚನೆ ಪ್ರಕಟವಾದ ದಿನಾಂಕಕ್ಕಿಂತ 10 ವರ್ಷಗಳ ಮೊದಲು ಕ್ರೀಡಾಪಟು ಪದಕ ಪಡೆದಿರಬೇಕು. ಅದಕ್ಕಿಂತಲೂ ಹಿಂದೆ ಪದಕ ಪಡೆದಿದ್ದರೆ ಪರಿಗಣಿಸಲಾಗುವುದಿಲ್ಲ. ಸಾಮಾನ್ಯ ನೇಮಕಾತಿಗೆ ನಿಗದಿ ಪಡಿಸಿದ ವಿದ್ಯಾರ್ಹತೆಯೇ ಈ ವಿಶೇಷ ನೇಮಕಕ್ಕೂ ಅನ್ವಯವಾಗುತ್ತದೆ.

ವಯೋಮಿತಿ ಎಷ್ಟು?

ಇದುವರೆಗೆ ಕ್ರೀಡಾ ಕೋಟಾದಡಿ ನೇಮಕ ಮಾಡಿಕೊಳ್ಳುವಾಗಲೂ ಸಾಮಾನ್ಯ ನೇಮಕ ಪ್ರಕ್ರಿಯೆಯಲ್ಲಿ ಅನುಸರಿಸಲಾಗುತ್ತಿದ್ದ ವಯೋಮಿತಿಯನ್ನೇ ಅನ್ವಯಿಸಲಾಗುತ್ತಿತ್ತು. ಆದರೆ ಇದೀಗ ಕ್ರೀಡಾ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು ಹೆಚ್ಚಿಸಲಾಗಿದೆ.

ಯಾವುದೇ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಕನಿಷ್ಠ ವಯೋಮಿತಿ 21 ವರ್ಷ. ❖

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಅರ್ಜೆಂಟೀನಾದ ಯಾವ ಪ್ರದೇಶವನ್ನು ಕೃಷಿ ಚಟುವಟಿಕೆಯ ಹೃದಯಭಾಗ ಎನ್ನಲಾಗುತ್ತದೆ?
ಎ. ಪಂಪಸ್ ಬಿ. ದ ಆಂಡೀಸ್
ಸಿ. ಪಟಗೋನಿಯ ಡಿ. ಸೆಟಗೋನಿಯ
ಉತ್ತರ: ಎ

2. ಭಾರತ ಮತ್ತು ಅರ್ಜೆಂಟೀನಾ ರಾಷ್ಟ್ರಗಳು ಯಾವ ವಲಯದ ಒಪ್ಪಂದಕ್ಕೆ ಸಹಿ ಹಾಕಿವೆ?
ಎ. ಮುಕ್ತ ವ್ಯಾಪಾರ ಒಪ್ಪಂದ ಬಿ. ಸಾಂಸ್ಕೃತಿಕ ವಿನಿಮಯ ಒಪ್ಪಂದ
ಸಿ. ಸಾಮಾಜಿಕ ಭದ್ರತಾ ಒಪ್ಪಂದ
ಡಿ. ಮಹಿಳಾ ಹಕ್ಕುಗಳ ಸಂರಕ್ಷಣಾ ಒಪ್ಪಂದ
ಉತ್ತರ: ಸಿ

3. ಇ-ಆಡಳಿತಕ್ಕೆ ಸಂಬಂಧಿಸಿ ಯಾವ ಯೋಜನೆಗಳನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ?
1. ಭೂಮಿ 2. ಖಜಾನೆ 3. ಮನುಜ 4. ನಿರಂತರ ಸೇವಾ
ಸರಿ ಉತ್ತರ ಗುರುತಿಸಿ
ಎ. 1 ಮತ್ತು 2 ಬಿ. 2 ಮತ್ತು 3 ಸಿ. 3 ಮತ್ತು 4 ಡಿ. 4 ಮಾತ್ರ
ಉತ್ತರ: ಎ

4. ಸ್ಮಾರ್ಟ್ ಆಡಳಿತದಲ್ಲಿ ಕೆಳಗಿನ ಯಾವ ಅಂಶಗಳನ್ನು ಅಳವಡಿಸಿಕೊಳ್ಳಲಾಗುತ್ತದೆ?
1. ಸರಳೀಕರಣ 2. ಆಡಳಿತ ವ್ಯವಸ್ಥೆಯಲ್ಲಿ ಮೌಲ್ಯಗಳ ಅಳವಡಿಕೆ
3. ಉತ್ತರದಾಯಿತ್ವ 4. ಪ್ರತಿಕ್ರಿಯಾಶೀಲ ಆಡಳಿತ
ಸರಿ ಉತ್ತರ ಗುರುತಿಸಿ
ಎ. 1 ಮತ್ತು 2 ಬಿ. 1, 2, 3 ಮತ್ತು 4 ಸಿ. 2 ಮತ್ತು 4 ಡಿ. 3 ಮತ್ತು 4
ಉತ್ತರ: ಬಿ

5 'ಭಾಮ ಕಲಾಪಂ' ನಾಟಕ ಯಾವ ಲೇಖಕರಿಗೆ ಸಂಬಂಧಿಸಿದೆ?
ಎ. ಸಿದ್ಧೇಂದ್ರ ಯೋಗಿ ಬಿ. ಸಿದ್ದೇಶ್ವರ ಮುನಿ
ಸಿ. ಲೋಕೇಶ್ವರ ಯೋಗಿ ಡಿ. ಓಹಿಲೇಶ್ವರ ಯೋಗಿ
ಉತ್ತರ: ಎ

6. 'ಜಲಚಿತ್ರ ನೃತ್ಯಂ'ಗೆ ಸಂಬಂಧಿಸಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಈ ನೃತ್ಯ ಸ್ವರೂಪದಲ್ಲಿ ರಾಮಾಯಣದ ಕಥಾ ಹಂದರವನ್ನು ಪ್ರದರ್ಶಿಸಲಾಗುತ್ತದೆ
2. ಈ ನೃತ್ಯ ಸ್ವರೂಪದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥಾ ಹಂದರ ಪ್ರದರ್ಶಿಸಲಾಗುತ್ತದೆ
3. ನೃತ್ಯಪಟು ತನ್ನ ಕಾಲಿನ ಬೆರಳನ್ನು ಬಳಸಿಕೊಂಡು ಚಿತ್ರವನ್ನು ಬಿಡಿಸುವ ನೃತ್ಯ ಶೈಲಿಯಾಗಿದೆ
ಸರಿ ಉತ್ತರ ಗುರುತಿಸಿ
ಎ. 1 ಮತ್ತು 2 ಬಿ. 1 ಮತ್ತು 3 ಸಿ. 3 ಮಾತ್ರ ಡಿ. 2 ಮಾತ್ರ
ಉತ್ತರ: ಸಿ

7. ಯಾವ ಸ್ಥಳದಲ್ಲಿ ನೂತನ ಪರಮಾಣು ವಿದ್ಯುತ್ ಉತ್ಪಾದನಾ ಘಟಕ ಆರಂಭಿಸಲಾಗುತ್ತಿದೆ?
ಎ. ಗೋರಖ್ ಪುರ್, ಹರಿಯಾಣ ಬಿ. ಭೋಪಾಲ್, ಮಧ್ಯ ಪ್ರದೇಶ
ಸಿ. ಪ್ರಯಾಗ್ ರಾಜ್, ಉತ್ತರ ಪ್ರದೇಶ ಡಿ. ತಿರುವನಂತಪುರಂ, ಕೇರಳ
ಉತ್ತರ: ಎ

8. ಕಲ್ಪಕಂನಲ್ಲಿ ಪ್ರಾಯೋಗಿಕವಾಗಿ ಕಾರ್ಯನಿರ್ವಹಿಸುತ್ತಿರುವ ಥೋರಿಯಂ ಆಧಾರಿತ ಪರಮಾಣು ಘಟಕದ ಸರಿಯಾದ ಹೆಸರನ್ನು ಗುರುತಿಸಿ.
ಎ. ಕಾಮಿನಿ ಬಿ. ದುರ್ಗಾ ಸಿ. ಭವಾನಿ ಡಿ. ಚಾಮುಂಡಿ
ಉತ್ತರ: ಎ

9. ಕೆಳಗಿನ ಯಾವ ಅಂಶಗಳನ್ನು ಭಾರತದ ರಾಜ ತಾಂತ್ರಿಕ ವ್ಯವಸ್ಥೆಯ ಪ್ರಮುಖ ಸ್ತಂಭಗಳೆನ್ನಬಹುದು?
1. ವಸುದೈವ ಕುಟುಂಬಕಂ
2. ವಿವಿಧ ಧ್ರುವಗಳ ಮೇಲೆ ಗಮನ ವಹಿಸುವುದು
3. ಭಾರತದ ರಾಜ್ಯ ತಾಂತ್ರಿಕ ನೀತಿಯನ್ನು ಅಂತರರಾಷ್ಟ್ರೀಯ ಶಕ್ತಿಯಾಗಿ ಪರಿವರ್ತಿಸುವುದು
ಸರಿ ಉತ್ತರ ಗುರುತಿಸಿ
ಎ. ಒಂದು ಹೇಳಿಕೆ ಸರಿ ಇದೆ ಬಿ. ಎರಡು ಹೇಳಿಕೆಗಳು ಸರಿ ಇದೆ
ಸಿ. ಮೂರು ಹೇಳಿಕೆಗಳು ಸರಿ ಇದೆ ಡಿ. ಮೇಲಿನ ಮೂರು ಹೇಳಿಕೆಗಳು ತಪ್ಪು
ಉತ್ತರ: ಸಿ

10. ಈ ಹೇಳಿಕೆಗಳು ಯಾವ ಹಂತದ ವಿದೇಶಾಂಗ ನೀತಿಯನ್ನು ಸರಿಯಾದ ರೀತಿಯಲ್ಲಿ ವಿವರಿಸುತ್ತದೆ?
1. ಭಾರತ ಜಾಗತಿಕ ಮಟ್ಟದಲ್ಲಿ ಸಮತೋಲನ ತರುವ ಶಕ್ತಿಯಾಗಿ ಉಗಮವಾಯಿತು
2. ಅಮೆರಿಕದೊಂದಿಗೆ ಒಂದೆಡೆ ಅಣು ಒಪ್ಪಂದಕ್ಕೆ ಸಹಿ ಹಾಕಿತು
3. ವಿಶ್ವ ವ್ಯಾಪಾರ ಒಕ್ಕೂಟದ ಕೃಷಿ ನೀತಿಯ ವಿಚಾರದಲ್ಲಿ ಚೀನಾಗೆ ಸಹಕಾರ ನೀಡಿತ್ತು
ಎ.ಎರಡನೇ ಹಂತದ ವಿದೇಶಾಂಗ ನೀತಿ
ಬಿ.ಮೂರನೇ ಹಂತದ ವಿದೇಶಾಂಗ ನೀತಿ
ಸಿ. ನಾಲ್ಕನೇ ಹಂತದ ವಿದೇಶಾಂಗ ನೀತಿ
ಡಿ. ಐದನೇ ಹಂತದ ವಿದೇಶಾಂಗ ನೀತಿ
ಉತ್ತರ: ಡಿ

ಸಿಇಟಿ-ನೀಟ್ ಪರೀಕ್ಷೆ ದಿಕ್ಸೂಚಿ

PUC-CET:BIOLOGY

48). Sonalika and Kalyan Sona are varieties of:
a) wheat b) rice
c) millet d) tobacco
Ans:- a

49) During the chemiosmotic synthesis of ATP in photosynthesis:
a) The protons accumulate in the intermembrane space of chloroplast
b) The proton gradient is not required
c) The protons accumulate in the intermembrane space of the mitochondrion
d) The protons accumulate within the lumen of the thylakoids
Ans: (c)
Expln:- During chemiosmotic synthesis, ATP synthesis is linked to the development of a proton gradient across a membrane. This time these are membranes of the thylakoid. There is one difference though, here the proton accumulation is towards the inside of the membrane, i.e., in the lumen. In respiration, protons accumulate in the intermembrane space of the mitochondria when electrons move through the ETS.

50) Which one of the following is not a fungal disease?
a) Rust of wheat b) Smut of Bajra
c) Black rot of crucifers
d) Red rot of sugarcane
Ans:- c

51) Identify the 'order' from the following:
a) Carnivora b) Muscidae
c) Insecta d) Panthera
Answer: (a)
Expln:- • Carnivora is the order of eutherian mammals, which refer to any meat-eating organism. Example- Dogs, Cats, Wolves etc.
• Muscidae is a family of flies found in the superfamily Muscoidea. Example- Housefly, Musca.
• Insects are a class of hexapod invertebrates within the arthropod phylum. Example- Ant, Bugs etc.
• Panthera is a genus within the Felidae family. Example- Tiger, Lion etc.

52) In virus-infected plants the meristematic tissues in both apical and axillary buds are free of virus because:
a) the dividing cells are virus resistant
b) meristems have anti viral compounds
c) the cell division of meristems are faster than the rate of viral multiplication
d) Viruses cannot multiply within meristem cell (S).
Ans:- c

53) Several South Indian states raise 2 - 3 crops of rice annually. The agronomic feature that makes this possible is because of………………
a) shorter rice plant
b) better irrigation facilities
c) early yielding rice variety
d) disease resistant rice variety
Ans:- c

54) Which of the following options show the characters of mycoplasma?
a) Smallest living cell without cell wall survive with oxygen
b) Smallest living cell with cell wall survive with oxygen
c) Smallest living cell without cell wall survive without oxygen
d) Smallest living cell with cell wall survive without oxygen
Answer: (c)
Expln:- Mycoplasma is the smallest cell which does not possess a cell wall as an outer covering but has cell membrane as an outer covering. As they do not have cell walls they do not get affected by the antibiotics and cause severe diseases to the plants and animals. They can even survive without oxygen and respire anaerobically.

55) Which one of the following combination would a sugarcane farmer look for in the sugarcane crop?
a) Thick stem, long internodes, high sugar content and disease resistant
b) Thick stem, high sugar content and profuse flowering
c) Thick stem, short internodes, high sugar content, disease resistant
d) Thick stem, low sugar content, disease resistant
Ans:- a

56) Fungicides and antibiotics are chemicals that:
a) enhance yield and disease resistance
b) kill pathogenic fungi and bacteria, respectively
c) kill all pathogenic microbes
d) kill pathogenic bacteria and fungi respectively.
Ans:- b

57) Use of certain chemicals and radiation to change the base sequences of genes of crop plants is termed:
a) recombinant DNA technology
b) transgenic mechanism
c) mutation breeding d) gene therapy
Ans:- c

58) The scientific process by which crop plants are enriched with certain desirable nutrients is called:
a) crop protection b) breeding
c) bio-fortification d) bio-remediation
Ans:- c

NEET:CHEMISTRY

25) The pair of compounds having identical shapes for their molecules is
a) CH_4, SF_4 b) BCl_2, ClF_3
c) XeF_2, $ZnCl_2$ d) Sl_2, CO_2
Ans:- (c)
Expln:- XeF_2 is linear in shape with 2 bond pairs and 3 lone pairs of electrons.
$ZnCl_2$ is also linear in shape with 2 bond pairs of electrons.

26) Intermolecular forces are forces of attraction and repulsion between interacting particles that will include:
A. dipole-dipole forces.
B. dipole - induced dipole forces,
C. hydrogen bonding.
D. covalent bonding.
E. dispersion forces.
Choose the most appropriate answer from the options given below:
a) A, C, D, E are correct.
b) B, C, D, E are correct.
c) A, B, C, D are correct.
d) A, B, C, E are correct.
Ans:- (d) Covalent bonding is NOT an intermolecular force while rest all are considered as intermolecular forces.

27) Using MOT, compare O_2^+ and O_2^- species and choose the incorrect option
a) O_2^- is less stable.
b) Both O_2^+ and O_2^- are paramagnetic.
c) O_2^+ has higher bond order than O_2^-
d) O_2^+ is diamagnetic while O_2^- is paramagnetic.
Ans: (d)
Expl:- O_2^+ has 15 electrons and O_2^- has 17 electrons, both of them are paramagnetic.

28) While charging the lead storage battery,
a) $PbSO_4$ on cathode is reduced to Pb
b) $PbSO_4$ on anode is oxidized to PbO_2
c) $PbSO_4$ on anode is reduced to Pb
d) $PbSO_4$ on cathode is oxidized to Pb.
Ans: (C)
Expln:- During charging of lead storage battery, at the anode: $PbSO_4 + 2e^- \rightarrow Pb + SO_4^{2-}$

29) Sucrose is NOT a reducing sugar since
a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active
Ans:- (b)

30) Butylated hydroxyl toluene as a food additive acts as
a) Antioxidant b) flavouring agent
c) colouring agent d) emulsifier.
Ans:- (a)

31) Which of the following is NOT a characteristic of a covalent compound?
a) Low melting point b) No definite geometry
c) Insoluble in polar solvent
d) Small difference in electronegativity between the combining atoms
Ans:- (b)

32) On heating with concentrated NaOH solution in an inert atmosphere of CO_2, white phosphorous gives a gas. Which of the following statements is incorrect about the gas?
a) It is more basic than NH_3.
b) Its solution in water decomposes in the presence of lights
c) It is less basic than NH_3.
d) It is highly poisonous and has smell like rotten fish.
Ans: (a)

33) Conductivity of a saturated solution of a sparingly salt AB at 298 K is 1.85×10^{-5} S m^{-1}. Solubility product of the salt AB at 298 K is
Given: $\Lambda^o_m(AB) = 140 \times 10^{-4}$ S m^2 mol^{-1}
a) 5.7×10^{-12} b) 1.32×10^{-12}
c) 7.5×10^{-12} d) 1.74×10^{-12}
Ans:- (d)
Expln:-using the relationship between solubility of sparingly soluble salt and Λ^o_m,

$$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$$
$$\Lambda^0_m = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$$
$$s = \frac{k \times 1000}{\Lambda^0_m} = \frac{1.85 \times 10^{-7} \times 1000}{140}$$
$$= 1.32 \times 10^{-6}$$
$$K_{sp} = (s)^2 \quad \text{[For AB type of salt]}$$
$$= (1.32 \times 10^{-6})^2 = 1.74 \times 10^{-12}$$

34) An incorrect statement with respect to SN1 and S_N2 mechanism for alkyl halide is
a) A strong nucleophile the rate of favours S_N2 reaction
b) Competing reaction for an SN^2 reaction is rearrangement
c) SN^1 reactions can be catalyzed by some Lewis acids
d) A weak nucleophile and a protic solvent increase the rate of favours SN^1 reaction
Ans- (b)
Expln:- Competing reaction for an SN^2 reaction is rearrangement.

35) Which one of the following is an example for homogeneous catalysis?
a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl
Ans:- d

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೆ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಬಿರುಸಿನ ಮಳೆ: ಹರುಷದ ಕಳೆ

ಪ್ರಜಾವಾಣಿ ವಾರ್ತೆ

ಬುಧವಾರ ರಾತ್ರಿ ಮಳೆ ಸುರಿದಾಗ ಪಾಲಿಕೆಯ ಕೇಂದ್ರ ಕಚೇರಿ ಬಳಿ ವಾಹನಗಳು ನಿಧಾನವಾಗಿ ಚಲಿಸಿದವು

ಚಿತ್ರ: ಪ್ರಶಾಂತ್ ಎಚ್ ಜೆ

ಬೆಂಗಳೂರು: ಬಿರುಬೇಸಿಗೆ ಇರಬೇಕಿದ್ದ ತಿಂಗಳಲ್ಲಿ ಬಿರುಸಿನ ಮಳೆ ಸುರಿಯುತ್ತಿರುವುದರಿಂದ ಬಿಸಿಲ ಧಗೆಯ ಬದಲು ತಂಪು ವಾತಾವರಣ ನಿರ್ಮಾಣವಾಗಿದೆ. ಬುಧವಾರ ಸಂಜೆ ಗುಡುಗು, ಗಾಳಿಯೊಂದಿಗೆ ಸುರಿದ ಮಳೆ ನಗರದ ಮೂಲಸೌಕರ್ಯಗಳ ಕೊರತೆಯನ್ನು ಬಹಿರಂಗಗೊಳಿಸಿದೆ. ನೀರು ಹರಿಯಲು ಸರಿಯಾದ ಚರಂಡಿ ಇಲ್ಲದೇ ಹಲವು ಕಡೆಗಳಲ್ಲಿ ರಸ್ತೆಗಳೇ ಕಾಲುವೆಗಳಂತಾದವು.

ರಸ್ತೆಯಲ್ಲಿ ನೀರು ನಿಂತಿದ್ದರಿಂದ ನಾಗವಾರದಿಂದ ಎಲಿಮೆಂಟ್ಸ್ ಮಾಲ್ ಕಡೆಗೆ ಸಾಗುವ ವಾಹನಗಳಿಗೆ, ಕುಂದನಹಳ್ಳಿ ಗೇಟ್‌ನಿಂದ ಸಿದ್ದಾಪುರ ಕಡೆಗೆ ಹೋಗುವವರಿಗೆ, ಬೊಮ್ಮನಹಳ್ಳಿಯಿಂದ ಸಿಲ್ಕ್ ಬೋರ್ಡ್ ಕಡೆಗೆ ಸಾಗುವವರಿಗೆ, ಕೊಡತಿ ಗೇಟ್‌ನಿಂದ ಕಾರ್ಮೆಲಾರಂ ಕಡೆಗೆ ಸಂಚರಿಸುವವರಿಗೆ, ಕಲ್ಯಾಣನಗರದಿಂದ ಹೊರಮಾವು ಕಡೆಗೆ ಹೋಗುವವರಿಗೆ, ಬೆಳ್ಳಂದೂರಿನಿಂದ ಕಾರ್ತಿಕ್‌ನಗರದ ಕಡೆಗೆ ಪಯಣಿಸುವವರಿಗೆ, ಮಾರತ್ತಹಳ್ಳಿ ಪೊಲೀಸ್ ಠಾಣೆಯಿಂದ ಕಲಾಮಂದಿರ ಕಡೆಗೆ ಪ್ರಯಾಣ ಬೆಳೆಸುವವರಿಗೆ, ರಾಮಮೂರ್ತಿನಗರದ ಅಂಡರ್ ಪಾಸ್‌ನಿಂದ ಟಿನ್ ಫ್ಯಾಕ್ಟರಿ ಕಡೆಗೆ, ರೈನ್‌ಬೋ ಆಸ್ಪತ್ರೆಯಿಂದ ಕಾರ್ತಿಕ್‌ನಗರ ಕಡೆಗೆ, ಗುಂಜೂರಿನಿಂದ ವರ್ತೂರು ಕಡೆಗೆ ಸಾಗುವ ವಾಹನಗಳಿಗೆ ಅಡ್ಡಿಯಾಯಿತು. ಇದರಿಂದ ಈ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಯಿತು.

ಕೆ.ಆರ್. ಪುರದಿಂದ ಬೈಯ್ಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಮುಂದೆ ನೀರು ನಿಂತು ವಾಹನಗಳು, ಜನರು ಸಂಚರಿಸಲು ತೊಡಕುಂಟಾಯಿತು.

ಮೆಜೆಸ್ಟಿಕ್, ಗಾಂಧಿನಗರ, ರಾಜಾಜಿನಗರ, ವಿಜಯನಗರ, ಎಂ.ಜಿ ರಸ್ತೆ, ಕಬ್ಬನ್ ಉದ್ಯಾನ, ವಿಧಾನಸೌಧ, ಕೆ.ಆರ್. ಪುರ, ಬೈಯ್ಯಪ್ಪನಹಳ್ಳಿ, ಇಂದಿರಾನಗರ, ಮೈಸೂರು ರಸ್ತೆ, ಬಸವನಗುಡಿ, ಶ್ರೀನಿವಾಸ ನಗರ, ಬನಶಂಕರಿ, ಜಯನಗರ, ಅತ್ತಿಗುಪ್ಪೆ, ವೈಟ್ ಫೀಲ್ಡ್, ಕೆಂಗೇರಿ, ಪುರಭವನ, ಸುಧಾಮನಗರ, ಮಾರತ್ತಹಳ್ಳಿ, ಮಹದೇವಪುರ ಭಾಗದಲ್ಲಿ ಬಿರುಸಿನ ಮಳೆಯಾಗಿದೆ.

ಮಳೆ ಪ್ರಮಾಣ: ದೊಮ್ಮಲೂರು 2.15 ಸೆಂ.ಮೀ., ಹೊಯ್ಸಳನಗರ 2.15 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯ 2 ಸೆಂ.ಮೀ., ಹೆಗ್ಗನಹಳ್ಳಿ 2 ಸೆಂ.ಮೀ., ಸಂಪಂಗಿರಾಮ ನಗರ 1.45 ಸೆಂ.ಮೀ., ಗಾಳಿ ಆಂಜನೇಯ ದೇವಸ್ಥಾನ, ದೊಡ್ಡಬಿದರಕಲ್ಲು, ಹಂಪಿನಗರ ಹಾಗೂ ಮಾರುತಿ ಮಂದಿರದಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

REQUIRED ITI/ DEE/ JOC ELECTRICAL Candidates FOR ELECTRICAL MAINTENANCE IN BANGALORE FRESH 2 YEARS EXPERIENCED 7353763801, 7353779797, 7353779800

Teachers/ Professors

PERSONAL

Change of Name

I,HARISH KUMAR KARUNAKAR HEGDE Residing`at 124/5,Factory, Vinayak_Nagar, Tumkur-Road, Bengaluru-560073, have`changed my`Name`to HARISH_KUMAR HEGDE vide`Affidavit Dtd:09.04.2025 Sworn`Before Notary_Deepa.M, Bengaluru

CHANGE OF NAME

I, **DAMMALPATI SATI KUMARI** R/at No. 102, Fruit Street, Near Commercial Street, Shivaji Nagar, Bengaluru-560 001, have changed my name to **VUGGIRALA SATI KUMARI** vide affidavite dated 16-04-2025 before notary L Gopalakrishna, Bengaluru.

I, SMITHA S NAIR C/O. Rakesh Panicker, Residing at No. D226, Aratt Vivera, 6th Cross, 23 Bolagudda Road, Begur, Bangalore South, Karnataka- 560068, Have Changed my Name SMITHA RAKESH PANICKER to SMITHA S NAIR, vide Affidavit dates 14/04/25, before Notary Aravind Patil G.G, Bangalore-11.

CHANGE OF NAME

I, **K.A. NAGARATHNAMMA,** R/at # 349, Kallappa Layout, Amruthahalli, Sahakaranagar post, Bangalore-560092, have changed my name to **K. A. RATHNAMMA** vide affidavite dated 20-3-2010 before notary S. Rajaram, Chintamani.

M/s GOUTHAM INSTITUTE OF MEDICAL SCIENCES AND TECHNOLOGY (Regd)

Invites applications from suitable applicants for the proposed institution in the name of

GOUTHAMA SIDDARTHA COLLEGE OF MANAGEMENT

#245-249, Manjunatha Nagara, 40 Feet Road, WOC Road, Bengaluru -56 010

TEACHING STAFF REQUIREMENT

DIRECTOR | PROFESSORS | ASSOCIATE PROFESSORS

ASSISTANT PROFESSORS

Qualifications, Experience & Pay: **As per AICTE Norms**

NON-TEACHING STAFF REQUIREMENT

Training and placement officer, Chief Librarian, Assistant Librarian, Accountant, Office Assistant, Warden, System Admin, Maintenance Incharge, Helpers & Attenders.

Interested and eligible candidates shall mail the CV to **gouthamcollege2014@gmail.com** by **19th April, 2025.**

** Reservation for SC/ST candidate as per rules.* Sd/- Chairman

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗೆ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ ಸ್ಥಿರಾಸ್ತಿಯನ್ನು, ಅದರ ಪ್ರಸಕ್ತ ಮಾಲೀಕರಾದ **ಶ್ರೀ. ಸುಬ್ರಮಣಿಯನ್ ಶಿವರಾಮನ್** ಬಿನ್ ಶ್ರೀ. ಶಿವರಾಮನ್ ರಾಜಂಗಂ ಅಂಬಸಮುದ್ರಂ, ವಿಳಾಸ ನಂ. 7/1, ಶಿವಂ – ದಿ ಕಾಟೇಜ್, ಮಧುರೆ ಮುಖ್ಯರಸ್ತೆ, ಯಲಹಂಕ ತಾಲ್ಲೂಕು, ಇಟ್ಟಗಲ್ಲಪುರ, ಬೆಂಗಳೂರು–560064 (ಇಲ್ಲಿ ಇನ್ನುಮುಂದೆ **"ಮಾಲೀಕರು"** ಎನ್ನಲಾಗುವ) ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಆದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿ ಅಥವಾ ಅದರ ಯಾವುದೇ ಭಾಗದ ಮೇಲೆ, ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿ, ಸಂಘ, (ಸಾಂಸ್ಥಿಕ ಅಥವಾ ಇನ್ನಿತರೆ) ಕಚೇರಿಯು ಯಾವುದೇ ಕ್ಲೇಮ್‌ಗಳನ್ನು ಅಥವಾ ಹಕ್ಕುಗಳನ್ನು, ಅಧಿಕಾರ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನೆನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನಿತರೆ ಯಾವುದೇ ಸ್ವರೂಪದ ಹಿತಾಸಕ್ತಿಗಳನ್ನು ಹೊಂದಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ **14 (ಹದಿನಾಲ್ಕು) ದಿನಗಳೊಳಗೆ,** ಕೆಳಕಂಡ ಸಹಿದಾರರಿಗೆ ಲಿಖಿತ ರೂಪದಲ್ಲಿ ತಮ್ಮ ಕ್ಲೇಮ್‌ನ ಎಲ್ಲಾ ವಿವರಗಳನ್ನು ಪೂರಕ ದಾಖಲಾತಿಗಳ ಸಮೇತ ತಿಳಿಸತಕ್ಕದ್ದು, ಇಲ್ಲವಾದಲ್ಲಿ, ಇಲ್ಲಿ ಮೇಲೆ ತಿಳಿಸಲಾಗಿರುವ ಮಾಲೀಕರು ಷೆಡ್ಯೂಲ್ ಸ್ವತ್ತಿನ ಮೇಲೆ ಸ್ಪಷ್ಟವಾದ ಮತ್ತು ವ್ಯಾಪಾರಕ್ಕೆ ಯೋಗ್ಯವಾದ ಮಾಲೀಕತ್ವ ಹೊಂದಿರುತ್ತಾರೆ ಮತ್ತು ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಇನ್ನಿತರರ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ; ಹಾಗೂ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿ ಪಡೆದುಕೊಳ್ಳುವ ನಿಟ್ಟಿನಲ್ಲಿ ತಮ್ಮ ಉದ್ದೇಶಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಸ್ವತಂತ್ರರಾಗುತ್ತಾರೆ.

ಷೆಡ್ಯೂಲ್

ಷೆಡ್ಯೂಲ್ ಎ ಪ್ರಾಪರ್ಟಿ

ಬೆಂಗಳೂರು, ಜಯಮಹಲ್, ಬೆನ್ಸನ್ ಕ್ರಾಸ್ ರಸ್ತೆ, ಮುನಿಸಿಪಲ್ ವಾರ್ಡ್ ನಂ. 92 ರಲ್ಲಿರುವ, ಮುನಿಸಿಪಲ್ ನಂ. 17 ಹೊಂದಿರುವ, 32,802 ಚ.ಅ. ವಿಸ್ತೀರ್ಣವುಳ್ಳ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ಖಾಸಗಿ ಸ್ವತ್ತು; **ಪಶ್ಚಿಮಕ್ಕೆ:** ಬಿನ್ನಿ ಕ್ರೆಸೆಂಟ್ ರಸ್ತೆ; **ಉತ್ತರಕ್ಕೆ:** ಬಿನ್ನಿ ಕ್ರಾಸ್ ರಸ್ತೆ; ಮತ್ತು **ದಕ್ಷಿಣಕ್ಕೆ:** ಬೆನ್ಸನ್ ಕ್ರಾಸ್ ರಸ್ತೆ.

ಷೆಡ್ಯೂಲ್ ಬಿ ಪ್ರಾಪರ್ಟಿ

ಷೆಡ್ಯೂಲ್ ಎ ಪ್ರಾಪರ್ಟಿಯಲ್ಲಿನ 2,387.7217/32802ನೇ ಅವಿಭಜಿತ ಪಾಲು, ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಮಾಲೀಕತ್ವ (ಷೆಡ್ಯೂಲ್ ಎ ಪ್ರಾಪರ್ಟಿಯಲ್ಲಿನ 2,387.7217 ಚ.ಅ. ವಿಸ್ತೀರ್ಣದಿಂದ ಬಂದಿರುವುದು)

ಷೆಡ್ಯೂಲ್ ಸಿ ಪ್ರಾಪರ್ಟಿ

'ಬಿಯು ಮಾಂಡೆ' ಎಂಬ ಕಟ್ಟಡದ (ಮುನಿಸಿಪಲ್ ನಂ. 17/4 ಸಂಖ್ಯೆಯಿಂದ ಗುರುತಿಸಲ್ಪಡುವ ಅಪಾರ್ಟ್‌ಮೆಂಟ್) ನಾಲ್ಕನೇ ಮಹಡಿಯಲ್ಲಿರುವ, ನಂ. 4–01 ಹೊಂದಿರುವ, 5,095 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟಪ್ ಪ್ರದೇಶವುಳ್ಳ, ಪ್ಯಾಸೇಜ್‌ಗಳು ಮತ್ತು ಲಾಬಿಗಳು, ಲಿಫ್ಟ್‌ಗಳು, ಮೆಟ್ಟಿಲುಗಳು ಹಾಗೂ ಇನ್ನಿತರೆ ಸಾಮಾನ್ಯ ಬಳಕೆಯ ಪ್ರದೇಶಗಳಲ್ಲಿನ ಅನುಪಾತ ಆಧಾರಿತ ಪಾಲುದಾರಿಕೆ ಕೂಡ ಹೊಂದಿರುವ, ಬೇಸ್‌ಮೆಂಟ್ ಲೆವೆಲ್‌ನಲ್ಲಿರುವ ನಂ. 3 ಹೊಂದಿರುವ ಒಂದು (1) ಕವರ್ಡ್ ಕಾರ್ ಪಾರ್ಕಿಂಗ್ ಜಾಗ ಮತ್ತು ಗ್ರೌಂಡ್ ಲೆವೆಲ್‌ನಲ್ಲಿರುವ ನಂ. 26 & 27 ಹೊಂದಿರುವ ಎರಡು (2) ಅನ್‌ಕವರ್ಡ್ ಕಾರ್ ಪಾರ್ಕಿಂಗ್ ಜಾಗಗಳನ್ನು ಉಪಯೋಗಿಸುವ ಹಕ್ಕುಗಳೂ ಸೇರಿದಂತೆ, ಹಳೆಯ ಬಿಬಿಎಂಪಿ ಪಿಐಡಿ ನಂ. 92–32–17/4 ಹೊಂದಿರುವ ವಸತಿಯೋಗ್ಯ ಅಪಾರ್ಟ್‌ಮೆಂಟ್ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ಖಾಲಿ ಜಾಗದ ಕಡೆಗೆ ತೆರೆದಿರುತ್ತದೆ ಮತ್ತು 'ಬಿಯು ಮಾಂಡೆ'ಯಲ್ಲಿನ ಈಜುಕೊಳ ಹಾಗೂ ಅದರ ನಂತರದಲ್ಲಿ ಖಾಸಗಿ ಸ್ವತ್ತು;
ಪಶ್ಚಿಮಕ್ಕೆ: ಮುಖ್ಯ ಪ್ರವೇಶ ದ್ವಾರದ ಕಡೆಗೆ ತೆರೆದಿರುತ್ತದೆ ಮತ್ತು ಬಿನ್ನಿ ಕ್ರೆಸೆಂಟ್ ರಸ್ತೆ;
ಉತ್ತರಕ್ಕೆ: ಬೇಸ್‌ಮೆಂಟ್ ರ‍್ಯಾಂಪ್ ಕಡೆಗೆ ಮತ್ತು ಬಿನ್ನಿ ಕ್ರಾಸ್ ರಸ್ತೆ ಕಡೆಗೆ ತೆರೆದಿರುತ್ತದೆ;
ಮತ್ತು **ದಕ್ಷಿಣಕ್ಕೆ:** ಫೈರ್ ಎಕ್ಸಿಟ್ ದ್ವಾರದ ಕಡೆಗೆ ಮತ್ತು ಬೆನ್ಸನ್ ಕ್ರಾಸ್ ರಸ್ತೆ ಕಡೆಗೆ ತೆರೆದಿರುತ್ತದೆ.

ಷೆಡ್ಯೂಲ್ ಬಿ ಪ್ರಾಪರ್ಟಿ ಮತ್ತು ಷೆಡ್ಯೂಲ್ ಸಿ ಪ್ರಾಪರ್ಟಿಗಳು ಸೇರಿಕೊಂಡು ಸದರಿ ಷೆಡ್ಯೂಲ್ ಪ್ರಾಪರ್ಟಿಯು ರೂಪಗೊಂಡಿರುತ್ತದೆ.

ಮಹೇಶ್ ಮದನ್ ಭಟ್, ವಕೀಲರು
ಎಂಎಂಬಿ ಲೀಗಲ್, 634, 2ನೇ ಮಹಡಿ, 5ನೇ ಅಡ್ಡರಸ್ತೆ,
4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
ಫೋನ್: 91–80–41284444/41285555
ಇ–ಮೇಲ್: mahesh@mmblegal.in

ಸ್ಥಳ: ಬೆಂಗಳೂರು
ದಿನಾಂಕ: ಏಪ್ರಿಲ್ 17, 2025

I, RAVIKUMAR LAXMIKANT MISHRA S/o.Laxmikant Mishra R/a.Knaar Harihar pur Town/Village: Kanar, Anchal-Nagra District:Saran Pin:841414. Declare that RAVI L K MISHRA, MISHRA RAVIKUMAR LAXMIKANT, RAVI L K MISHRA above all names refer to me only.and I have changed`my Name to RAVIKUMAR LAXMIKANT MISHRA only. Vide`affidavit dated:14.4.2025 before`Notary Aravind Patil.G.G. Bengaluru.

DH Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ಪಿಯು ಪರೀಕ್ಷೆ–2: 1.57 ಲಕ್ಷ ವಿದ್ಯಾರ್ಥಿಗಳ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದ 1.70 ಲಕ್ಷ ವಿದ್ಯಾರ್ಥಿಗಳ ಪೈಕಿ 1.57 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ–2ಕ್ಕೆ ನೋಂದಾಯಿಸಿಕೊಂಡಿದ್ದಾರೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 'ಪರೀಕ್ಷಾ ಶುಲ್ಕ ಇಲ್ಲದೇ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಿದ್ದರಿಂದ ಶೇ 92.4ರಷ್ಟು ವಿದ್ಯಾರ್ಥಿಗಳು ಏ.24 ರಿಂದ ಮೇ 8ರವರೆಗೆ ನಡೆಯುವ ಎರಡನೇ ಪರೀಕ್ಷೆ ತೆಗೆದುಕೊಂಡಿದ್ದಾರೆ. 70 ಸಾವಿರ ವಿದ್ಯಾರ್ಥಿಗಳು ಫಲಿತಾಂಶ ವೃದ್ಧಿಗೆ ಹಾಜರಾಗುತ್ತಿದ್ದಾರೆ. ಸಿಇಟಿ ಫಲಿತಾಂಶಕ್ಕೂ ಮೊದಲು ಪರೀಕ್ಷೆ–2 ಫಲಿತಾಂಶ ನೀಡಲು ನಿರ್ಧರಿಸಿದ್ದೇವೆ. ಇದರಿಂದ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನಲ್ಲೇ ಅರ್ಹತೆ ಪಡೆಯಲು ಸಹಕಾರಿಯಾಗಲಿದೆ' ಎಂದರು.

ಪರೀಕ್ಷೆ ಸಿದ್ಧತೆ ಕುರಿತು ವಿಡಿಯೊ ಸಂವಾದ: ದ್ವಿತೀಯ ಪಿಯು ಪರೀಕ್ಷೆ–2ರ ಸಿದ್ಧತೆ ಕುರಿತು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಿದರು.

ಹಾಜರಾತಿ ಕೊರತೆಯ ಕಾರಣ ಪರೀಕ್ಷೆ-1ಕ್ಕೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳು ಪರೀಕ್ಷೆ-2 ಅಥವಾ ಪರೀಕ್ಷೆ-3 ತೆಗೆದುಕೊಳ್ಳಲು ಅವಕಾಶವಿದೆ. ಅಧಿಕಾರಿಗಳು, ಪೋಷಕರು, ಕಾಲೇಜು ಅಭಿವೃದ್ಧಿ ಸಮಿತಿಗಳು ಹೆಚ್ಚಿನ ಜವಾಬ್ದಾರಿ ನಿರ್ವಹಿಸಲು ತಿಳಿಸಬೇಕು. ವಲಸೆ ಕಾರ್ಮಿಕರ ಮಕ್ಕಳನ್ನು ಗುರುತಿಸಿ ಪರೀಕ್ಷೆ ಬರೆಯಲು ಪ್ರೇರೇಪಿಸಬೇಕು ಎಂದು ಸೂಚನೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಪದವಿ ಪೂರ್ವ ಶಿಕ್ಷಣ ನಿರ್ದೇಶಕಿ ಸಿಂಧೂ ರೂಪೇಶ್, ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಎಚ್. ಬಸವರಾಜೇಂದ್ರ, ನಿರ್ದೇಶಕ ಎಚ್.ಎನ್. ಗೋಪಾಲಕೃಷ್ಣ ಉಪಸ್ಥಿತರಿದ್ದರು.

'ಸಮೀಕ್ಷೆ ಅವೈಜ್ಞಾನಿಕ ಎಂಬುದು ಅಸಮರ್ಪಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯು ಅವೈಜ್ಞಾನಿಕ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳುತ್ತಿರುವುದು ಅಸಮರ್ಪಕ' ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ಪ್ರೊ.ಬಿ.ಕೆ. ಚಂದ್ರಶೇಖರ್

'ದೇಶದಲ್ಲಿ ಸಾಮಾಜಿಕ ಸಮುದಾಯಗಳ ಮಧ್ಯೆ ಈಗಲೂ ತಾರತಮ್ಯ ಅನಿಯಂತ್ರಿತವಾಗಿ ನಡೆಯುತ್ತಿದೆ. ಇದನ್ನು ತೊಡೆದುಹಾಕುವಲ್ಲಿ ಸಮಗ್ರ ಜಾತಿ ದತ್ತಾಂಶ ಖಂಡಿತ ನೆರವಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಕೆಳ ಜಾತಿಗಳು ಎಂದು ಗುರುತಿಸಲಾಗುವ ಹಲವು ಸಮುದಾಯಗಳ ಜನರು, ತಮ್ಮ ಜಾತಿಯ ಹೆಸರನ್ನು ಬಹಿರಂಗಪಡಿಸಲು ಹಿಂಜರಿಯುತ್ತಾರೆ. ಆದರೆ ಉನ್ನತ ಜಾತಿಗಳು ಎಂದು ಗುರುತಿಸಲಾಗುವ ಸಮುದಾಯಗಳ ಜನರು ಯಾವ ಅಂಜಿಕೆ ಇಲ್ಲದೆ, ತಮ್ಮ ಜಾತಿಯ ಹೆಸರನ್ನು ಹೇಳಿಕೊಳ್ಳುತ್ತಾರೆ. ಇಂತಹ ಸಾಮಾಜಿಕ ಸಂಗತಿಗಳು ಸಮೀಕ್ಷೆಗಳ ದತ್ತಾಂಶಗಳನ್ನು ಪ್ರಭಾವಿಸುತ್ತವೆ. ಈ ಬಗ್ಗೆ ಅರಿವು ಇರಬೇಕು' ಎಂದು ಹೇಳಿದ್ದಾರೆ.

'ರಾಜ್ಯದ ಜನಸಂಖ್ಯೆಯ ಶೇ 94ರಷ್ಟು ಮಂದಿ ಈ ಸಮೀಕ್ಷೆಗೆ ಒಳಪಟ್ಟಿದ್ದಾರೆ ಎಂಬುದು ಗಮನಾರ್ಹ ಅಂಶ. ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿರುವ ಸಮುದಾಯಗಳ ಸಬಲೀಕರಣವನ್ನು ಯಾವುದೇ ಸಮಂಜಸ ವ್ಯಕ್ತಿ ವಿರೋಧಿಸಲಾರ. ಆರ್‌ಎಸ್‌ಎಸ್ ಸಹ ಜಾತಿ ಜನಗಣತಿಯನ್ನು ಸಮರ್ಥಿಸಿದೆ ಎಂಬ ವಿಚಾರವೂ ಅಶೋಕ ಅವರ ಗಮನದಲ್ಲಿ ಇಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಮತಾಂತರಗೊಂಡವರನ್ನು ಪ್ರವರ್ಗ–1ರಲ್ಲಿ ಮುಂದುವರಿಸಿ'

ಬೆಂಗಳೂರು: ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟ ಜಾತಿಯವರನ್ನು ಹಿಂದುಳಿದ ವರ್ಗಗಳ ಪ್ರವರ್ಗ–1ರ ಪಟ್ಟಿಯಲ್ಲಿ ಸೇರಿಸಿದ್ದು, ಅದೇ ಪಟ್ಟಿಯಲ್ಲಿ ಮುಂದುವರಿಸಬೇಕು ಎಂದು ಅಹಿಂದ ಕ್ರೈಸ್ತ ವಿಂಗ್ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಂಗ್‌ನ ರಾಜ್ಯ ಸಂಚಾಲಕ ಸಿದ್ಧಯ್ಯ ಮೂರ್ತಿ, 'ಪ್ರವರ್ಗ–1ಕ್ಕೆ ಕೆನೆಪದರ ನೀತಿಯಡಿ ಆದಾಯದ ಮಿತಿ ಅನ್ವಯಿಸುವುದಿಲ್ಲ. ಆದ್ದರಿಂದ ಪರಿಶಿಷ್ಟ ಜಾತಿಯಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವರನ್ನು ಪ್ರವರ್ಗ–1ರಲ್ಲೇ ಮುಂದುವರಿಸಬೇಕು' ಎಂದು ಒತ್ತಾಯಿಸಿದರು.

'ಕ್ರೈಸ್ತ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ–3ಬಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಇಲ್ಲಿನ ಸಮುದಾಯಗಳು ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮುಂದುವರಿದಿವೆ. ಆದರೆ ಕ್ರೈಸ್ತ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದಿದೆ. ಆದ್ದರಿಂದ ಈ ಸಮುದಾಯವನ್ನು ಪ್ರವರ್ಗ 3ಬಿ ಮತ್ತು ಪ್ರವರ್ಗ 3ಎ ಪಟ್ಟಿಗಳನ್ನು ಹೊರತುಪಡಿಸಿ, ಬೇರೆ ಯಾವುದಾದರೂ ಪಟ್ಟಿಗೆ ಸೇರಿಸಬೇಕು' ಎಂದು ಆಗ್ರಹಿಸಿದರು.

ವಿಧಾನ ಪರಿಷತ್‌ನ ಮಾಜಿ ಸಭಾಪತಿ ಡೇವಿಡ್ ಸಿಮೆಯೋನ್, ಯೂನಸ್ ಜೋನ್ಸ್, ಕೆನಡಿ ಶಾಂತಕುಮಾರ್, ಮನೋಹರ್ ಚಂದ್ರಪ್ರಸಾದ್, ಅಲ್ಫೋನ್ಸ್ ಕೆನಡಿ, ಪ್ರಜ್ವಲ್ ಸ್ವಾಮಿ, ರಾಬರ್ಟ್ ಕ್ಲೈವ್, ನಾಥನ್ ಡೇನಿಯಲ್, ಶೀಲಾ ಶಾಂತರಾಜು, ವಸುಧಾ, ಶಿವಶರಣಪ್ಪ, ರಾಜು ಕೋಲಾ, ಶೇಖರ್ ಪಾಲ್, ಜಾರ್ಜ್ ಬುಷ್ ಸುದ್ದಿಗೋಷ್ಠಿಯಲ್ಲಿದ್ದರು.

ಪ್ರೀಮಿಯಂ ಎಫ್‌ಎಆರ್ ಅರ್ಜಿ ಸ್ವೀಕಾರ ಆರಂಭ

• ನವೀನ್ ಮಿನೇಜಸ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆಸ್ತಿ ಮಾಲೀಕರು ಮತ್ತು ಡೆವಲಪರ್‌ಗಳಿಂದ ಪ್ರೀಮಿಯಂ ಫ್ಲೋರ್ ಏರಿಯಾ ಅನುಪಾತಕ್ಕಾಗಿ (ಎಫ್‌ಎಆರ್) ಅರ್ಜಿ ಸ್ವೀಕಾರ ಆರಂಭಿಸಿದೆ.

ನಿವೇಶನದ ಮಾರ್ಗಸೂಚಿ ದರದ ಶೇಕಡ 50ರಷ್ಟು ಶುಲ್ಕ ಪಾವತಿಸಿಕೊಂಡು, ಶೇ 60ರವರೆಗೂ ಪ್ರೀಮಿಯಂ ಎಫ್‌ಎಆರ್ ನೀಡುವ ಅವಕಾಶ ಕಲ್ಪಿಸುವ ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಹೊರಡಿಸಿತ್ತು. ಅದರಂತೆ ಬಿಬಿಎಂಪಿಯ ಪಟ್ಟಣ ಯೋಜನಾ ವಿಭಾಗದಿಂದ ಈಗಾಗಲೇ ಅರ್ಜಿಗಳನ್ನು ಸ್ವೀಕರಿಸಲು ಶುರು ಮಾಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

‘ಅರ್ಜಿಗಳನ್ನು ಡಿಜಿಟಲ್ ರೂಪದಲ್ಲಿ ಸ್ವೀಕರಿಸಲು ಮತ್ತು ಪ್ರಕ್ರಿಯೆ ಮುಂದುವರಿಸಲು ನಾವು ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದೇವೆ’ ಎಂದು ಅವರು ವಿವರಿಸಿದರು.

ಸರ್ಕಾರವು ನೀತಿಯ ಕರಡು ಮತ್ತು ಅಂತಿಮ ಅಧಿಸೂಚನೆಗಳನ್ನು ಸಾರ್ವಜನಿಕಗೊಳಿಸಿದ್ದರೂ, ಅರ್ಜಿ ಸ್ವೀಕರಿಸಲು ಆಂತರಿಕವಾಗಿ ಅಳವಡಿಸಿಕೊಂಡ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನವನ್ನು (ಎಸ್‌ಒಪಿ) ಬಿಬಿಎಂಪಿ ಇನ್ನೂ ಬಹಿರಂಗಪಡಿಸಿಲ್ಲ. ಆದರೆ, ಈ ಮೂಲಕ ₹ 2,000 ಕೋಟಿ ವರಮಾನ ಸಂಗ್ರಹಿಸುವ ಗುರಿಯನ್ನು ಈ ಬಾರಿಯ ಬಜೆಟ್‌ನಲ್ಲಿ ಬಿಬಿಎಂಪಿ ಘೋಷಣೆ ಮಾಡಿದೆ.

ಮುಖ್ಯಾಂಶಗಳು

- ಶೇ 60ರವರೆಗೂ ಪ್ರೀಮಿಯಂ ಎಫ್‌ಎಆರ್ ನೀಡಲು ಅವಕಾಶ
- ಉಪನಗರ ಪ್ರದೇಶಗಳಿಗೂ ಅನ್ವಯವಾಗಲಿರುವ ನೀತಿ
- ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಾಫ್ಟ್‌ವೇರ್ ಅಭಿವೃದ್ಧಿ

‘ಹೊಸ ಪ್ರೀಮಿಯಂ ಎಫ್‌ಎಆರ್ ನೀತಿಯಡಿ ಇಲ್ಲಿಯವರೆಗೆ ಯಾವುದೇ ಅನುಮತಿಗಳನ್ನು ನೀಡಲಾಗಿಲ್ಲ. ನಾವು ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ್ದೇವೆ. ನಗರ ಯೋಜನಾ ಇಲಾಖೆಯು ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಶುಲ್ಕವನ್ನು ಸಂಗ್ರಹಿಸುತ್ತದೆ ಮತ್ತು ಕಟ್ಟಡ ಯೋಜನೆಗಳನ್ನು ಅನುಮೋದಿಸುತ್ತದೆ’ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಇಲ್ಲಿಯವರೆಗೆ ಕೆಲವು ಬಿಲ್ಡರ್‌ಗಳು ಅಸ್ತಿತ್ವದಲ್ಲಿಲ್ಲದ ಅಗಲವಾದ ರಸ್ತೆಗಳನ್ನು ತೋರಿಸುವ ಮೂಲಕ ಹೆಚ್ಚುವರಿ ಮಹಡಿಗಳನ್ನು ನಿರ್ಮಿಸಿದ್ದಾರೆ. ಪ್ರೀಮಿಯಂ ಎಫ್‌ಎಆರ್‌ನಿಂದಾಗಿ ನಿಜ ತಿಳಿಯಲಿದೆ. ಪ್ರೀಮಿಯಂ ಎಫ್‌ಎಆರ್ ನೀತಿಯು ಬಿಬಿಎಂಪಿ ವ್ಯಾಪ್ತಿ ಮಾತ್ರವಲ್ಲ, ಕನಕಪುರ, ನೆಲಮಂಗಲ ಮತ್ತು ಹೊಸಕೋಟೆ ಸೇರಿದಂತೆ ಸುತ್ತಮುತ್ತಲಿನ ಒಂಬತ್ತು ಉಪನಗರ ಪ್ರದೇಶಗಳಿಗೂ ಅನ್ವಯ ಆಗಲಿದೆ.

ಈಗಾಗಲೇ ಪೂರ್ಣಗೊಳ್ಳುವ ಹಂತದಲ್ಲಿರುವ ಅಥವಾ ಸಂಪೂರ್ಣವಾಗಿ ನಿರ್ಮಿಸಲಾದ ಕಟ್ಟಡಗಳ ಮಾಲೀಕರಿಂದ ಅರ್ಜಿಗಳನ್ನು ಸ್ವೀಕರಿಸಬಾರದು ಎಂದು ನಾಗರಿಕರು ಬಿಬಿಎಂಪಿ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಉಚಿತ ಶ್ರವಣ ಸಾಧನ ವಿತರಣೆ

ಬೆಂಗಳೂರು: ಸಂವಾದ್ ವಾಕ್ ಮತ್ತು ಶ್ರವಣ ಸಂಸ್ಥೆಯು 20 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಸಂದರ್ಭದಲ್ಲಿ ಸಂವಾದ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಬೆಂಗಳೂರಿನ ಎಎಲ್‌ಐಎಂಸಿಒ ಸಹಯೋಗದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಏ. 25ರಿಂದ 30ರವರೆಗೆ ಉಚಿತ ಶ್ರವಣ ಸಾಧನ ವಿತರಣಾ ಶಿಬಿರವನ್ನು ಹಮ್ಮಿಕೊಂಡಿದೆ.

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗೆ: #18, ಒಂದನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಆನಂದ ಗಿರಿ ವಿಸ್ತರಣೆ, ಹೆಬ್ಬಾಳ ಪೊಲೀಸ್ ಠಾಣೆ ಹತ್ತಿರ, ಹೆಬ್ಬಾಳ, ಬೆಂಗಳೂರು-560024 ಸಂಪರ್ಕಿಸಬಹುದು ಅಥವಾ 96633 88623, 94802 95004 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇವಾಲಯ ಜೀರ್ಣೋದ್ಧಾರ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಕೆಂಬಲು ಗ್ರಾಮದ ಮಲೆ ಮಾದೇಶ್ವರ ದೇವಸ್ಥಾನವನ್ನು ಬಹುಭಾಷಾ ನಟ ಪ್ರಭುದೇವ ₹25 ಲಕ್ಷ ವೆಚ್ಚದಲ್ಲಿ ಜೀರ್ಣೋದ್ಧಾರಗೊಳಿಸಿದ್ದಾರೆ.

ಹೊಯ್ಸಳರ ಕಾಲದ ದೇವಾಲಯದಲ್ಲಿ ಎರಡು ದಿನಗಳಿಂದ ಅವರು ಕುಟುಂಬ ಸಮೇತ ಜೀರ್ಣೋದ್ಧಾರ ಕಾರ್ಯದ ಪೂಜಾ ವಿಧಿಗಳಲ್ಲಿ ಪಾಲ್ಗೊಂಡರು.

ಭೇದಭಾವ ಬಿಟ್ಟು ಒಗ್ಗಟ್ಟಿನಿಂದ ಇರಿ: ಎಐಸಿಸಿ ಅಧ್ಯಕ್ಷ ಖರ್ಗೆ ಸೂಚನೆ

‘ಸರ್ಕಾರ ಬೀಳಿಸುವ ಯತ್ನ ನಡೆದಿದೆ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಕರ್ನಾಟಕದಲ್ಲೂ ಕಾಂಗ್ರೆಸ್ ಸರ್ಕಾರ ಬೀಳಿಸುವ ಪ್ರಯತ್ನ ನಡೆಯುತ್ತಿದೆ. ನಿಮ್ಮಲ್ಲಿ ಏನೇ ಭೇದಭಾವ ಇದ್ದರೂ ಒಂದಾಗಿ ಇರಬೇಕು. ಇಲ್ಲದಿದ್ದರೆ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರು ಬಡ ಜನರನ್ನು ನುಂಗುತ್ತಾರೆ’ ಎಂದು ಎಐಸಿಸಿ ಅಧ್ಯಕ್ಷರೂ ಆಗಿರುವ ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ನಾಯಕರಿಗೆ ಕಿವಿಮಾತು ಹೇಳಿದರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಲಬುರಗಿ ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಅವರು ಮಾತನಾಡಿದರು.

‘ಎಲ್ಲೆಲ್ಲಿ ಕಾಂಗ್ರೆಸ್ ಸರ್ಕಾರ ಇದೆಯೋ ಅಲ್ಲಿ ಕೇಂದ್ರ ಸರ್ಕಾರ ಇ.ಡಿ, ಸಿಬಿಐ, ಸಿವಿಸಿ, ಐಟಿ ಸಂಸ್ಥೆಗಳನ್ನು ಬಳಸಿಕೊಂಡು ಕಾಂಗ್ರೆಸ್ ಸರ್ಕಾರವನ್ನು ಕೆಡವಿ, ತಮ್ಮ ಕೈಗೆ ಅಧಿಕಾರ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಹೀಗಾಗಿ ನಮ್ಮ ನಾಯಕರು ಎಚ್ಚರಿಕೆಯಿಂದ ಇರಬೇಕು. ಬಡ ಜನರ ರಕ್ಷಣೆಗಾಗಿ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಅವರ ರಕ್ಷಣೆ ಮಾಡುವುದು ನಿಮ್ಮ ಕೈಯಲ್ಲಿದೆ. ಬಿಜೆಪಿಯವರಂತೂ ಲೂಟಿ, ಜಗಳ ಮಾಡಿಸಲು ನಿಂತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ದೇಶದ ಸ್ವಾತಂತ್ರ್ಯಕ್ಕಾಗಿ ಜವಾಹರಲಾಲ್ ನೆಹರೂ ಅವರು ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಆರಂಭಿಸಿದ್ದರು. ದೇಶಕ್ಕಾಗಿ ಕೆಲಸ ಮಾಡಿದ ಸಂಸ್ಥೆಯ ಮೇಲೆ ಇ.ಡಿಯಿಂದ ದಾಳಿ ನಡೆಸಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ವಿರುದ್ಧ ಚಾರ್ಜ್‌ಶೀಟ್ ದಾಖಲಿಸಿರುವ ಇವರಿಗೆ ನಾಚಿಕೆಯಾಗಬೇಕು. ನಿಮ್ಮ ಗಂಟನ್ನು ಹೊಡೆದಿದ್ದಾರಾ? ನೀವೇನು ಚಂದಾ ಕೊಟ್ಟು ಈ ಪತ್ರಿಕೆಯನ್ನು ಮಾಡಿದ್ದೀರಾ’ ಎಂದು ಹರಿಹಾಯ್ದರು.

ಕಲಬುರಗಿಯ ಕೆಸಿಟಿ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ಕಲಬುರಗಿ ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಮುಗಿಬಿದ್ದ ಉದ್ಯೋಗಾಕಾಂಕ್ಷಿಗಳು ಚಿತ್ರ:ತಾಜುದ್ದೀನ್ ಆಜಾದ್

‘ನಿಮ್ಮ ಆರ್‌ಎಸ್‌ಎಸ್‌ನ ಮುಖವಾಣಿ ಆರ್ಗನೈಸರ್ ಪತ್ರಿಕೆಯು ಜನರ ಬುದ್ಧಿಯನ್ನು ಕೆಡಿಸುತ್ತಿದೆ. ದೇಶದಲ್ಲಿ ಹೆಚ್ಚಿನ ಜಮೀನು ಕ್ರಿಶ್ಚಿಯನ್ನರ ಬಳಿ ಇದೆ. ಕ್ರಿಶ್ಚಿಯನ್ನರ ಬಳಿಯಿರುವ 7 ಕೋಟಿ ಹೆಕ್ಟೇರ್ ವಶಪಡಿಸಿಕೊಳ್ಳುವುದು ಮುಂದಿನ ಗುರಿ ಎಂದು ಆರ್ಗನೈಸರ್ ಪತ್ರಿಕೆಯು ಬರೆದಿದೆ. ಮುಸ್ಲಿಮರ ನಂತರ ಈಗ ಕ್ರಿಶ್ಚಿಯನ್ನರ ಸರದಿ ಬಂದಿದೆ. ದೇಶ, ಸಮಾಜ, ಧರ್ಮವನ್ನು ಒಡೆಯುವ ಕೆಲಸ ಮಾಡುತ್ತಿದ್ದೀರಿ. ಇಂಥವರಿಂದ ದೇಶದ ಜನರ ಉದ್ಧಾರ ಆಗುವುದಿಲ್ಲ’ ಎಂದು ಹೇಳಿದರು.

‘ಇ.ಡಿ ಮೂಲಕ ಚಾರ್ಜ್‌ಶೀಟ್ ಹಾಕಿಸಿದರೆ ಕಾಂಗ್ರೆಸ್ ಬಗ್ಗುವುದಿಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮಣಿಯುವುದಿಲ್ಲ. ನಾವು ದೇಶವನ್ನು ಕಟ್ಟುತ್ತೇವೆ. ಬಿಜೆಪಿ ಸರ್ಕಾರವನ್ನು ಒದ್ದು ಓಡಿಸುತ್ತೇವೆ’ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಉದ್ಯೋಗ ಮೇಳವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇನೆ ಎಂದು ಹೇಳಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಅವರಿಗೆ 10 ವರ್ಷಗಳಲ್ಲಿ 20 ಲಕ್ಷ ಉದ್ಯೋಗವನ್ನೂ ಕೊಡಲು ಸಾಧ್ಯವಾಗಿಲ್ಲ. ಸುಳ್ಳು ಹೇಳಿಕೆಗಳನ್ನು ನೀಡಿದರೇ ಹೊರತು ಯುವಕರಿಗೆ ಉದ್ಯೋಗ ಕೊಡಲಿಲ್ಲ’ ಎಂದು ಟೀಕಿಸಿದರು.

ಇ.ಡಿ ವಿರುದ್ಧ ಪ್ರತಿಭಟಿಸಿದ ಕಾಂಗ್ರೆಸ್

ಸೋನಿಯಾ ಗಾಂಧಿ, ರಾಹುಲ್ ಗಾಂಧಿ ವಿರುದ್ಧದ ಆರೋಪ ಪಟ್ಟಿಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಆರೋಪಪಟ್ಟಿ ಸಲ್ಲಿಸಿರುವುದನ್ನು ಖಂಡಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಾರ್ಯಕರ್ತರು, ಇಲ್ಲಿನ ಶಾಂತಿ ನಗರದಲ್ಲಿರುವ ಇ.ಡಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಹಾಗೂ ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ನೇತೃತ್ವದಲ್ಲಿ ಮಧ್ಯಾಹ್ನ 3ರ ವೇಳೆಗೆ ಶಾಂತಿನಗರದ ಟಿಟಿಎಂಸಿ ಬಳಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರು, ಪ್ರತಿಭಟನೆಗೆ ಮುಂದಾದರು. ಅವರನ್ನು ಪೊಲೀಸರು ತಡೆದರು. ಆಗ ಕಾಂಗ್ರೆಸ್ ಕಾರ್ಯಕರ್ತರು ಬಸ್ ನಿಲ್ದಾಣದಲ್ಲಿಯೇ ಪ್ರತಿಭಟನೆ ನಡೆಸಿದರು.

ಈ ವೇಳೆ ಚಂದ್ರಶೇಖರ್, ‘ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ತುಳಿಯಲೆಂದೇ ಇಲ್ಲಸಲ್ಲದ ಆರೋಪಗಳನ್ನು ಇ.ಡಿ ಹೊರಿಸಿದೆ. ಕೇಂದ್ರದ ಈ ನಡೆಯ ವಿರುದ್ಧ ತೀವ್ರ ಹೋರಾಟ ನಡೆಸುತ್ತೇವೆ’ ಎಂದು ಹೇಳಿದರು.

ಶಾಂತಿನಗರದಲ್ಲಿರುವ ಇ.ಡಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಚಿತ್ರವಿದ್ದ ಫಲಕಗಳನ್ನು ಹಿಡಿದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರ, ಬಿಜೆಪಿ ಹಾಗೂ ಇ.ಡಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆ ನಿಲ್ಲಿಸುವಂತೆ ಪೊಲೀಸರು ಮನವಿ ಮಾಡಿದರು. ಆಗ ಕಾಂಗ್ರೆಸ್ ಕಾರ್ಯಕರ್ತರು, ಪೊಲೀಸರು ಹಾಕಿದ್ದ ತಡೆಯನ್ನು ಬೀಳಿಸಿ ಇ.ಡಿ ಕಚೇರಿಯತ್ತ ನುಗ್ಗಲು ಯತ್ನಿಸಿದರು.

ಪೊಲೀಸರು ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಬಸ್‌ಗಳಿಗೆ ತುಂಬಲು ಮುಂದಾದರು. ಇದಕ್ಕೆ ತೀವ್ರ ಪ್ರತಿರೋಧ ಒಡ್ಡಿದ್ದ ಕಾರ್ಯಕರ್ತರು ರಸ್ತೆಯ ಮೇಲೆ ಮಲಗಿದರು. ಪೊಲೀಸರು ಅವರನ್ನು ಎತ್ತೊಯ್ದು ಬಸ್‌ಗಳಿಗೆ ತುಂಬಿದರು. ಕೆಲಕಾಲ ವಶದಲ್ಲಿ ಇರಿಸಿಕೊಂಡು, ನಂತರ ಬಿಡುಗಡೆ ಮಾಡಿದರು.

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಅತಿಥಿಗಳು: ರಾಮಲಿಂಗಾರೆಡ್ಡಿ, ನಾಗೇಶ್ವರರಾವ್, ಕೃಷ್ಣ ಬೈರೇಗೌಡ, ಉದ್ಘಾಟನೆ: ಎಂ.ಎಸ್. ಮೀನಾ, ಎಂ.ಎಲ್. ಭಂಡಾರಿ, ಸೌಮ್ಯಾ ರೆಡ್ಡಿ, ಆಯೋಜನೆ: ಅಖಿಲ ಭಾರತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಕಾರ್ಮಿಕ ಕಲ್ಯಾಣ ಸಂಘಗಳ ಒಕ್ಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಭಾರತ ರತ್ನ ಡಾ: ಬಿ.ಆರ್. ಅಂಬೇಡ್ಕರ್ ಹಾಗೂ ಪೌರ ಕಾರ್ಮಿಕರ ದಿನಾಚರಣೆ: ಆಯೋಜನೆ: ಬಿಬಿಎಂಪಿ, ಸ್ಥಳ: ಡಾ.ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ, ಬೆಳಿಗ್ಗೆ 11.30

‘ಅನುಭವ ಮಂಟಪ-ಬಸವಾದಿ ಶರಣರ ವೈಭವ’ ರಥಕ್ಕೆ ಚಾಲನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಮಧ್ಯಾಹ್ನ 3.30

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಮೈತ್ರಿ ಎ. ಮತ್ತು ತಂಡ, ವಿಶೇಷ ಹಿಂದೂಸ್ತಾನಿ ಸಂಗೀತ ಕಛೇರಿ: ಪ್ರವೀಣ್ ಗೋಡ್ಖಿಂಡಿ, ಶಡಜ್ ಗೋಡ್ಖಿಂಡಿ, ಇಶಾನ್ ಘೋಶ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ಪ್ರವೀಣ್ ಗೋಡ್ಖಿಂಡಿ

ವಾದ್ಯ ವೈಭವ-2025: ನಾಗಸ್ವರ ವಾದನ: ಬೆಂಗಳೂರು ಬಿ.ಎಸ್. ರಮೇಶ್ ಬಾಬು, ಬಾಗೇಪಲ್ಲಿ ಬಿ. ಶ್ರೀನಾಥ್, ಡೋಲು: ಬಿ.ಆರ್. ವೆಂಕಟೇಶ್, ಎಂ. ಮುರುಗೇಶ್, ಮ್ಯಾಂಡೋಲಿನ್: ವಿಷ್ಣು ವೆಂಕಟೇಶ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಸಂಜೆ 5.30ರಿಂದ

ಹರಿದಾಸ ಮಂಜರಿ: ಗಾಯನ: ಮಾನಸಾ ಜಯರಾಜ್ ಕುಲಕರ್ಣಿ, ಕೀ-ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಐದನೇ ಬಡಾವಣೆ, ಜಯನಗರ, ಸಂಜೆ 5.30

‘ಸಂವಿಧಾನದ ಆಶಯ ಉಳಿಸುವಲ್ಲಿ ಯುವಜನರ-ಮಹಿಳೆಯರ ಪಾತ್ರ’ ಉಪನ್ಯಾಸ: ಮಂಜುಳಾ ಪಾವಗಡ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಅಹಿಕಾ ನಾಗದೀಪ್, ಪಿಟೀಲು: ಸೀತಾರಾಮ್, ಮೃದಂಗ: ಪ್ರಣವ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಪ್ರಕಾಶನಗರ, ಸಂಜೆ 7

ಹರಿದಾಸ ವೈಭವ: ನಂದಿತಾ ಉಪಾಧ್ಯಾಯ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣ ದೇಸಾಯಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ ಬಡಾವಣೆ, ಬನಶಂಕರಿ ಆರನೇ ಹಂತ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ರಾಜ್ಯ ಸರ್ಕಾರಕ್ಕೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ತಾಕೀತು

‘ನಕಲಿ ವೈದ್ಯರ ಹಾವಳಿ ತಡೆಗಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಕಲಿ ವೈದ್ಯರಿಂದ ಹಳ್ಳಿಗಳ ಮುಗ್ಧ ಜನರ ಜೀವ ಅಪಾಯದಲ್ಲಿದೆ’ ಎಂದು ತೀವ್ರ ಆತಂಕ ವ್ಯಕ್ತಪಡಿಸಿರುವ ಹೈಕೋರ್ಟ್, ‘ರಾಜ್ಯದಾದ್ಯಂತ ಇರುವ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಕೂಡಲೇ ಮುಂದಾಗಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಖಡಕ್ ತಾಕೀತು ಮಾಡಿದೆ.

‘ಖಾಸಗಿ ವೈದ್ಯಕೀಯ ವೃತ್ತಿ ನಡೆಸಲು ಕೋರಿರುವ ಅರ್ಜಿ ಪರಿಗಣಿಸುವಂತೆ ಮಂಡ್ಯ ಜಿಲ್ಲಾಧಿಕಾರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಕೆ.ಆರ್.ಪೇಟೆ ತಾಲ್ಲೂಕು ಬೂಕನಕೆರೆ ಹೋಬಳಿಯ ಎ.ಎ.ಮುರಳೀಧರ ಸ್ವಾಮಿ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಕುರಿತು ಆದೇಶಿಸಿದೆ.

‘ವೈದ್ಯಕೀಯ ಕ್ಷೇತ್ರದಲ್ಲಿ ಅರ್ಹತೆ ಇಲ್ಲದ ವ್ಯಕ್ತಿಗಳು ನಡೆಸುತ್ತಿರುವ ಕ್ಲಿನಿಕ್‌ಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈ ಆದೇಶದ ಪ್ರತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯದರ್ಶಿಗೆ ರವಾನಿಸಬೇಕು ಎಂದು ನ್ಯಾಯಪೀಠ ಹೈಕೋರ್ಟ್ ರಿಜಿಸ್ಟ್ರಾರ್‌ಗೆ ನಿರ್ದೇಶಿಸಿದೆ. ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ವರದಿಯನ್ನು ಸಲ್ಲಿಸುವಂತೆಯೂ ನ್ಯಾಯಪೀಠ ನಿರ್ದೇಶಿಸಿದೆ.

‘ಅರ್ಜಿದಾರರು ಕೇವಲ ಎಸ್ಎಸ್ಎಲ್‌ಸಿವರೆಗೆ ಓದಿದ್ದಾರೆ. ಭಾರತೀಯ ಪರ್ಯಾಯ ಔಷಧ ಮಂಡಳಿ ನೀಡಿದೆ ಎಂಬ ಪ್ರಮಾಣಪತ್ರ ಹೊಂದಿದ್ದಾರೆ. ಆಯುರ್ವೇದ, ಅಲೋಪತಿ,ಯುನಾನಿ ಸೇರಿದಂತೆ ಯಾವುದೇ ವಿಭಾಗದಲ್ಲಿ ಸೂಕ್ತ ಶೈಕ್ಷಣಿಕ ಅರ್ಹತೆ ಹೊಂದಿಲ್ಲ. ಆದರೂ ವೈದ್ಯ ಪದ್ಧತಿ ಅನುಸರಿಸುತ್ತಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ತಮ್ಮನ್ನು ತಾವು ವೈದ್ಯರೆಂದು ಬಿಂಬಿಸಿಕೊಳ್ಳುವ ಸ್ವಘೋಷಿತ ನಕಲಿ ವೈದ್ಯರು, ದೂರದ ಪ್ರದೇಶಗಳಲ್ಲಿ ಚಿಕಿತ್ಸಾಲಯಗಳನ್ನು ತೆರೆದು ಜನರನ್ನು ವಂಚಿಸುತ್ತಿರುವುದು ವೇದ್ಯವಾಗುತ್ತದೆ’ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

ಮರ ಪ್ರಾಧಿಕಾರ ರಚನೆಗೆ ಆದೇಶ

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆರು ತಿಂಗಳ ಒಳಗಾಗಿ ‘ಮರ ಪ್ರಾಧಿಕಾರ’ ರಚಿಸಬೇಕು ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ‘ರಾಜ್ಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮರ ಪ್ರಾಧಿಕಾರ ರಚಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಮಂಗಳೂರಿನ, ‘ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಸಂಘ’ದ ಕಾರ್ಯದರ್ಶಿ ಬೆನೆಡಿಕ್ಟ್ ಸಿ.ಫರ್ನಾಂಡಿಸ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ರಾಜ್ಯ ಸರ್ಕಾರ ಈಗಾಗಲೇ ಉತ್ತರ ಕನ್ನಡ, ಚಿಕ್ಕಮಗಳೂರು, ಚಾಮರಾಜನಗರ, ಶಿವಮೊಗ್ಗ, ಉಡುಪಿ, ಬೆಳಗಾವಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಮರ ಪ್ರಾಧಿಕಾರ ರಚಿಸಿ, ಅವುಗಳಿಗೆ ಮುಖ್ಯಸ್ಥರು ಹಾಗೂ ಸದಸ್ಯರನ್ನು ನೇಮಕ ಮಾಡಿ 2018ರ ಜನವರಿ 12ರಂದು ಆದೇಶಿಸಿದೆ. ಉಳಿದ ಯಾವ್ಯಾವ ಸ್ಥಳೀಯ ಸಂಸ್ಥೆಗಳಲ್ಲಿ ಮರ ಪ್ರಾಧಿಕಾರ ರಚನೆ ಮಾಡಿಲ್ಲವೋ, ಅಂತಹ ಕಡೆಗಳಲ್ಲಿ ಮುಂದಿನ ಆರು ತಿಂಗಳ ಒಳಗಾಗಿ ಮರ ಪ್ರಾಧಿಕಾರ ರಚಿಸಬೇಕು’ ಎಂದು ನಿರ್ದೇಶಿಸಿದೆ.

‘ರಾಜ್ಯದಲ್ಲಿ ಹಸಿರು ಹೊದಿಕೆ ಮತ್ತು ಪರಿಸರ ಸುಸ್ಥಿರತೆಯ ಕುಸಿತ ಕಾಣುತ್ತಿದೆ. ಹಾಗಾಗಿ, ಮರ ಪ್ರಾಧಿಕಾರ ರಚಿಸಬೇಕು’ ಎಂದು ಆದೇಶದಲ್ಲಿ ವಿವರಿಸಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಅಶ್ವಿನ್ ಜ್ಯೋತ್ಸ್ನಾ ಕುಟಿನ್ಹ ಮತ್ತು ಪ್ರೀತೇಶ್ ಡಿಸೋಜಾ ವಾದ ಮಂಡಿಸಿದ್ದರು.

ಮುಂದುವರಿದ ಲಾರಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘ ಕರೆ ನೀಡಿರುವ ಲಾರಿ ಮುಷ್ಕರಕ್ಕೆ ಬೆಂಬಲ ನೀಡಿರುವವರು ಮುಷ್ಕರ ಮುಂದುವರಿಸಿದ್ದಾರೆ. ಮುಷ್ಕರಕ್ಕೆ ಬೆಂಬಲ ನೀಡದ ಫೆಡರೇಷನ್ ಆಫ್ ಕರ್ನಾಟಕ ಲಾರಿ ಮಾಲೀಕರ ಸಂಘದ ಅಡಿಯಲ್ಲಿರುವ ಲಾರಿಗಳು ಸಂಚರಿಸುತ್ತಿವೆ.

‘ಸಾರಿಗೆ ಸಚಿವರು, ಮುಖ್ಯಮಂತ್ರಿ ಅವರು ಎರಡು ಬಾರಿ ಮಾತುಕತೆ ನಡೆಸಿದ್ದರೂ ನಮ್ಮ ಬೇಡಿಕೆ ಈಡೇರಿಲ್ಲ. ಡೀಸೆಲ್ ದರ ಇಳಿಸುವವರೆಗೆ ಮುಷ್ಕರ ಕೈಬಿಡುವುದಿಲ್ಲ’ ಎಂದು ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ಸ್ಪಷ್ಟಪಡಿಸಿದ್ದಾರೆ.

ಸರಾಗ ಸಂಚಾರ: ‘ನಾವು ಲಾರಿ ಮುಷ್ಕರ ಮಾಡಿಲ್ಲ. ಬಹುತೇಕ ಲಾರಿಗಳು ಸಂಚರಿಸುತ್ತಿವೆ’ ಎಂದು ಫೆಡರೇಷನ್ ಆಫ್ ಕರ್ನಾಟಕ ಲಾರಿ ಮಾಲೀಕರ ಅಸೋಸಿಯೇಶನ್ ಗೌರವಾಧ್ಯಕ್ಷ ಬಿ. ಚನ್ನಾರೆಡ್ಡಿ, ಅಧ್ಯಕ್ಷ ಸಿ. ನವೀನ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಜಿ. ನಾರಾಯಣ ಪ್ರಸಾದ್ ತಿಳಿಸಿದ್ದಾರೆ.

ಮಣ್ಣು ಕುಸಿದು ಇಬ್ಬರು ಕಾರ್ಮಿಕರ ಸಾವು

ಬೆಳಗಾವಿ: ಇಲ್ಲಿನ ಹೊಸ ಗಾಂಧಿ ನಗರದಲ್ಲಿ ಬುಧವಾರ ಒಳಚರಂಡಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ವೇಳೆ ಮಣ್ಣು ಕುಸಿದು ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೂಡಲಗಿ ತಾಲ್ಲೂಕಿನ ಪಟಗುಂಡಿ ಗ್ರಾಮದ ಬಸವರಾಜ ಸರವಿ (48) ಮತ್ತು ಶಿವಲಿಂಗ ಸರವಿ (20) ಮೃತರು. ಇನ್ನೊಬ್ಬ ಕಾರ್ಮಿಕ ಸಾಗರ ತಳವಾರ (18) ತಗ್ಗಿನಲ್ಲಿ ಇಳಿಯದ ಕಾರಣ, ಅವಘಡದಿಂದ ಪಾರಾದರು. ಬಸವರಾಜ ಅವರಿಗೆ ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಶಿವಲಿಂಗ ಅವರು ಶಿಕ್ಷಣ ಅರ್ಧಕ್ಕೆ ನಿಲ್ಲಿಸಿ ದುಡಿಮೆ ಮಾಡಿ ಕುಟುಂಬ ಸಾಕುತ್ತಿದ್ದರು.

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್ ಹತ್ತಿರ, ಬಿ.ಎಂ. ರೋಡ್, ಹಾಸನ–573201

Phone & Fax :08172-268296 Email: dcfhassan@yahoo.in.

ಸಂಖ್ಯೆ: ಎ4/ಯಸ/ರ.ಬ.ಮ.ತೆ/ಸಿ.ಆರ್–20/2022–23 ದಿನಾಂಕ: 01.04.2025

ಇ–ಹರಾಜು ಪ್ರಕಟಣೆ (ಎಂಎಸ್‌ಟಿಸಿ ಪೋರ್ಟಲ್ ಮುಖಾಂತರ)

2025–26ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿನ ಯಸಳೂರು–ಚಂಗಡಿಹಳ್ಳಿ ರಸ್ತೆಯ ಎಡ & ಬಲ ಬದಿಯಲ್ಲಿ ಬಾಗಿ / ಒಣಗಿ ಮಳೆಗಾಳಿಗೆ ಬೀಳುವ ಅಪಾಯ ಸ್ಥಿತಿಯಲ್ಲಿರುವ ನಿಂತ ಅಕೇಶಿಯಾ & ನೀಲಗಿರಿ ಮರಗಳನ್ನು ಇ–ಹರಾಜು/ಟೆಂಡರ್ ಮೂಲಕ ತೆರವುಗೊಳಿಸುವ ಕಾಮಗಾರಿಯನ್ನು ಮೆ॥ ಎಂ.ಎಸ್.ಟಿ.ಸಿ., ಬೆಂಗಳೂರು, ಸಂಸ್ಥೆಯ ಮುಖಾಂತರ ಇ–ಹರಾಜನ್ನು ದಿನಾಂಕ 22.04.2025 ರಂದು ನಡೆಸಲಿದ್ದು, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ www.mstcecommerce.com ನಲ್ಲಿ ಪಡೆಯಬಹುದಾಗಿರುತ್ತದೆ. Sl. No.1)SPECIES: Acacia = 286 Nilagiri = 44 Trees Standing Trees: 330 Nos. Approx. Timber(in M3)160.190 Approx. Firewood(in M3): 116.420 Sale Schedule Date : 22.04.2025 Time: 11.00 to 15.00 (11 AM to 03 PM)

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ,

ವಾಸಾಸಂಇ/ಹಿಸನಿ/ಹಾಸನ/26/ಕೆಎಸ್‌ಎಂಸಿಎ/2025–26

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ

ನಂ. ಡಿಸಿಸಿಬಿ/ಕಟ್ಟಡ/02/2025–26 ದಿನಾಂಕ : 16–04–2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬ್ಯಾಂಕಿನ ಕಿಕ್ಕೇರಿ ಶಾಖೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧ ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಕರ್ನಾಟಕ ಇ–ಪೋರ್ಟಲ್ ಜಾಲತಾಣ https//kppp.karnataka.gov.in ಮೂಲಕ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 24–04–2025ರ ಸಂಜೆ 5–00 ಗಂಟೆ ಆಗಿರುತ್ತದೆಂದು ತಿಳಿಯಪಡಿಸಿದೆ.

Tender No. MDCCB/2024-25/BD/ WORK_INDENT6/CALL-2	Construction of MDCC Bank Kikkeri Branch building

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಎಂ.ಸಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂಖ್ಯೆ: ಮನಪಾಬ/ತಾಶಾ/ವಿ/ನೀಸಶಾ/40ಎಂ.ಎಲ್.ಡಿ/ಅಲ್ಲಿಪುರ/2024–25/2025–26 ದಿ: 16 .04.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2025–26ನೇ ಸಾಲಿನ ಪಾಲಿಕೆಯ ಅನುದಾನದಲ್ಲಿ ಇಂಡೆಂಟ್ ಸಂಖ್ಯೆ:DMA/2024-25/SE5057, DMA/2024-25/SE5058, DMA/2024-25/IND4594, DMA/2024-25/IND4595, ಮತ್ತು DMA/2024-25/OW/WORK_INDENT31544/CALL-4 ಕಾಮಗಾರಿಗಳ ಟೆಂಡರ್‌ನ್ನು ದಿನಾಂಕ:25.04.2025 ರಂದು ಸಂಜೆ 5.00 ಗಂಟೆಯೊಳಗಾಗಿ ಸಲ್ಲಿಸಬಹುದು. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28.04.2025 ಸಾಯಂಕಾಲ 05.30 ಗಂಟೆಗೆ ಮತ್ತು ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:06.05.2025ರ ಬೆಳಿಗ್ಗೆ 10.00 ಗಂಟೆಗೆ. ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in/#/portal/portal-home ಅನ್ನು ಮತ್ತು www.ballaricity.mrc.gov.in ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ,ಬಳ್ಳಾರಿ

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂಖ್ಯೆ: ಮನಪಾಬ/ತಾಶಾ/ಟೆ.ಪ್ರ./01/2025–26 ದಿ: 16.04.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2025–26 ನೇ ಸಾಲಿನ ಸಾಮಾನ್ಯ ನಿಧಿಯಲ್ಲಿ ಇರುತ್ತದೆ. ಇಂಡೆಂಟ್ ಸಂಖ್ಯೆ: 1) DMA/2025-26/SE 5185 “Selection of transaction advisor for development of commercial complex at the site of old shops opp. Natraj Talkies zone-2 office premises in Ballari city, Karnataka in PPP model.” ಗೆ ಟೆಂಡರ್ ಸಲ್ಲಿಸಲು ದಿನಾಂಕ:16.05.2025 ರ ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ: 28.04.2025 ರ ಬೆಳಿಗ್ಗೆ 11.30 ಗಂಟೆಗೆ, ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17.05.2025 ರ ಬೆಳಿಗ್ಗೆ 11.00 ಗಂಟೆಗೆ. ಮತ್ತು ಕಾಮಗಾರಿಯ ಎಲ್ಲಾ ವಿವರಗಳಿಗಾಗಿ, ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://kppp.karnataka.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ,ಬಳ್ಳಾರಿ

ಕೃಷಿ ಇಲಾಖೆ
ಕೃಷಿ ಆಯುಕ್ತರವರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು – 560 001.

ಸಂಖ್ಯೆ: JDA(E,T&e-Gov)/e-Proc/KSDA/HEWS/01/2024-25 ದಿನಾಂಕ:28.03.2025

ಟೆಂಡರ್ ಪ್ರಕಟಣೆ

ಕೃಷಿ ಇಲಾಖೆಯ ಕೇಂದ್ರ ಕಛೇರಿಗೆ ಅವಶ್ಯವಿರುವ 04 ಸಂಖ್ಯೆಗಳ **HIGH-END COMPUTER WORKSTATIONS** ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಂಗ್ರಹಿಸಲು ಟೆಂಡರ್‌ನ್ನು ಆಹ್ವಾನಿಸಿದೆ.

ಬಿಡ್‌ದಾರರಿಗೆ ಸೂಚನೆಗಳು, ಅರ್ಹತೆಯ ಮಾನದಂಡಗಳು, ಮೌಲ್ಯ ಮಾಪನದ ಮಾನದಂಡಗಳು ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುವ ಬಿಡ್ ಡಾಕ್ಯುಮೆಂಟ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು **https//kppp.karnataka.gov.in** ಮತ್ತು ಟೆಂಡರ್ ಡಾಕ್ಯೂಮೆಂಟ್‌ನ ಕರಾರುಗಳಿಗೆ ಅನುಗುಣವಾಗಿ ಟೆಂಡರ್‌ನ್ನು ಸಲ್ಲಿಸತಕ್ಕದ್ದು.

ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2025. ಬಿಡ್‌ಗಳನ್ನು ತೆರೆಯುವ ದಿನಾಂಕ: 02.05.2025. ಇಎಂಡಿ ಮೊತ್ತ: ರೂ. 2,50,000/– (ಎರಡು ಲಕ್ಷದ ಸಾವಿರ ರೂಪಾಯಿಗಳು ಮಾತ್ರ) ಬಿಡ್ ಭದ್ರತಾ ಮೌಲ್ಯ: ರೂ. 6,25,000/– (ಆರು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ).

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಶ್ರೀ **ಮಾರ್ಥಾಂಡ**. ಸಹಾಯಕ ಕೃಷಿ ನಿರ್ದೇಶಕರು (ಕೃಷಿ ವಾರ್ತೆ), ಕೃಷಿ ಇಲಾಖೆ ಶೇಷಾದ್ರಿ ರಸ್ತೆ, ಬೆಂಗಳೂರು–560001. ಫೋನ್: +91–80–22074138/8277929837, ಇ–ಮೇಲ್ ವಿಳಾಸ: digigrigok@gmail.com

ಸಹಿ/–
ಕೃಷಿ ನಿರ್ದೇಶಕರು ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

ವಾಸಾಸಂಇ/ವಾಪ್ರ/ಜಿಎ/238/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
‘ಜಲಭವನ’, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029.
ದೂ: 080–41106508 ಇಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಟೆಂಡರ್ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)

ಸಂಖ್ಯೆ: KWB/TEC/CE(B)/Chintamani DC works/52/2025-26 Dtd:15.04.2025.

ಕಾಮಗಾರಿಯ ಹೆಸರು: ಚಿಂತಾಮಣಿ ನಗರಸಭೆಯ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ ಚಿಂತಾಮಣಿಯ ಟಿಪ್ಪು ನಗರದಲ್ಲಿ ಹಾಲಿಯಿರುವ ಒಳಚರಂಡಿ ಕೊಳವೆ ಮಾರ್ಗವನ್ನು ಹೊಸ ಕೊಳವೆ ಮಾರ್ಗದೊಂದಿಗೆ ಬದಲಾಯಿಸುವ ಮತ್ತು ಗೃಹ ಸಂಪರ್ಕ ಅಳವಡಿಸುವ ಕಾಮಗಾರಿ. **ಇಂಡೆಂಟ್ ನಂ: KUWSDB/2025-26/WS/ WORK_INDENT337**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು(ಬೆಂ)
ಕನನೀಸ & ಒಚ ಮಂಡಳಿ, ಬೆಂಗಳೂರು

DIPR/CP/YC/232/2025-26

TENDER NOTICE

OFFICE OF THE DIGP GROUP CENTRE CRPF, YELAHANKA, BENGALURU-560119 invites sealed tender for running the following shops inside this Group Centre premises for initial period of 11 months.

1. Stationary/Fancy Shop	2. Bakery Shop
3. Tailor Shop	4. Fruit and Juice stall
5. Fast Food Shop (Veg & Non veg)	6. Chicken Shop
7. Fish Shop	8. Force Personnel Kit Items Shop
9. Photo Studio	10. Cyber cafe

2. The tender forms, details of earnest money with terms and conditions may be obtained from Group Centre CRPF Yelahanka, Bengaluru-560119 within 12 days from the date of advertisement. Priority will be given to retired force personnel and their dependent, veer nari, widows of force personnel.

Order by
DIGP, GC CRPF BENGALURU

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 02/2025–26 ದಿನಾಂಕ: 15.04.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ **IDD Empanelled Consultants** ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ದಕ್ಷಿಣ & ನಂ.2 ಉತ್ತರ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 150.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್‌ಟಲ್‌ನಲ್ಲಿ ಸೂಚಿಸಲಾಗಿದೆ.

1. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು(ದ) ಬೆಂಗಳೂರುರವರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: 28.04.2025 ಬೆಳಿಗ್ಗೆ 11.00 ಗಂಟೆಗೆ
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 14.05.2025 ಸಂಜೆ 4.00 ಗಂಟೆ ಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 15.05.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/223/Zen/2025-26

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆಶಾ/ವಾವಿ/ಬಾಡಿಗೆ ವಾಹನ/ಪ.ಪ್ರ/2025–26 ದಿನಾಂಕ: 16.04.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಲು ಮಾಸಿಕ ಬಾಡಿಗೆ ಆಧಾರದ ಮೇಲೆ 10 ಸಂಖ್ಯೆಯ ಎ.ಸಿ ವಾಹನಗಳು ಮತ್ತು 08 ಸಂಖ್ಯೆಯ ನಾನ್ ಎ.ಸಿ ವಾಹನಗಳು ಮತ್ತು 2 ಸಂಖ್ಯೆ ಇನ್ನೋವಾ ಕ್ರಿಷ್ಟಾ ವಾಹನ (ಇಂಧನ ಹಾಗೂ ಚಾಲಕರ ಸಹಿತ) ಗಳ ಸೇವೆಯನ್ನು ಪಡೆಯಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಆಸಕ್ತಿಯುಳ್ಳ ಅಧಿಕೃತ ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ:DMA/2025-26/SE5169 ಮೂಲಕ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://Kppp.karnataka.gov.inನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು ದಿನಾಂಕ:02/05/2025 ಸಂಜೆ 05 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.

ಆಯುಕ್ತರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ದಕ್ಷಿಣ–ಪಶ್ಚಿಮ–2	ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/55/2025–26 ದಿನಾಂಕ: 15–04–2025 (4ನೇ ಕರೆ)	Rs.41,87,808/- / Rs.83,800/-	18-04-2025 ಸಂಜೆ 5.00 ಗಂಟೆಯವರೆಗೆ	21-04-2025 ಬೆಳಿಗ್ಗೆ 10.30 ಗಂಟೆಯ ನಂತರ
2.	ದಕ್ಷಿಣ–ಪಶ್ಚಿಮ–2	ಬೆಂಜಮಂ/ಕಾನಿಅ(ದ.ಪ–2)/ತಾಂಅ/ಪಿಬಿ/55/2025–26 ದಿನಾಂಕ: 15–04–2025	Rs.56,89,621/- / Rs.1,13,800/-	18-04-2025 ಸಂಜೆ 5.00 ಗಂಟೆಯವರೆಗೆ	21-04-2025 ಬೆಳಿಗ್ಗೆ 10.30 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–ಪಶ್ಚಿಮ)–2

ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
3.	ಪಶ್ಚಿಮ–2	ಬೆಂಜಮಂ/ಕಾನಿಅ(ಪಶ್ಚಿಮ–2)/ಪಿಬಿ/54/2025–26 ದಿನಾಂಕ: 15–04–2025	Rs.7,83,825/- / Rs.19,600/-	25-04-2025 ಮಧ್ಯಾಹ್ನ 3.00 ಗಂಟೆಯವರೆಗೆ	28-04-2025 ಮಧ್ಯಾಹ್ನ 3.00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ)–2.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO230/25-26

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
Fax No. 08472/260776 Phone: 08472/ 278675, Email Id: itstaff_ulb_gulbarga@yahoo.com

ಸಂಖ್ಯೆ:ಕಮಪಾ/ಆಶಾ/ಎಸ್.ಡಬ್ಲ್ಯೂ.ಎಮ್/ಸಿ&ಡಿ/Machinery/19/2024-25 ದಿನಾಂಕ:15.04.2025

:: ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ ::

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ನಿಯಮಗಳು 2000ರ ಅಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಲಾದ ಕಾಮಗಾರಿ ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಈ ಕೆಳಕಂಡ ಸೇವೆಗಳಿಗೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಪ್ರಕಾರ ಟೆಂಡರ್ ಕರೆಯಲಾಗಿದೆ.

1) ಕಾಮಗಾರಿ/ಸೇವೆಯ ವಿವರ : Supply, Installation, Commissioning and Trail Run of 50 TPD C & D Waste Processing Plant in Khandal village, Kalaburagi Mahanagara Palike, Kalaburagi. 2) ಇಂಡೆಂಟ್ ಸಂಖ್ಯೆ: DMA/2024-25/IND4076/CALL-3, 3) ಟೆಂಡರ್‌ಗಿಟ್ಟ ಮೊತ್ತ: **2,04,00,000/-,** 4) **ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು:** 1. ಪೂರ್ವಭಾವಿ ಸಭೆ ದಿನಾಂಕ:21.04.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ, 2. ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:22.04.2025 ರಂದು ಸಾಯಂಕಾಲ 4.30 ಗಂಟೆಯವರೆಗೆ, 3. ಟೆಂಡರ್ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ:26.04.2025 ರಂದು ಸಾಯಂಕಾಲ 4.30 ಗಂಟೆಯವರೆಗೆ, 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28.04.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ 5. ಆರ್ಥಿಕ ಬಿಡ್ ತೆರೆಯುವ ದಿನಾಂಕ:30.04.2025 ರಂದು ಬೆಳಿಗ್ಗೆ 11.30 ಗಂಟೆಯವರೆಗೆ

ದಿನಾಂಕ: 11.04.2025 ರ ಟೆಂಡರ್ ಪ್ರಕಟಣೆಯ ಅವಧಿ ವಿಸ್ತರಣೆ

1) ಕಾಮಗಾರಿ/ಸೇವೆಯ ವಿವರ : Supply, Installation, Commissioning and Trail Run of 50 TPD C & D Waste Processing Plant in Khandal village, Kalaburagi Mahanagara Palike, Kalaburagi. 2) ಇಂಡೆಂಟ್ ಸಂಖ್ಯೆ: DMA/2024-25/IND4076/ CALL-3, 3) ಟೆಂಡರ್‌ಗಿಟ್ಟ ಮೊತ್ತ: **2,04,00,000/-,** 4) **ಅವಧಿ ವಿಸ್ತರಣೆಯ ಟೆಂಡರಿಗಾಗಿ ನಿಗಧಿಪಡಿಸಲಾದ ದಿನಾಂಕಗಳು:** 1. ಪೂರ್ವ ಭಾವಿ ಸಭೆ ದಿನಾಂಕ: 28.04.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ, 2. ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:29.04.2025 ರಂದು ಸಾಯಂಕಾಲ 4.30 ಗಂಟೆಯವರೆಗೆ, 3. ಟೆಂಡರ್ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ:03.05.2025 ರಂದು ಸಾಯಂಕಾಲ 4.30 ಗಂಟೆಯವರೆಗೆ, 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:05.05.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ, 5. ಆರ್ಥಿಕ ಬಿಡ್ ತೆರೆಯುವ ದಿನಾಂಕ:07.05.2025 ರಂದು ಬೆಳಿಗ್ಗೆ 11.30 ಗಂಟೆಯವರೆಗೆ

* ಇಎಮ್‌ಡಿ ಕುರಿತು ಹಾಗೂ ಹೆಚ್ಚಿನ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದು. * ಹೆಚ್ಚಿನ ವಿವರಗಳಿಗಾಗಿ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ಕಲಬುರಗಿ ಮಹಾನಗರ ಪಾಲಿಕೆರವರನ್ನು ಸಂಪರ್ಕಿಸಬಹುದಾಗಿದೆ.
* ವೆಬ್‌ಸೈಟ್: https://kppp.karnataka.gov.in

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ)
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/37/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

ಟೆಂಡರ್ ಪ್ರಕಟಣೆ
(ONLY THROUGH *“kpp-Procurement”* SYSTEM)

ಉಲ್ಲೇಖ: 1.ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:59/2025–26 ದಿನಾಂಕ: 15.04.2025

ಸಿಂಗಟಾಲೂರು ಏತ ನೀರಾವರಿ ಯೋಜನೆಯ ಮುಂಡರಗಿ ವಿಭಾಗ–01 ಕಛೇರಿ ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಉಲ್ಲೇಖ(1)ರ ಟೆಂಡರ್ ಪ್ರಕಟಣೆಯಂತೆ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No	Name of work	Amount put to tender (Rs. in Lakhs)	EMD (in Rs.)
1	Improvements to protection wall and CC lining at Tail end of Mundaragi Branch Canal **(Indent No: KNNL/2024-25/CN/ WORK_INDENT2882)**	29.97 (Including GST)	60000/-

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ **ದಿನಾಂಕ: 16–04–2025**ರ ನಂತರ “https://kppp.karnataka.gov.in” ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ: 06–05–2025** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 08–05–2025** ಎಂದು ನಿಗದಿಪಡಿಸಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು e-procurement Help-desk Phone No's: +91-80-46010000, +91-80-68948777 ಅನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಮುಂಡರಗಿ, ಗದಗ ಜಿಲ್ಲೆ.

ವಾ.ಸಾ.ಇ/ಗದಗ/26/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–07/148/2025–26 ದಿನಾಂಕ: 16.04.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಹಂಕ ಪಿನಾಕಿನಿ ಭವನದ ಆವರಣದಲ್ಲಿರುವ ಬಿಡಬ್ಲ್ಯೂಎಸ್‌ಎಸ್‌ಬಿ ಪಂಪಿಂಗ್ ಸ್ಟೇಷನ್‌ನಿಂದ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ನೀರು ಸರಬರಾಜು ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ. (2ನೇ ಕರೆ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02.05.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/235/Zen/2025-26

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ./2025–26/00094 ದಿನಾಂಕ : 16–04–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 2, 3, 4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ** ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ್ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ. ಸಾಮಾನ್ಯ : 17791/ಕರೆ–3.

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 73.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	22–04–2025 ರ ಸಂಜೆ 5.30 ಘಂಟೆಯವರೆಗೆ.
ಬ) ಟೆಂಡರ್ ಸ್ವೀಕರಿಸುವ ದಿನಾಂಕ	:	24–04–2025 ರ ಸಂಜೆ 4.00 ಘಂಟೆಯವರೆಗೆ.
ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	25–04–2025 ರ ಸಂಜೆ 4.30 ಘಂಟೆಯವರೆಗೆ.
ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	28–04–2025 ರ ಸಂಜೆ 4.30 ಘಂಟೆಯವರೆಗೆ.

ವರ್ಕ ಇಂಡೆಂಟ್ ನಂ. ಸಾಮಾನ್ಯ : 20406, 19170, 18072/ಕರೆ–3, 20869, 17785/ಕರೆ–3.

ವರ್ಕ ಇಂಡೆಂಟ್ ನಂ. ಕ್ಯಾಟಗರಿ 2ಎ : 19880/ಕರೆ–2.

ವರ್ಕ ಇಂಡೆಂಟ್ ನಂ. ಪರಿಶಿಷ್ಟ ಪಂಗಡ : 20501/ಕರೆ–2.

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 300.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 25.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಪೂರ್ವ ಭಾವಿ ಸಭೆಯ ದಿನಾಂಕ	:	28–04–2025 ರ ಬೆಳಿಗ್ಗೆ 11.30 ಘಂಟೆಯವರೆಗೆ.
ಆ) ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ	:	03–05–2025 ರ ಸಂಜೆ 5.30 ಘಂಟೆಯವರೆಗೆ.
ಬ) ಟೆಂಡರ್ ಸ್ವೀಕರಿಸುವ ದಿನಾಂಕ	:	07–05–2025 ರ ಸಂಜೆ 4.00 ಘಂಟೆಯವರೆಗೆ.
ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	08–05–2025 ರ ಸಂಜೆ 4.30 ಘಂಟೆಯವರೆಗೆ
ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	09–05–2025 ರ ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : **https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/19/ಮಣಿಪಾಲ್/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ, ಭಾರತ

ಸಂಖ್ಯೆ: VTU/BGM/SAP/CW1/T-701,702,703/2025-26/300 ದಿನಾಂಕ: 16-04-2025

ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ ಸಂ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ
1	**T-701:** Tender for Printing and supply of Main Answer Booklets (UG) for forth coming examinations to VTU Examination Section, Belagavi.	Rs. 3,87,50,000/-	Rs. 5,81,500/-
2	**T-702:** Tender for Establishment of Center of Excellence in Artificial Intelligence Based Skilling and Assessment and Infrastructure for Digital Class Rooms and Digital Library at VTU Regional Centre, Kalaburagi under Kalyan Karnataka Regional Development Board (KKRDB) funds as Turnkey Project.	Rs. 11,95,00,000/-	Rs. 17,92,500/-
3	**T-703:** Tender for Procurement of Desktop Computers to Various Section / Centres of VTU Belagavi, Mysuru, Muddenahalli and Kalaburgi.	Rs. 3,44,85,500/-	Rs. 5,17,500/-

ಟೆಂಡರ್ ಬಿಡ್ ಪೂರ್ವಭಾವಿ ಸಭೆ ದಿನಾಂಕ: **23–04–2025 ರಂದು ಬೆಳಿಗ್ಗೆ 11.00 ಗಂಟೆಗೆ ಆನ್‌ಲೈನ್ ಮೂಲಕ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15–05–2025 ರಂದು ಮಧ್ಯಾಹ್ನ 2.30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **16–05–2025 ರಂದು ಸಂಜೆ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ಸಹಿ/–
ಕುಲಸಚಿವರು

ವಾಸಾಸಂಇ/ಬೆಳಗಾವಿ/94/ಅಡ್ವರ್ಟೋರ್/2025–26

ಎಲ್ಲ ನಿವೃತ್ತರಿಗೆ ಗ್ರ್ಯಾಚ್ಯುಟಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ನಿವೃತ್ತ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗ್ರ್ಯಾಚ್ಯುಟಿ ನೀಡಲು ಆಗ್ರಹಿಸಿ ಮೇ 17ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಸತ್ಯಾಗ್ರಹ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ತಿಳಿಸಿದೆ.

ಎ ಐ ಟಿ ಯು ಸಿ – ಟಿ ಯು ಸಿ ಸಿ – ಎಐಯುಟಿಯುಸಿ ನೇತೃತ್ವದಲ್ಲಿ ಬುಧವಾರ ನಡೆದ ಅಂಗನವಾಡಿ ಸಂಘಟನೆಗಳ ಜಂಟಿ ಸಮಾವೇಶದಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಯಿತು.

‘2011-12ನೇ ಸಾಲಿನಲ್ಲಿ ನಿವೃತ್ತರಾದ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪೈಕಿ ಬಹಳಷ್ಟು ಜನ ಮೃತಪಟ್ಟಿದ್ದಾರೆ. 20 ಸಾವಿರ ವಯೋವೃದ್ಧರು ಯಾವುದೇ ಆರ್ಥಿಕ ಆಸರೆ ಇಲ್ಲದೇ ದಯನೀಯ ಬದುಕು ನಡೆಸುತ್ತಿದ್ದಾರೆ. ಸರ್ಕಾರ 2023ರಿಂದ ಗ್ರ್ಯಾಚ್ಯುಟಿ ಜಾರಿಗೊಳಿಸಿ ಕೈ ತೊಳೆದುಕೊಳ್ಳುವುದು ಸರಿಯಲ್ಲ’ ಎಂದು ಒಕ್ಕೂಟದ ಜಿ.ಆರ್. ಶಿವಶಂಕರ್, ಎಂ. ಜಯಮ್ಮ, ನಾಗರತ್ನಮ್ಮ, ಬಿ. ಅಮ್ಜದ್, ಎಂ.ಉಮಾದೇವಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

5,970 ಸಿಬ್ಬಂದಿಗೆ ಸಿಗದ ಅನುಮೋದನೆ • ಅಧಿಕಾರಿಗಳಿಂದ ಲಂಚದ ಬೇಡಿಕೆ: ಆರೋಪ

ಗ್ರಾ.ಪಂ ಸಿಬ್ಬಂದಿಗಿಲ್ಲ ‘ಸೇವಾ ಭದ್ರತೆ’

• ಸಿದ್ದು ಆರ್.ಜಿ.ಹಳ್ಳಿ

ಮುಖ್ಯಾಂಶಗಳು

- ಅನುಮೋದನೆಗಾಗಿ ಎರಡು ವರ್ಷದಿಂದ ಕಾಯುತ್ತಿರುವ ಸಿಬ್ಬಂದಿ
- ಅನುಮೋದನೆ ದೊರೆತರೆ ಹಲವು ಸೌಲಭ್ಯಗಳ ವಿಸ್ತರಣೆ

ಮಂಡ್ಯ: ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಕನಿಷ್ಠ ವಿದ್ಯಾರ್ಹತೆ ಇಲ್ಲದ ಸಿಬ್ಬಂದಿಗೆ ‘ಸೇವಾ ಭದ್ರತೆ’ ನೀಡಲು ರಾಜ್ಯ ಸರ್ಕಾರ 2023ರಲ್ಲೇ ಆದೇಶ ಹೊರಡಿಸಿದ್ದರೂ, 5,970 ಸಿಬ್ಬಂದಿಗೆ ಇದುವರೆಗೆ ಅನುಮೋದನೆ ಸಿಕ್ಕಿಲ್ಲ.

2017ಕ್ಕೂ ಮುಂಚೆ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡ ನೀರುಗಂಟಿ (ವಾಟರ್ ಆಪರೇಟರ್), ಜವಾನ (ಅಟೆಂಡರ್) ಮತ್ತು ಸ್ವಚ್ಛತಾಗಾರರ ಹುದ್ದೆಗಳಿಗೆ ‘ಕನಿಷ್ಠ ವಿದ್ಯಾರ್ಹತೆ’ಯ ತೊಡಕು ನಿವಾರಿಸಿ ಸಭಾ ನಡಾವಳಿ, ವೇತನ ಪಾವತಿ, ಹಾಜರಾತಿ ಆಧಾರದ ಮೇಲೆ ಜಿಲ್ಲಾ ಪಂಚಾಯಿತಿಯಿಂದ ಘಟನೋತ್ತರವಾಗಿ ಅನುಮೋದನೆ ನೀಡಲು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಿರ್ದೇಶಕರು 2023ರಲ್ಲೇ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಆದೇಶಿಸಿದ್ದರು.

2017ರ ಅಕ್ಟೋಬರ್ 31ಕ್ಕೂ ಮುಂಚೆ ನೇಮಕಗೊಂಡ ಕರ ವಸೂಲಿಗಾರರು–940, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್– 1,231, ನೀರುಗಂಟಿ– 12,348, ಸ್ವಚ್ಛತಾಗಾರರು– 2,847, ಜವಾನ– 1306 ಸೇರಿದಂತೆ ಒಟ್ಟು 18,672 ಸಿಬ್ಬಂದಿಗೆ ನಾನಾ ಕಾರಣಗಳಿಂದ ಜಿಲ್ಲಾ ಪಂಚಾಯಿತಿ ಅನುಮೋದನೆ ಸಿಕ್ಕಿರಲಿಲ್ಲ.

‘₹10 ಸಾವಿರ ಲಂಚ ಕೊಡಿ’

‘ಹಲವು ವರ್ಷಗಳ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಸಿಬ್ಬಂದಿಗೆ ಸೇವಾ ಭದ್ರತೆ ನೀಡಲು ಕ್ರಮ ಕೈಗೊಂಡಿದೆ. ಆದರೆ, ಅಧಿಕಾರಿಗಳ ಹಣದ ದಾಹದಿಂದ ಅನುಮೋದನೆ ನೀಡುವ ಕಾರ್ಯ ನನೆಗುದಿಗೆ ಬಿದ್ದಿದೆ. ಒಬ್ಬ ಸಿಬ್ಬಂದಿಗೆ ಅನುಮೋದನೆ ನೀಡಲು ಕೊಪ್ಪಳ, ಗದಗ, ಶಿವಮೊಗ್ಗ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ₹10 ಸಾವಿರ ಲಂಚ ಕೇಳುತ್ತಿದ್ದಾರೆ. ಚಿತ್ರದುರ್ಗದಲ್ಲಿ ಕೆಲವು ಸಿಬ್ಬಂದಿಗೆ ಅನುಮೋದನೆ ಸಿಕ್ಕಿದ್ದರೂ, ಹಣ ಕೊಟ್ಟ ನಂತರವಷ್ಟೇ ಆದೇಶ ಪ್ರತಿ ನೀಡುವುದಾಗಿ ಕಾಡಿಸುತ್ತಿದ್ದಾರೆ’ ಎಂದು ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷ ಎಂ.ಬಿ. ನಾಡಗೌಡ ಆರೋಪಿಸಿದರು.

ಅವರಲ್ಲಿ 11,681 ಸಿಬ್ಬಂದಿ ಕನಿಷ್ಠ ವಿದ್ಯಾರ್ಹತೆ ಹೊಂದದ ಕಾರಣಕ್ಕೆ ಅನುಮೋದನೆಗಾಗಿ ಬಾಕಿ ಉಳಿದಿದ್ದರು.

‘5,711 ಸಿಬ್ಬಂದಿಗೆ ಅನುಮೋದನೆ ನೀಡಲಾಗಿದ್ದು, ಉಳಿದವರಿಗೆ ‘ಸೇವಾ ಭದ್ರತೆ’ ಕಲ್ಪಿಸಬೇಕಿದೆ. ಕೆಲವೆಡೆ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಮತ್ತೆ ಕೆಲವೆಡೆ ಬಾಕಿ ಪ್ರಕರಣಗಳ ವಿಲೇವಾರಿಗೆ ತಂಡ ರಚಿಸಿದ್ದೇವೆ. ಶೀಘ್ರದಲ್ಲೇ ಅನುಮೋದನೆ ನೀಡಲಾಗುತ್ತದೆ’ ಎನ್ನುತ್ತಾರೆ ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕಾರಿಗಳು.

ಹಲವು ಸೌಲಭ್ಯ: ಜಿಲ್ಲಾ ಪಂಚಾಯಿತಿ ಅನುಮೋದನೆ ನೀಡಿದರೆ, ಕನಿಷ್ಠ ವೇತನ, ಸೇವಾ ಭದ್ರತೆ, ಅನುಕಂಪದ ಆಧಾರದಲ್ಲಿ ಕುಟುಂಬದ ಸದಸ್ಯರ ನೇಮಕ, ಪಿಂಚಣಿ ಸೌಲಭ್ಯ, ಸಕಾಲದಲ್ಲಿ ವೇತನ, ರಜೆ ಸೌಲಭ್ಯ, ವೈದ್ಯಕೀಯ ಸೌಲಭ್ಯ ಹಾಗೂ ವಿದ್ಯಾರ್ಹತೆ ಗಳಿಸಿದರೆ ಬಡ್ತಿ ಸೇರಿ ಹಲವು ಸೌಲಭ್ಯಗಳು ಸಿಬ್ಬಂದಿಗೆ ಸಿಗಲಿವೆ.

‘ವೇತನ ಪಾವತಿ, ಪಂಚಾಯಿತಿ ನಿರ್ಣಯ ಮತ್ತು ಹಾಜರಾತಿ ದಾಖಲೆಗಳು ಪಿಡಿಒ ಬಳಿಯೇ ಇರುತ್ತವೆ. ಆದರೂ ದಾಖಲೆ ತಂದುಕೊಡುವಂತೆ ಸಿಬ್ಬಂದಿಯನ್ನು ಅಲೆದಾಡಿಸುತ್ತಿದ್ದಾರೆ.

ಅನುಮೋದನೆಗೆ ಕಾದಿರುವ ಪಂಚಾಯಿತಿ ಸಿಬ್ಬಂದಿ

ಹುದ್ದೆ	ಒಟ್ಟು ಸಿಬ್ಬಂದಿ	ಬಾಕಿ ಸಿಬ್ಬಂದಿ
ವಾಟರ್ ಆಪರೇಟರ್	8,994	4,308
ಸ್ವಚ್ಛತಾಗಾರರು	1,814	1,222
ಅಟೆಂಡರ್	814	440
ಒಟ್ಟು	11,681	5,970

ಮಂಡ್ಯ ಜಿಲ್ಲೆಯಲ್ಲಿ 601 ಸಿಬ್ಬಂದಿಗೆ ಅನುಮೋದನೆ ನೀಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ತಿಂಗಳೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ

ಕೆ.ಆರ್. ನಂದಿನಿ, ಸಿಇಒ, ಮಂಡ್ಯ ಜಿಲ್ಲಾ ಪಂಚಾಯಿತಿ

ಭ್ರಷ್ಟಾಚಾರದಿಂದಲೇ ಅನುಮೋದನೆ ಕಾರ್ಯ ವಿಳಂಬವಾಗಿದೆ’ ಎಂದು ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ದೂರಿದ್ದಾರೆ.

ಸುದ್ದಿ 2 ನಿಮಿಷ

ಯಕ್ಷಗಾನ ಅಕಾಡೆಮಿ ಕಚೇರಿ ಸ್ಥಳಾಂತರವಿಲ್ಲ: ಶಿವರಾಮ ಶೆಟ್ಟಿ

ಬೆಂಗಳೂರು: ‘ಕಲೆ, ಕಲಾವಿದರ ದೃಷ್ಟಿಯಿಂದ ಕರ್ನಾಟಕ ಯಕ್ಷಗಾನ ಅಕಾಡೆಮಿಯ ಕೇಂದ್ರ ಕಚೇರಿ ಬೆಂಗಳೂರಿನಲ್ಲೇ ಇರಬೇಕು. ಯಾವುದೇ ಜಿಲ್ಲೆಗೆ ಸ್ಥಳಾಂತರಿಸುತ್ತಿಲ್ಲ’ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಸ್ಪಷ್ಟನೆ ನೀಡಿದರು.

ಬುಧವಾರ ಸರ್ವಸದಸ್ಯರ ಸಮ್ಮುಖದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು, ‘ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಂಗಳೂರು, ಉಡುಪಿಯಲ್ಲಿ ನಡೆಸಲಾಯಿತು. ಇದರ ಹಿಂದೆ ಅಕಾಡೆಮಿ ಸ್ಥಳಾಂತರದ ಉದ್ದೇಶ ಇರಲಿಲ್ಲ. ಸದಸ್ಯರೂ ಸ್ಥಳಾಂತರದ ಬಗ್ಗೆ ಪ್ರಸ್ತಾಪಿಸಿಲ್ಲ. ಪ್ರಶಸ್ತಿಗಳ ಘೋಷಣೆಯಂತಹ ಕಾರ್ಯ ಚಟುವಟಿಕೆಗಳನ್ನು ಇನ್ನುಮುಂದೆ ಕೇಂದ್ರ ಕಚೇರಿಯಲ್ಲಿಯೇ ನಡೆಸಲಾಗುವುದು’ ಎಂದು ತಿಳಿಸಿದರು. ‘ಕಚೇರಿಯನ್ನು ಬೇರೆ ಜಿಲ್ಲೆಗೆ ಸ್ಥಳಾಂತರಿಸಿದಲ್ಲಿ ಘಟ್ಟದಕೋರೆ, ಮೂಡಲಪಾಯ, ಪಡುವಲಪಾಯ, ಕೇಳಿಕೆ, ಮುಖವೀಣೆ ಕಲಾವಿದರಿಗೆ ಅನನುಕೂಲವಾಗುತ್ತದೆ. ಮಂಗಳೂರು ಅಥವಾ ಉಡುಪಿಗೆ ಅಕಾಡೆಮಿ ಕಚೇರಿ ಸ್ಥಳಾಂತರದ ಪ್ರಸ್ತಾವ ನಮ್ಮ ಮುಂದಿಲ್ಲ. ಅಲ್ಲಿಗೆ ಸ್ಥಳಾಂತರದ ಪ್ರಸ್ತಾವ ಬಂದರೂ ಅದನ್ನು ಒಪ್ಪುವುದಿಲ್ಲ’ ಎಂದರು.

‘ಮೂಡಲಪಾಯ ಸೇರಿ ಯಾವುದೇ ಪ್ರಕಾರ, ಕಲಾವಿದರನ್ನು ಕಡೆಗಣಿಸುತ್ತಿಲ್ಲ. ಕಲಾವಿದರು ಆತಂಕಪಡಬೇಕಾಗಿಲ್ಲ. ಈ ಸಾಲಿನಲ್ಲಿ ಯಕ್ಷಗಾನ ಸಮ್ಮೇಳನ ನಡೆಸುವ ಯೋಜನೆ ಇದ್ದು, ₹1 ಕೋಟಿ ಅನುದಾನದ ಅಗತ್ಯವಿದೆ. ಸರ್ಕಾರ ಹಣ ನೀಡಿದಲ್ಲಿ ಸ್ಥಳ ಗೊತ್ತುಪಡಿಸಿ, ಸಮ್ಮೇಳನ ನಡೆಸಲಾಗುವುದು’ ಎಂದರು.

ಅಲೆಮಾರಿಗಳಿಗೆ ಹಕ್ಕುಪತ್ರಕ್ಕೆ ಆಗ್ರಹ

ಬೆಂಗಳೂರು: ಸರ್ಕಾರಿ ಜಾಗಗಳಲ್ಲಿ ಸುಮಾರು 10 ವರ್ಷಗಳಿಂದ ಗುಡಿಸಲು ಹಾಕಿ ವಾಸಿಸುತ್ತಿರುವ ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಹಕ್ಕುಪತ್ರ ನೀಡಲು ಏಪ್ರಿಲ್ 21ರಿಂದ 22ರವರೆಗೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟ ಬುಧವಾರ ತಿಳಿಸಿದೆ.

ಒಕ್ಕೂಟದ ಗೌರವ ಅಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಅವರು ಸುದ್ದಿಗೋಷ್ಠಿಯಲ್ಲಿ, ‘ಅಲೆಮಾರಿ ಮತ್ತು ಅರೆ ಅಲೆಮಾರಿ ಜನರು ಹೆಚ್ಚಿರುವ ಜಿಲ್ಲೆಗಳಲ್ಲಿ ಸಮುದಾಯ ಭವನ ನಿರ್ಮಿಸಬೇಕು. ವಸತಿಶಾಲೆಗಳನ್ನು ತೆರೆಯಬೇಕು. ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸಬೇಕು. ಅಲೆಮಾರಿ ಸಮುದಾಯಗಳ ಪಟ್ಟಿಯಲ್ಲಿರುವ 46 ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಒತ್ತಾಯಿಸಿದರು.

ರಥೋತ್ಸವ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಸುಣಧೋಳಿಯ ಜಡಿಸಿದ್ದೇಶ್ವರ ರಥೋತ್ಸವ ಬುಧವಾರ ವೈಭವದಿಂದ ನೆರವೇರಿತು ಪ್ರಜಾವಾಣಿ ಚಿತ್ರ

‘ಮೋದಿ–ಶಾ ಸೇಡಿನ ರಾಜಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಪಾಲಿಗೆ ಸಿಂಹಸ್ವಪ್ನರಾಗಿರುವ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿರುವ ಜಾರಿ ನಿರ್ದೇಶನಾಲಯದ ಕ್ರಮ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಸೇಡಿನ ರಾಜಕಾರಣದ ಮುಂದುವರಿದ ಭಾಗ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದು ಕೇವಲ ನಮ್ಮ ಪಕ್ಷದ ಇಬ್ಬರು ನಾಯಕರ ಇಲ್ಲವೇ ಕಾಂಗ್ರೆಸ್ ಪಕ್ಷದ ವಿರುದ್ಧ ಸೇಡಿನ ಕ್ರಮ ಅಲ್ಲ, ಇದು ವಿರೋಧದ ಧ್ವನಿಯನ್ನು ಸಹಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ವಿರೋಧ ಪಕ್ಷಗಳು ಮತ್ತು ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಮೋದಿ ಸರ್ಕಾರ ನೀಡಿರುವ ಎಚ್ಚರಿಕೆಯಾಗಿದೆ ಎಂದಿದ್ದಾರೆ.

‘ದ್ವೇಷದ ರಾಜಕಾರಣವನ್ನು ಎದುರಿಸುತ್ತಲೇ ಬಂದಿರುವ ಕಾಂಗ್ರೆಸ್ ಪಕ್ಷ ಇದನ್ನು ಕೂಡಾ ಸತ್ಯ ಮತ್ತು ನ್ಯಾಯದ ಬಲದಿಂದ ಎದುರಿಸಲಿದೆ’ ಎಂದು ಅವರು ಹೇಳಿದ್ದಾರೆ.

ಸ್ವಾಯತ್ತ ತನಿಖಾ ಸಂಸ್ಥೆಯಾದ ಇ.ಡಿಯನ್ನು ವಿರೋಧ ಪಕ್ಷದ ನಾಯಕರ ವಿರುದ್ಧ ದ್ವೇಷ ಸಾಧಿಸಲು ಆಯುಧವನ್ನಾಗಿ ಬಳಸುತ್ತಾ ಬಂದಿರುವ ಮೋದಿ ನೇತೃತ್ವದ ಸರ್ಕಾರ ಈಗ ‘ನ್ಯಾಷನಲ್ ಹೆರಾಲ್ಡ್’ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯಾಗಿರುವ ಸುಳ್ಳು ಆರೋಪವನ್ನು ಬಳಸಿಕೊಂಡಿದೆ ಎಂದಿದ್ದಾರೆ.

‘ವಿಚಾರಣೆಯ ನೆಪದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸೇರಿದಂತೆ ನಮ್ಮ ಪಕ್ಷದ ಪ್ರಮುಖ ನಾಯಕರಿಗೆ ನಿರಂತರವಾಗಿ ಮಾನಸಿಕ ಕಿರುಕುಳ ನೀಡಿ ಪೀಡಿಸಿದ ಇ.ಡಿ, ಅದರಿಂದ ಯಾವುದೇ ಫಲ ಸಿಗದೆ ಇದ್ದಾಗ ಕಲ್ಪಿತ ಕತೆಗಳನ್ನು ಕಟ್ಟಿ ಆರೋಪ ಪಟ್ಟಿ ಸಲ್ಲಿಸಿದೆ’ ಎಂದು ಸಿದ್ದರಾಮಯ್ಯ ದೂರಿದ್ದಾರೆ.

ಪ್ರಜ್ವಲ್ ವಿರುದ್ಧ ಅತ್ಯಾಚಾರ ಆರೋಪ: ಎಸ್ಐಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ದೋಷಾರೋಪ ನಿಗದಿಪಡಿಸಿ ವಿಚಾರಣೆಗೆ ಮುಂದಾಗಿರುವ ಸೆಷನ್ಸ್ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ಮುಂದೂಡಲು ನಿರ್ದೇಶಿಸಬೇಕು’ ಎಂಬ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಮಧ್ಯಂತರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರು ಬುಧವಾರ ವಿಚಾರಣೆ ನಡೆಸಿದರು.

ಪ್ರಜ್ವಲ್ ಪರ ಪದಾಂಕಿತ ಹಿರಿಯ ವಕೀಲ ಅರುಣ್ ಶ್ಯಾಮ್, ‘ಈ ಪ್ರಕರಣದಲ್ಲಿ ಯಾವುದೇ ಸಂತ್ರಸ್ತರು ಪೊಲೀಸರಿಗೆ ದೂರು ಕೊಟ್ಟಿಲ್ಲ. ಇದೊಂದು ರಾಜಕೀಯ ಪ್ರೇರಿತವಾಗಿ ದಾಖಲಿಸಿಕೊಂಡಿರುವ ದೂರು.

ಎಸ್ಐಟಿಗೆ ದೋಷಾರೋಪ ಪಟ್ಟಿ ಸಲ್ಲಿಸುವ ಅಧಿಕಾರ ವ್ಯಾಪ್ತಿ ಇಲ್ಲ. ಹಾಗಾಗಿ, ಈ ಪ್ರಕರಣವನ್ನು ರದ್ದುಗೊಳಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, ‘ಆರೋಪಿಯು ಮನೆಗೆಲಸದ ಮಧ್ಯ ವಯಸ್ಸಿನ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದಕ್ಕೆ ಸಾಕ್ಷ್ಯ ಇದೆ. ಆರೋಪಿ ತನ್ನದೇ ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಅದರಲ್ಲಿಯ ಧ್ವನಿ ಮತ್ತು ಡಿಎನ್ಎ ಪರೀಕ್ಷೆಗಳೂ ಇದನ್ನು ದೃಢಪಡಿಸಿವೆ. ತನಿಖಾಧಿಕಾರಿಗಳು ಅತ್ಯಂತ ವೃತ್ತಿಪರತೆಯಿಂದ ನಡೆದುಕೊಂಡಿದ್ದಾರೆ. ಆದ್ದರಿಂದ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸದೆಯೇ ಅರ್ಜಿ ವಜಾಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದೇ ವೇಳೆ ಅರುಣ್ ಶ್ಯಾಮ್, ‘ಈ ಅರ್ಜಿ ವಿಚಾರಣೆ ಮುಕ್ತಾಯವಾಗುವ ತನಕ ವಿಚಾರಣಾ ನ್ಯಾಯಾಲಯದ ಮುಂದಿನ ನ್ಯಾಯಿಕ ಪ್ರಕ್ರಿಯೆಯನ್ನು ಮುಂದೂಡುವಂತೆ ಸೆಷನ್ಸ್ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಒಪ್ಪದ ನ್ಯಾಯಪೀಠ, ‘ಈ ಹಂತದಲ್ಲಿ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಯನ್ನು ಮುಂದೂಡಲು ಆಗುವುದಿಲ್ಲ’ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿ, 47 ವರ್ಷದ ಸಂತ್ರಸ್ತ ಮಹಿಳೆ ಮತ್ತು ಎಸ್ಐಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಹಾಜರಿದ್ದರು.

ಮಂಡ್ಯ, ಕೂಡ್ಲಿಗಿಯಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಒಂದು ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆ ಸುರಿಯಿತು.

ಗುಡುಗು ಮತ್ತು ಗಾಳಿಯ ಅಬ್ಬರ ಜೋರಾಗಿತ್ತು. ಶ್ರೀ ರಂಗಪಟ್ಟಣ ಮತ್ತು ಪಾಂಡವಪುರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಉತ್ತಮ ಮಳೆಯಾಯಿತು. ಮೈಸೂರು ನಗರದಲ್ಲೂ ರಾತ್ರಿ ಮಳೆಯಾಯಿತು.

ಹೊಸಪೇಟೆ ವರದಿ: ವಿಜಯನಗರ ಜಿಲ್ಲೆಯ ಕೂಡ್ಲಿಗಿ, ಕೊಟ್ಟೂರು ತಾಲ್ಲೂಕುಗಳಲ್ಲಿ ಬುಧವಾರ ಬಲವಾದ ಗಾಳಿ ಸಹಿತ ಬಿರುಸಿನ ಮಳೆ ಸುರಿಯಿತು.

ಕೂಡ್ಲಿಗಿಯಲ್ಲಿ ಗಾಳಿಯ ರಭಸಕ್ಕೆ ಪಟ್ಟಣದ ರಾಜೀವ್ ಗಾಂಧಿ ನಗರದಲ್ಲಿ ತೆಂಗಿನ ಮರ ಬಿದ್ದು ವಿದ್ಯುತ್ ಕಂಬ ಮುರಿದಿದೆ. ಪೊಲೀಸ್ ವಸತಿ ಗೃಹಗಳ ಬಳಿ ಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಿನಿ ಪಾಕಿಸ್ತಾನ ಮಾಡಲು ಯತ್ನ’

ಆರ್.ಅಶೋಕ ಟೀಕೆ • ಬೆಳಗಾವಿಯಲ್ಲಿ ಬಿಜೆಪಿಯಿಂದ ಜನಾಕ್ರೋಶ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮುಸ್ಲಿಮರನ್ನು ಓಲೈಸುವ ಭರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಮಿನಿ ಪಾಕಿಸ್ತಾನ ಮಾಡಲು ಮುಂದಾಗಿದ್ದಾರೆ. ಅದಕ್ಕೆ ಎಲ್ಲ ಜಾತಿಗಳನ್ನು ಒಡೆದು ಹಾಕಿದ್ದಾರೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ನಗರದಲ್ಲಿ ಬುಧವಾರ ಬಿಜೆಪಿಯಿಂದ ನಡೆದ ಎರಡನೇ ಹಂತದ ಜನಾಕ್ರೋಶ ಯಾತ್ರೆಯ ಸಭೆಯಲ್ಲಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ಮುಸಲ್ಮಾನರನ್ನು ‘ನಂಬರ್ ಒನ್’ ಮಾಡಲು ವಿದೇಶಿ ಕೈವಾಡವಿರುವ ಬಗ್ಗೆ ಅನುಮಾನವಿದೆ. ಭಾರತವನ್ನು ಪಾಕಿಸ್ತಾನ ಮಾಡುತ್ತೇವೆ ಎಂದು ಕೆಲವು ಭಯೋತ್ಪಾದಕರು ಪತ್ರದಲ್ಲಿ ಬರೆದು ಹಂಚಿದ್ದಾರೆ’ ಎಂದರು.

‘ಸಿದ್ದರಾಮಯ್ಯ ಅವರ ಕುರ್ಚಿಗೆ ನವೆಂಬರ್‌ನಲ್ಲಿ ಬಾಂಬ್ ಬೀಳುವುದು ಖಾತ್ರಿಯಾಗಿದೆ. ನಿರ್ಗಮನ

ಬೆಳಗಾವಿಯಲ್ಲಿ ಬುಧವಾರ ಬಿಜೆಪಿ ಜನಾಕ್ರೋಶ ಯಾತ್ರೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಿಶ್ಚಿತವಾಗಿರುವುದಕ್ಕೆ ಅವರು ಈ ರೀತಿ ಮಾಡುತ್ತಿದ್ದಾರೆ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ‘ವಿದೇಶಕ್ಕೆ ಶಿಕ್ಷಣಕ್ಕಾಗಿ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ವರ್ಷಕ್ಕೆ ₹30 ಲಕ್ಷ ನೆರವು ಘೋಷಿಸಿದ್ದಾರೆ. ಇದೇ ನೆರವು ಹಿಂದೂ ವಿದ್ಯಾರ್ಥಿಗಳಿಗೆ ಏಕಿಲ್ಲ? ಸಿದ್ದರಾಮಯ್ಯ ಹಿಂದೂ ವಿರೋಧಿ ಎಂಬುದು ಪದೇಪದೇ ಸಾಬೀತು ಆಗುತ್ತಿದೆ’ ಎಂದರು.

‘ರಾಜ್ಯ ಸರ್ಕಾರವು ಮುಸ್ಲಿಮರ ಓಲೈಕೆಯಷ್ಟೇ ಮಾಡಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಪರಿಶಿಷ್ಟರ ಹಣವನ್ನು ಲೂಟಿ ಮಾಡಿದೆ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಒಂದು ಕಾಲಕ್ಕೆ ಕರ್ನಾಟಕ ಪ್ರಗತಿಪರ ರಾಜ್ಯವಾಗಿತ್ತು. ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಇಂದು ಹಿಂದುಳಿದ ರಾಜ್ಯವಾಗಿದೆ

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ಜಾತಿ ಗಣತಿ ವರದಿಯಲ್ಲಿ ನೇಕಾರರು, ಮರಾಠ ಮತ್ತು ಜೈನರ ಬಗ್ಗೆ ಉಲ್ಲೇಖವೇ ಇಲ್ಲ. ಇದನ್ನು ಹೇಗೆ ಒಪ್ಪಲು ಸಾಧ್ಯ?

ಅಭಯ ಪಾಟೀಲ, ಶಾಸಕ

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಜಗದೀಶ ಶೆಟ್ಟರ್, ಗೋವಿಂದ ಕಾರಜೋಳ, ಶಾಸಕರಾದ ಅಭಯ ಪಾಟೀಲ, ಬಾಲಚಂದ್ರ ಜಾರಕಿಹೊಳಿ, ನಿಖಿಲ್ ಕತ್ತಿ, ದುರ್ಯೋಧನ ಐಹೊಳೆ, ಮುಖಂಡರಾದ ಬಿ.ಶ್ರೀರಾಮುಲು, ಅನಿಲ ಬೆನಕೆ, ಪಿ.ರಾಜೀವ್ ಇದ್ದರು.

‘ಗಾಲಿ ಕುರ್ಚಿ ಇಲ್ಲದೇ ಬಂದಿದ್ದೇನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಆರೋಗ್ಯದ ಪರಿಸ್ಥಿತಿಯನ್ನು ನಾನು ಎಲ್ಲರ ಮುಂದೆ ಹೇಳಲು ಹೋಗುವುದಿಲ್ಲ. ಆದರೂ ಗಾಲಿ ಕುರ್ಚಿ ಇಲ್ಲದೇ ನಡೆದುಕೊಂಡು ಬಂದಿದ್ದೇನೆ. ನಿಂತುಕೊಂಡು ದೇವರಿಗೆ ಮಂಗಳಾರತಿ ಮಾಡಿದ್ದೇನೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಅಭಯಾಂಜನೇಯ ಸ್ವಾಮಿ, ಪ್ರಸನ್ನ ಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇನ್ಸುಲಿನ್ ತೆಗೆದುಕೊಳ್ಳದೆ ಬಂದಿದ್ದೇನೆ. ಥೆರಪಿ ಮಾಡಿಸಿಕೊಂಡಿದ್ದರಿಂದ ನಡೆದುಕೊಂಡು ಬರಲು ಸಾಧ್ಯವಾಗಿದೆ’ ಎಂದು ಹೇಳಿದರು.

‘ಸ್ವಾಮೀಜಿ ನೀವು ಯಾವ ವಿಚಾರಕ್ಕೆ ಕೈ ಹಾಕಿದ್ದೀರಿ? ನನಗೆ ಎಲ್ಲ ವಿಷಯ ಗೊತ್ತಿದೆ. ಅವತ್ತು ನಾನು ಬರಲಿಲ್ಲ. ಕುಮಾರಸ್ವಾಮಿ ಬಂದಿದ್ದರು. ಅವರು ಹೆಚ್ಚು ಮಾತನಾಡಿಲ್ಲ ಎಂಬುದೂ ಗೊತ್ತಿದೆ. ಮನಸ್ಸಿನ ಸಂಕಲ್ಪ, ನಿಮ್ಮಲ್ಲಿರುವ ಕಳಕಳಿ ಅದು. ಪ್ರಧಾನ ದೇವತೆ ಆಂಜನೇಯನನ್ನು ಪ್ರತಿಷ್ಠಾಪನೆ ಮಾಡಿದ್ದೀರಿ. ಯಾವ ಕೆಲಸ ಆಗುವುದಿಲ್ಲ ಎಂಬುದಿದೆಯೋ ಆ ಕೆಲಸ ಆಗುತ್ತದೆ ಎಂಬ ನಂಬಿಕೆ ಇದೆ’ ಎಂದು ದೇವೇಗೌಡರು ಹೇಳಿದರು.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಸಭಿಕರಿಗೆ ವಂದಿಸಿದರು ಪ್ರಜಾವಾಣಿ ಚಿತ್ರ

ಜಾತಿಗಣತಿ: ಮುಸ್ಲಿಂ ಮುಖಂಡರ ಸಭೆ

ಬೆಂಗಳೂರು: ಜಾತಿಗಣತಿ ವಿಚಾರಗಳ ಕುರಿತು ಮುಸ್ಲಿಂ ಮುಖಂಡರು, ಧಾರ್ಮಿಕ ಗುರುಗಳ ಸಭೆ ಬುಧವಾರ ನಡೆಯಿತು.

ವಕ್ಫ್ ವಿಚಾರದಲ್ಲಿ ಸುಪ್ರೀಂಕೋರ್ಟ್ ಬೆಳವಣಿಗೆ, ಜಾತಿ ಗಣತಿ ವಿಚಾರದಲ್ಲಿ ಸಂಪುಟ ಸಭೆಯ ತೀರ್ಮಾನ ನೋಡಿಕೊಂಡು ಮುಂದಿನ ನಿರ್ಧಾರ ಕೈಗೊಳ್ಳಲು ಸಭೆ ನಿರ್ಧರಿಸಿತು.

ಧರ್ಮ ಗುರುಗಳಾದ ಮೌಲಾನಾ ಅಮೀರ್ ಎ ಶೆರಿಯತ್, ಮೌಲಾನಾ ಮಕ್ಸುದ್ ಇಮ್ರಾನ್, ವಕ್ಫ್ ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಮಾಜಿ ಸಚಿವ ರೋಷನ್ ಬೇಗ್, ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಅನ್ವರ್ ಬಾಷಾ ಉಪಸ್ಥಿತರಿದ್ದರು.

ಸಿಇಟಿ: 3.11 ಲಕ್ಷ ವಿದ್ಯಾರ್ಥಿಗಳು ಹಾಜರ್

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಬುಧವಾರ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) 3.11 ಲಕ್ಷ ವಿದ್ಯಾರ್ಥಿಗಳು ಬರೆದರು.

ಬೆಳಿಗ್ಗೆ ಭೌತವಿಜ್ಞಾನ, ಮಧ್ಯಾಹ್ನ ರಸಾಯನವಿಜ್ಞಾನ ಪರೀಕ್ಷೆಗಳು ಎಲ್ಲ 775 ಕೇಂದ್ರಗಳಲ್ಲೂ ಸುಸೂತ್ರವಾಗಿ ನಡೆದವು. ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದ 3,21,895 ವಿದ್ಯಾರ್ಥಿಗಳಲ್ಲಿ ಶೇ 94.20ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದರು.

ಇದೇ ಮೊದಲ ಬಾರಿ ಕ್ಯೂಆರ್ ಕೋಡ್ ಮೂಲಕ ಮುಖ ಚಹರೆ ಪತ್ತೆ ಮಾಡಿದ ನಂತರವೇ ಪರೀಕ್ಷಾ ಕೇಂದ್ರಕ್ಕೆ ಪ್ರವೇಶ ನೀಡಲಾಯಿತು. ಬೆಳಗಿನ ಪರೀಕ್ಷೆಗೆ ಕೆಲ ಕೇಂದ್ರಗಳಲ್ಲಿ ತಾಂತ್ರಿಕ ದೋಷ ಕಂಡುಬಂತು. ಪ್ರವೇಶ ಪತ್ರ ಇಲ್ಲದೆ, ವಿವಿಧ ಪರೀಕ್ಷಾ ಕೇಂದ್ರಗಳಿಗೆ ತೆರಳಿ ಪರದಾಡುತ್ತಿದ್ದ ಕೆಲ ವಿದ್ಯಾರ್ಥಿಗಳಿಗೆ ಕೊನೆ ಕ್ಷಣದಲ್ಲಿ ಕೆಇಎ ಸಿಬ್ಬಂದಿ ಪ್ರವೇಶ ಪತ್ರ ಒದಗಿಸಿ, ಸಹಕರಿಸಿದರು.

ಇಂದು ಗಣಿತ, ಜೀವವಿಜ್ಞಾನ

ಏ.17ರಂದು ಗಣಿತ (ಬೆಳಿಗ್ಗೆ 10.30ರಿಂದ 11.50) ಮತ್ತು ಜೀವ ವಿಜ್ಞಾನ (ಮಧ್ಯಾಹ್ನ 2.30ರಿಂದ 3.50) ವಿಷಯದ ಪರೀಕ್ಷೆಗಳು ನಡೆಯಲಿವೆ. ಮೊದಲ ದಿನದಂತೆ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಬಿಗಿಕ್ರಮ, ಅನುಸರಿಸಲಾಗುವುದು. ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಮುಂದುವರಿಸಲಾಗುವುದು ಎಂದು ಕೆಇಎ ಹೇಳಿದೆ.

‘2ಎ’ನಲ್ಲಿ ಸಿಂಹಪಾಲು ಯಾರಿಗೆ?

ಸಿದ್ದರಾಮಯ್ಯ ಖಚಿತ ಮಾಹಿತಿ ನೀಡಬೇಕು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ



ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ಅತಿ ಹಿಂದುಳಿದ ಪ್ರವರ್ಗ ‘2ಎ’ ನಲ್ಲಿ ಸಿಂಹಪಾಲು ಯಾರಿಗೆ ಸಿಕ್ಕಿದೆ? ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿ ಕೋರ್ಸ್‌ಗಳ ಪ್ರವೇಶ, ನೇಮಕಾತಿಯಲ್ಲಿ ಯಾವ ಜಾತಿಗಳಿಗೆ ಲಾಭವಾಗಿದೆ ಎನ್ನುವುದನ್ನು ಬಹಿರಂಗಪಡಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಪ್ರವರ್ಗ ‘2ಎ’ನಲ್ಲಿ 101 ಜಾತಿಗಳಿವೆ. ಅವರಿಗೆ ಇರುವ ಶೇ 15 ಮೀಸಲಾತಿಯಲ್ಲಿ 15-20 ವರ್ಷಗಳಲ್ಲಿ ನಡೆದ ನೇಮಕಾತಿಗಳಲ್ಲಿ ಯಾವ ಜಾತಿಯ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೇಮಕವಾಗಿದ್ದಾರೆ ಎನ್ನುವ ಮಾಹಿತಿ ಸರ್ಕಾರದ ಬಳಿ ಇದೆ. ಸುಳ್ಳು ಹೇಳಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಗಣತಿಯ ರಾಜಕೀಯ ಫಸಲಿಗೆ ಹೊಂಚುಹಾಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕುರಿತು ಖಚಿತ ಮಾಹಿತಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಜಾತಿ ಗಣತಿ ವರದಿಗೆ ರಾಜ್ಯದ ಎಲ್ಲೆಡೆ ಆಕ್ರೋಶ ವ್ಯಕ್ತವಾಗಿದೆ. ಒಕ್ಕಲಿಗರು, ವೀರಶೈವ ಲಿಂಗಾಯತರ ಕಡೆ ಬೆರಳು ತೋರಿಸಿ, ಪ್ರವರ್ಗ ‘2ಎ’ನ ಬಹುತೇಕ ಜಾತಿಗಳ ಮೂಗಿಗೆ ಬೆಣ್ಣೆ ಸವರುತ್ತಿದ್ದಾರೆ. ಲಿಂಗಾಯತರು, ಒಕ್ಕಲಿಗರನ್ನು ಬೈದರೇ ಅನ್ಯಾಯವಾಗಿರುವ ಜಾತಿಗಳ ಮಕ್ಕಳಿಗೆ ನ್ಯಾಯ ಸಿಗುವುದೇ ಎಂದು ಪ್ರಶ್ನಿಸಿದ್ದಾರೆ.

ತರಾತುರಿಯಲ್ಲಿ ಜಾತಿ ಗಣತಿ ವರದಿ ಜಾರಿ ಮಾಡಿ ಖಳನಾಯಕರಾಗಬೇಡಿ. ಇದು ಜೇನುಗೂಡಿಗೆ ಕೈ ಹಾಕಿದಂತೆ

ವಿ.ಸೋಮಣ್ಣ, ಕೇಂದ್ರ ಸಚಿವ

‘ರಾಜ್ಯದಲ್ಲಿ ಜಾತಿ ಗಣತಿ ವರದಿ ಬಗ್ಗೆ ಪರ ಮತ್ತು ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿದ್ದು, ಜನಗಣತಿ ಪ್ರಕ್ರಿಯೆ ಇನ್ನೊಮ್ಮೆ ನಡೆಯಲಿ

ವೀರಸೋಮೇಶ್ವರ ಸ್ವಾಮೀಜಿ, ಬಾಳೆಹೊನ್ನೂರು ರಂಭಾಪುರಿ ಪೀಠ

ವೀರಶೈವ ಲಿಂಗಾಯತರಿಗೆ ಆಗಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತದೇ ಇರುವ ಸಮುದಾಯದ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು

ಬಸವರಾಜು ಶಿವಗಂಗಾ, ಚನ್ನಗಿರಿ ಶಾಸಕ

ಜಾತ್ಯತೀತ ದೇಶದಲ್ಲಿ ಜಾತಿ ಗಣತಿ ಅಗತ್ಯವಿಲ್ಲ. ವರ್ಷದ ಹಿಂದಿನ ಜಾತಿಗಣತಿ ಇಂದಿಗೆ ಅಪ್ರಸ್ತುತ. ಜಾತ್ಯತೀತ ರಾಷ್ಟ್ರದ ಆಶಯಕ್ಕೆ ಜಾತಿ ಗಣತಿ ವಿರುದ್ಧವಾಗಿದೆ

ಡಾ.ಸಿ.ಎನ್.ಮಂಜುನಾಥ್, ಸಂಸದ

ಪರಿಶಿಷ್ಟರ ಸಾಂವಿಧಾನಿಕ ಹಕ್ಕುಗಳನ್ನು ಕಿತ್ತುಕೊಳ್ಳಲು ಎಚ್.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ವ್ಯವಸ್ಥಿತ ಸಂಚು ನಡೆಸಿದೆ

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಂಘ-ಸಂಸ್ಥೆಗಳ ಮಹಾಒಕ್ಕೂಟ

ವರದಿ ಅಂಗೀಕರಿಸಲು ಆಗ್ರಹ: ‘ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಸರ್ಕಾರ ಅಂಗೀಕರಿಸಿ, ಶಿಫಾರಸುಗಳನ್ನು ಜಾರಿ ಮಾಡಲೇಬೇಕು’ ಎಂದು ಕಾಂಗ್ರೆಸ್‌ನ ಹಿಂದುಳಿದ ವರ್ಗದ ನಾಯಕರು ಒಕ್ಕೊರಲಿನಿಂದ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯರಾದ ಎಂ.ಆರ್. ಸೀತಾರಾಂ, ಉಮಾಶ್ರೀ, ಎಂ. ನಾಗರಾಜ ಯಾದವ್ ಮತ್ತಿತರರು ‘ವರದಿ ವೈಜ್ಞಾನಿಕವಾಗಿದೆ’ ಎಂದು ಸಮರ್ಥಿಸಿದರು.

ಉಮಾ ಮಹಾದೇವನ್‌ಗೆ ಉಸ್ತುವಾರಿ • ಮುನಿಯಪ್ಪ ಅಧ್ಯಕ್ಷತೆಯಲ್ಲಿ ಸಭೆ

ಒಳಮೀಸಲಾತಿ: 101 ಜಾತಿ ಸಮೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಕಲ್ಪಿಸುವ ಸಂಬಂಧ ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಕ್ಕೆ ಸಮೀಕ್ಷೆ ನಡೆಸಲು 54 ಸಾವಿರ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಂಡು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಈ ಸಂಬಂಧ ಸಭೆ ನಡೆಸಿದ ಅವರು, ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಅವರನ್ನು ಈ ಕಾರ್ಯದ ಉಸ್ತುವಾರಿಯನ್ನಾಗಿ ಪ್ರಕಟಿಸಿದರು.

ಈ ಕುರಿತು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಮುನಿಯಪ್ಪ ಅವರು,101 ಜಾತಿಗಳಿಗೆ ಅನ್ಯಾಯ ಆಗದಂತೆ ಯಾವ ರೀತಿ ಒಳ ಮೀಸಲಾತಿ ನೀಡಬೇಕು ಎಂಬ ಕುರಿತು ಚರ್ಚಿಸಲಾಯಿತು. ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ

ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅಧ್ಯಕ್ಷತೆಯಲ್ಲಿ ಒಳಮೀಸಲಾತಿ ಕುರಿತ ಸಭೆ ನಡೆಯಿತು. ಮಾಜಿ ಸಚಿವ ಎಚ್.ಆಂಜನೇಯ, ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಮತ್ತು ಇತರರು ಇದ್ದರು

ಕುರಿತು ಇರುವ ಗೊಂದಲ ನಿವಾರಿಸಲು ಏನು ಮಾಡಬೇಕು ಎಂಬುದರ ಬಗ್ಗೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು ಎಂದರು.

ಎರಡು ತಿಂಗಳಲ್ಲಿ ವರದಿ ಪಡೆಯಲು ಸೂಚಿಸಿದ್ದು, ಈಗಾಗಲೇ 15 ದಿನಗಳು ಕಳೆದಿವೆ. ತ್ವರಿತಗತಿಯಲ್ಲಿ ಮತ್ತು ಕಾಲ ಮಿತಿಯಲ್ಲಿ ಸಮೀಕ್ಷೆ ನಡೆಸಲು ಸೂಚಿಸಲಾಗಿದೆ ಎಂದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದ ಆಯೋಗವು ಮಾರ್ಚ್‌ನಲ್ಲಿ ಮಧ್ಯಂತರ ವರದಿ ಸಲ್ಲಿಸಿ, ಒಳಮೀಸಲಾತಿ ನೀಡುವುದಕ್ಕಾಗಿ ಪರಿಶಿಷ್ಟ ಜಾತಿಯಲ್ಲಿನ 101 ಉಪಜಾತಿಗಳ ದತ್ತಾಂಶ ಸಂಗ್ರಹಿಸುವುದಕ್ಕೆ ಹೊಸ ಸಮೀಕ್ಷೆ ನಡೆಸಬೇಕು ಎಂದು ಶಿಫಾರಸು ಮಾಡಿತ್ತು.

ಒಳಮೀಸಲಾತಿ ವರ್ಗೀಕರಣವನ್ನು ತ್ವರಿತವಾಗಿ ಮತ್ತು ವೈಜ್ಞಾನಿಕವಾಗಿ ಕೈಗೊಳ್ಳುವ ಸಂಬಂಧ, ಹೊಸ ಸಮೀಕ್ಷೆ ನಡೆಸುವ ಕಾರ್ಯವನ್ನು ನಾಗಮೋಹನ್‌ದಾಸ್ ಆಯೋಗಕ್ಕೇ ವಹಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿತ್ತು. ಸಮೀಕ್ಷಾ ಕಾರ್ಯವನ್ನು 60 ದಿನಗಳೊಳಗೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಅನುಕೂಲವಾಗುವಂತೆ ಆಯೋಗದ ಅವಧಿಯನ್ನು ಎರಡು ತಿಂಗಳವರೆಗೆ ವಿಸ್ತರಿಸಲಾಗಿತ್ತು.

ಸಭೆಯಲ್ಲಿ ಮಾಜಿ ಸಚಿವ ಎಚ್. ಆಂಜನೇಯ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಸಮಾಜಕಲ್ಯಾಣ ಇಲಾಖೆ ಪ್ರಧಾನಕಾರ್ಯದರ್ಶಿ ಪಿ. ಮಣಿವಣ್ಣನ್, ಆಯುಕ್ತ ರಾಕೇಶ್ ಕುಮಾರ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಗೋನಾಳ ಭೀಮಪ್ಪ, ತೇಗನೂರು, ಭೀಮಾಶಂಕರ್ ಇದ್ದರು.

‘ಸರ್ಕಾರ ನೈತಿಕವಾಗಿ ದಿವಾಳಿಯಾಗಿದೆ’

ನ್ಯಾಷನಲ್ ಹೆರಾಲ್ಡ್ ಪ್ರಕರಣ–ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ವಿವರಣೆ

ನವದೆಹಲಿ (ಪಿಟಿಐ): ‘ನ್ಯಾಷನಲ್ ಹೆರಾಲ್ಡ್’ ಪ್ರಕರಣದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿರುವುದು ಕೇಂದ್ರ ಸರ್ಕಾರಕ್ಕೆ ಇರುವ ಭಯವನ್ನು, ಅದು ನೈತಿಕವಾಗಿ ದಿವಾಳಿ ಆಗಿರುವುದುನ್ನು ತೋರಿಸುತ್ತದೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಅಸೋಸಿಯೇಟೆಡ್ ಜರ್ನಲ್ಸ್‌ಗೆ (ಎಜೆಎಲ್) ಸೇರಿದ ₹5,000 ಕೋಟಿ ಮೌಲ್ಯದ ಆಸ್ತಿಗಳನ್ನು ಯಂಗ್ ಇಂಡಿಯನ್ ಕಂಪನಿಯು ತನ್ನದಾಗಿಸಿಕೊಂಡಿದೆ ಎಂಬ ಆರೋಪವು ಸುಳ್ಳು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಹಿಂದೆ ‘ನ್ಯಾಷನಲ್ ಹೆರಾಲ್ಡ್’ಗೆ ಬ್ರಿಟಿಷರು ಭಯಪಡುತ್ತಿದ್ದರು. ಈಗ ಆರ್‌ಎಸ್‌ಎಸ್‌ಗೆ ಆ ರೀತಿ ಆಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಅವರು ‘ಎಕ್ಸ್’ ಮೂಲಕ ಹಂಚಿಕೊಂಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

‘ಲಾಭದ ಉದ್ದೇಶ ಹೊಂದಿಲ್ಲದ, ಒಂದು ರೂಪಾಯಿ ವಹಿವಾಟನ್ನೂ ನಡೆಸಿರದ, ಯಾವ ಆಸ್ತಿಯ ವರ್ಗಾವಣೆಯನ್ನೂ ಮಾಡಿರದ ಕಂಪನಿಯೊಂದರ ವಿರುದ್ಧ ಹಣದ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿರುವುದು ನರೇಂದ್ರ ಮೋದಿ ಅವರಲ್ಲಿನ ಭೀತಿಯನ್ನು ತೋರಿಸುತ್ತಿದೆ’ ಎಂದು ಖೇರಾ ಹೇಳಿದ್ದಾರೆ.

ಜೈರಾಮ್ ವಿವರಣೆ: ಎಜೆಎಲ್ ಕಂಪನಿಯು ‘ನ್ಯಾಷನಲ್ ಹೆರಾಲ್ಡ್’ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪತ್ರಿಕೆಯು ಸ್ವಾತಂತ್ರ್ಯ ಹೋರಾಟದ ದನಿ ಆಗಿತ್ತು.

‘ನ್ಯಾಷನಲ್ ಹೆರಾಲ್ಡ್’ ಪ್ರಕರಣದಲ್ಲಿ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ ಕಾಂಗ್ರೆಸ್ ಕಾರ್ಯಕರ್ತರು ನವದೆಹಲಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಎಜೆಎಲ್‌ಗೆ ಭಾರಿ ಸಾಲ ಇತ್ತು. ಹೀಗಾಗಿ ಕಾಂಗ್ರೆಸ್ ಪಕ್ಷವು ಅದಕ್ಕೆ 2002ರಿಂದ 2011ರ ನಡುವೆ ₹90 ಕೋಟಿ ಸಾಲ ನೀಡಿತು. ಈ ಸಾಲವನ್ನು ಗ್ರಾಚ್ಯುಟಿ, ವಿಆರ್‌ಎಸ್, ಪಿಎಫ್, ತೆರಿಗೆ, ವಿದ್ಯುತ್ ಬಿಲ್ ಪಾವತಿಗಳಿಗೆ ಬಳಸಲಾಯಿತು ಎಂದು ಜೈರಾಮ್ ರಮೇಶ್ ವಿವರಿಸಿದ್ದಾರೆ.

ಸಾಲದ ಕಾರಣದಿಂದಾಗಿ ಎಜೆಎಲ್ ಚಟುವಟಿಕೆ ನಿಂತಿತ್ತು. ಹೀಗಾಗಿ ಅದರ ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಿ, ಯಂಗ್ ಇಂಡಿಯನ್ ಕಂಪನಿಗೆ ವರ್ಗಾಯಿಸಲಾಯಿತು. ಇದು ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ವ್ಯವಸ್ಥೆ. ಹಲವು ಕಂಪನಿಗಳ ಸಾಲವನ್ನು ಸರ್ಕಾರವೇ ಷೇರುಗಳನ್ನಾಗಿ ಪರಿವರ್ತಿಸಿದೆ. ಯಂಗ್ ಇಂಡಿಯನ್ ಕಂಪನಿಯು ಲಾಭದ ಉದ್ದೇಶ ಹೊಂದಿಲ್ಲ. ಅದರ ಷೇರುದಾರರಿಗೆ

ಆರ್ಥಿಕ ಅಪರಾಧ ಪ್ರಕರಣಗಳ ತನಿಖೆಗೆ ಇತರೆ ಸಂಸ್ಥೆಗಳು ಇರುವ ಕಾರಣ ಜಾರಿ ನಿರ್ದೇಶನಾಲಯವನ್ನು (ಇ.ಡಿ) ವಿಸರ್ಜಿಸಬೇಕು

ಅಖಿಲೇಶ್ ಯಾದವ್ ಸಮಾಜವಾದಿ ಪಕ್ಷದ ಮುಖ್ಯಸ್ಥ

ಲಾಭ, ಲಾಭಾಂಶ, ವೇತನದ ರೂಪದಲ್ಲಿ ಒಂದು ಪೈಸೆಯೂ ಸಿಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಯಂಗ್ ಇಂಡಿಯನ್‌ಗೆ ನಾಲ್ವರು ಷೇರುದಾರರಿದ್ದರು. ಅವರು: ಸೋನಿಯಾ, ರಾಹುಲ್, ಆಸ್ಕರ್ ಫರ್ನಾಂಡಿಸ್ ಮತ್ತು ಮೋತಿಲಾಲ್ ವೋರಾ. ಎಜೆಎಲ್‌ಗೆ 700 ಮಂದಿ ಷೇರುದಾರರಿದ್ದರು. 700 ಮಂದಿ ಷೇರುದಾರರ ಅನುಮತಿ ಪಡೆದೇ ಸಾಲವನ್ನು ಷೇರುಗಳನ್ನಾಗಿ ಪರಿವರ್ತಿಸಲಾಯಿತು ಎಂದು ರಮೇಶ್ ವಿವರಣೆ ನೀಡಿದ್ದಾರೆ.

ಈ ಪ್ರಕರಣದಲ್ಲಿ ಸುಬ್ರಮಣಿಯನ್ ಸ್ವಾಮಿ ಅವರು 2013ರಲ್ಲಿ ಕೋರ್ಟ್ ಮೊರೆಹೋದರು. 2020ರವರೆಗೂ ಅವರು ಪ್ರಕರಣದಲ್ಲಿ ಹೋರಾಟ ನಡೆಸಿದರು. ನಂತರ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಮಾತನಾಡಲು ಆರಂಭಿಸಿದರು. ಇದರಿಂದಾಗಿ ಮೋದಿ ಮತ್ತು ಶಾ ಅವರು ತಲೆಕೆಡಿಸಿಕೊಂಡರು ಎಂದು ರಮೇಶ್ ಆರೋಪಿಸಿದ್ದಾರೆ.

‘ಭೀತಿಯಿಂದಾಗಿ ಸರ್ಕಾರವು ಇನ್ನೊಂದು ಪ್ರಕರಣ ದಾಖಲಿಸಿತು. 2023ರಲ್ಲಿ ಇ.ಡಿ ತಾತ್ಕಾಲಿಕ ಮುಟ್ಟುಗೋಲು ಆದೇಶ ಹೊರಡಿಸಿತು... ಇ.ಡಿ ಅಧಿಕಾರಿಗಳು ಏಪ್ರಿಲ್ 9ರಂದು ನಕಲಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಅದನ್ನು ಈಗ ಬಹಿರಂಗಪಡಿಸಲಾಗಿದೆ’ ಎಂದು ರಮೇಶ್ ಹೇಳಿದ್ದಾರೆ.

ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ/ಜಮ್ಮು (ಪಿಟಿಐ): ‘ನ್ಯಾಷನಲ್ ಹೆರಾಲ್ಡ್’ ಪ್ರಕರಣದಲ್ಲಿ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಎಐಸಿಸಿ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು. ಜಮ್ಮುವಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಗೆ ಪೊಲೀಸರು ತಡೆ ಒಡ್ಡಿದರು. ದೇಶದ ವಿವಿಧೆಡೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಎರಡನೇ ದಿನವೂ ವಾದ್ರಾ ವಿಚಾರಣೆ

ನವದೆಹಲಿ (ಪಿಟಿಐ): ಹರಿಯಾಣದ ಭೂ ವ್ಯವಹಾರದ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಉದ್ಯಮಿ ರಾಬರ್ಟ್ ವಾದ್ರಾ ಅವರನ್ನು ಬುಧವಾರವೂ ವಿಚಾರಣೆಗೆ ಒಳಪಡಿಸಿತು.

ವಾದ್ರಾ ಅವರು ಬೆಳಿಗ್ಗೆ 11 ಗಂಟೆ ಸುಮಾರಿಗೆ ಪತ್ನಿ ಪ್ರಿಯಾಂಕಾ ಗಾಂಧಿ ಅವರೊಂದಿಗೆ ಇ.ಡಿ ಕಚೇರಿಗೆ ಹಾಜರಾಗಿದ್ದರು.

ಮಂಗಳವಾರವೂ ಐದು ತಾಸು ವಾದ್ರಾ ಅವರನ್ನು ಪ್ರಶ್ನಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ವಾದ್ರಾ ಅವರು, ‘ಇ.ಡಿ ಕ್ರಮವು ರಾಜಕೀಯ ಪಿತೂರಿಯ ಭಾಗ. ದೇಶದ ಜನರು ತನಿಖಾ ಸಂಸ್ಥೆಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ’ ಎಂದರು.

ಹಿಂದೂ ಟ್ರಸ್ಟ್‌ಗಳಲ್ಲಿ ಮುಸ್ಲಿಮರು ಇರುವರೇ: ‘ಸುಪ್ರೀಂ’ ಪ್ರಶ್ನೆ

ಒಂದನೇ ಪುಟದಿಂದ...

ಆಗ ಪೀಠವು, ‘ಈಗಿನಿಂದ ಮುಸ್ಲಿಮರನ್ನು ಹಿಂದೂ ಧಾರ್ಮಿಕ ದತ್ತಿ ಮಂಡಳಿಗಳ ಭಾಗವಾಗಲು ಅವಕಾಶ ನೀಡುವುದಾಗಿ ನೀವು ಹೇಳುತ್ತಿದ್ದೀರಾ? ಅದನ್ನು ಬಹಿರಂಗವಾಗಿ ತಿಳಿಸಿ’ ಎಂದು ಹೇಳಿತು.

ಶಾಸನಾತ್ಮಕ ಮಂಡಳಿಯೊಂದರಲ್ಲಿ ಮುಸ್ಲಿಮೇತರರು ಇರಬಾರದು ಎಂಬ ವಾದವನ್ನು ಒಪ್ಪಿಕೊಳ್ಳುವುದಾದರೆ, ಈಗಿನ ನ್ಯಾಯಪೀಠ ಕೂಡ ಈ ವಿಷಯವನ್ನು ಆಲಿಸಲು ಸಾಧ್ಯವಾಗುವುದಿಲ್ಲ ಎಂದು ಮೆಹ್ತಾ ವಾದಿಸಿದರು.

ಇದಕ್ಕೆ ಪೀಠವು, ‘ನಾವು ಇಲ್ಲಿ ಕುಳಿತಾಗ ನಮ್ಮ ಧರ್ಮವನ್ನು ಕಳಚಿರುತ್ತೇವೆ. ನಾವು ಸಂಪೂರ್ಣವಾಗಿ ಧರ್ಮನಿರಪೇಕ್ಷ ಆಗಿರುತ್ತೇವೆ. ನಮಗೆ ಎರಡೂ ಕಡೆಗಳು ಒಂದೇ. ಆದರೆ, ಧಾರ್ಮಿಕ ವ್ಯವಹಾರಗಳನ್ನು ನೋಡಿಕೊಳ್ಳುವ ಮಂಡಳಿ ಬಗ್ಗೆ ಆಲೋಚಿಸುವಾಗ, ಸಮಸ್ಯೆ ಉಂಟಾಗಬಹುದು’ ಎಂದು ವಿವರಿಸಿತು.

ಸಾರ್ವಜನಿಕ ಟ್ರಸ್ಟ್ ಒಂದನ್ನು ವಕ್ಫ್ ಎಂದು 100 ಅಥವಾ 200 ವರ್ಷಗಳ ಹಿಂದೆ ಘೋಷಿಸಿದ್ದಾಗ, ಅದನ್ನು ವಕ್ಫ್ ಮಂಡಳಿಯು ತಕ್ಷಣವೇ ಸ್ವಾಧೀನಕ್ಕೆ ತೆಗೆದುಕೊಂಡು, ಇನ್ನೊಂದು ಬಗೆಯಲ್ಲಿ ಘೋಷಣೆ ಮಾಡಲು ಅವಕಾಶ ಇಲ್ಲ ಎಂದು ಪೀಠ ವಿವರಿಸಿತು.

ವಕ್ಫ್ ಕಾಯ್ದೆಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಒಂದು ಹೈಕೋರ್ಟ್‌ಗೆ ವಹಿಸಬಹುದು ಎಂದು ಸಿಜೆಐ ಅವರು ಹೇಳಿದರು.

‘ಎರಡೂ ಬದಿಯವರಲ್ಲಿ ಒಂದು ಅಂಶದ ಬಗ್ಗೆ ನಾವು ಕೇಳಬೇಕಿದೆ. ಮೊದಲನೆಯದು, ಅರ್ಜಿಗಳನ್ನು ನಾವು ಆಲಿಸಬೇಕೇ ಅಥವಾ ಅದನ್ನು ಹೈಕೋರ್ಟ್‌ಗೆ ವರ್ಗಾಯಿಸಬೇಕೇ? ಎರಡನೆಯದು, ನೀವು ನಿಜವಾಗಿಯೂ ಕೋರುತ್ತಿರುವುದು ಏನೆಂಬುದನ್ನು, ಮಂಡಿಸಲು ಬಯಸಿರುವ ವಾದ ಏನೆಂಬುದನ್ನು ನಿಖರವಾಗಿ ತಿಳಿಸಿ’ ಎಂದು ಸಿಜೆಐ ಹೇಳಿದರು.

ವಕ್ಫ್ ಕಾಯ್ದೆಯ ಪರಿಣಾಮಗಳು ದೇಶದಾದ್ಯಂತ ಇರುತ್ತವೆ. ಹೀಗಾಗಿ ಅರ್ಜಿಗಳನ್ನು ಹೈಕೋರ್ಟ್‌ಗೆ ವರ್ಗಾವಣೆ ಮಾಡಬಾರದು ಎಂದು ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಮನವಿ ಮಾಡಿದರು.

ಮುಸ್ಲಿಮರು ಮಾತ್ರವೇ ವಕ್ಫ್ ಘೋಷಣೆ ಮಾಡಬಹುದು ಎಂಬುದನ್ನು ತಾವು ಪ್ರಶ್ನಿಸುತ್ತಿರುವುದಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು. ‘ವ್ಯಕ್ತಿಯೊಬ್ಬ ಮುಸ್ಲಿಮನೇ, ಅಲ್ಲವೇ, ವಕ್ಫ್ ಘೋಷಣೆಗೆ ಆತ ಅರ್ಹನೇ ಎಂಬುದನ್ನು ಸರ್ಕಾರವು ಹೇಗೆ ತೀರ್ಮಾನಿಸಬಹುದು’ ಎಂದು ಸಿಬಲ್ ಪ್ರಶ್ನಿಸಿದರು.

‘ಐದು ವರ್ಷಗಳಿಂದ ಇಸ್ಲಾಂ ಧರ್ಮವನ್ನು ಅನುಸರಿಸುತ್ತಿರುವವರು ಮಾತ್ರ ವಕ್ಫ್ ಘೋಷಣೆ ಮಾಡಬಹುದು ಎಂಬುದನ್ನು ಸರ್ಕಾರ ಹೇಗೆ ಹೇಳಬಹುದು’ ಎಂದೂ ಅವರು ಪ್ರಶ್ನಿಸಿದರು. ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ 72ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ.

ವಕ್ಫ್ ಕಾಯ್ದೆಯನ್ನು ವಿರೋಧಿಸಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಹಿಂಸಾಚಾರ ಉಂಟಾಗಿದ್ದುದು ಮನಸ್ಸನ್ನು ಬಹಳವಾಗಿ ಕಲಕುವಂಥದ್ದು ಎಂದು ಪೀಠವು ವಿಚಾರಣೆ ಸಂದರ್ಭದಲ್ಲಿ ಹೇಳಿದೆ.

ಕೇಂದ್ರದ ಎದುರು ಪ್ರಸ್ತಾವ

ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳು ‘ಬಳಕೆಯ ಕಾರಣದಿಂದಾಗಿ ವಕ್ಫ್’ ಆಗಿರಲಿ ಅಥವಾ ‘ಕ್ರಯಪತ್ರದ ಮೂಲಕ ವಕ್ಫ್ ಆಗಿರಲಿ’, ಅವುಗಳನ್ನು ಡಿನೋಟಿಫೈ ಮಾಡಬಾರದು ಎಂಬ ಪ್ರಸ್ತಾವವನ್ನು ಸುಪ್ರೀಂ ಕೋರ್ಟ್, ಕೇಂದ್ರದ ಮುಂದೆ ಇರಿಸಿದೆ.

ಆಸ್ತಿಯೊಂದು ಸರ್ಕಾರಕ್ಕೆ ಸೇರಿದೆಯೇ ಎಂಬ ಬಗ್ಗೆ ಜಿಲ್ಲಾಧಿಕಾರಿಯು ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿ ಆ ಆಸ್ತಿಯನ್ನು ವಕ್ಫ್ ಎಂದು ಪರಿಗಣಿಸಲಾಗದು ಎಂದು ಕಾಯ್ದೆಯಲ್ಲಿ ಇರುವ ಅಂಶವನ್ನು ಜಾರಿಗೆ ತರಬಾರದು ಎಂಬ ಆದೇಶವನ್ನು ತಾನು ಹೊರಡಿಸಬಹುದು ಎಂಬ ಸೂಚನೆಯನ್ನು ಕೂಡ ಪೀಠವು ನೀಡಿದೆ.

ಮರಗಳ ಮಾರಣಹೋಮ: ‘ಸುಪ್ರೀಂ’ ಕಳವಳ

ನವದೆಹಲಿ (ಪಿಟಿಐ): ಹೈದರಾಬಾದ್ ವಿಶ್ವವಿದ್ಯಾಲಯದ ಪಕ್ಕದಲ್ಲಿ ಹೆಚ್ಚಿನ ಸಂಖ್ಯೆಯ ಮರಗಳನ್ನು ಕಡಿಯುವುದರಿಂದ ಅಲ್ಲಿನ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಬುಧವಾರ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ‘ಇಂತಹ ಕಾರ್ಯಗಳಿಂದ ಪರಿಸರ ಸಂರಕ್ಷಣೆ ಹೇಗಾಗುತ್ತದೆ?’ ಎಂದು ಕೇಳಿದೆ.

‘ತೆಲಂಗಾಣ ಸರ್ಕಾರವು ಅಲ್ಲಿನ ಮರಗಳನ್ನು ಕಡಿಯಲು ಏಕೆ ಆತುರ ಪಡುತ್ತಿದೆ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠ ಪ್ರಶ್ನಿಸಿತು.

‘ಅಲ್ಲಿನ 100 ಎಕರೆ ಭೂಮಿಯನ್ನು ನೀವು ಹೇಗೆ ಪುನರ್ ಸ್ಥಾಪಿಸುತ್ತೀರಿ ಎಂಬುದರ ಕುರಿತು ಯೋಜನೆ ರೂಪಿಸಿ ಸಲ್ಲಿಸಿ’ ಎಂದು ಪೀಠವು, ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ಸೂಚಿಸಿತು.

‘ಅಲ್ಲಿನ ಪ್ರಾಣಿಗಳು ಆಶ್ರಯಕ್ಕಾಗಿ ಓಡುತ್ತಿರುವ ವಿಡಿಯೊಗಳನ್ನು ನೋಡಿ ಬೇಸರವಾಯಿತು’ ಎಂದ ಪೀಠವು, ಅವುಗಳ ರಕ್ಷಣೆಗೆ ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಿರ್ದೇಶಿಸಿತು.

ಈ ಕುರಿತ ವಿಚಾರಣೆಯನ್ನು ಮೇ 15ಕ್ಕೆ ಮುಂದೂಡಿದ ಪೀಠವು, ‘ಅಲ್ಲಿಯ ತನಕ ಒಂದೇ ಒಂದು ಮರವನ್ನು ಕಡಿಯಬಾರದು’ ಎಂದು ಮೌಖಿಕವಾಗಿ ತಿಳಿಸಿತು.

ಕಾಂಚ ಗಚಿಬೌಲಿ ಅರಣ್ಯ ಪ್ರದೇಶದಲ್ಲಿನ ಮರಗಳ ಮಾರಣ ಹೋಮ ಕುರಿತು ಏಪ್ರಿಲ್ 3ರಂದು ಸ್ವಯಂ ಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್, ಇದು ಅತ್ಯಂತ ಗಂಭೀರ ವಿಷಯವಾಗಿದೆ ಎಂದು ಹೇಳಿತ್ತು.

ಹೈದರಾಬಾದ್ ವಿಶ್ವವಿದ್ಯಾಲಯದ ಪಕ್ಕದ 400 ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸುವ ತೆಲಂಗಾಣ ಸರ್ಕಾರದ ಯೋಜನೆಯನ್ನು ವಿರೋಧಿಸಿ ವಿ.ವಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು.

ವಿದ್ಯಾರ್ಥಿಗಳನ್ನು ಅಗೌರವದಿಂದ ನಡೆಸಿಕೊಂಡ ಶಾಲೆಗೆ ಛೀಮಾರಿ

ನವದೆಹಲಿ (ಪಿಟಿಐ): ಶುಲ್ಕ ಪಾವತಿಸದ ಕಾರಣ ವಿದ್ಯಾರ್ಥಿಗಳಿಗೆ ಅಗೌರವ ತೋರಿ, ಅವರನ್ನು ಗ್ರಂಥಾಲಯದಲ್ಲಿ ಬಂಧಿಸಿದ ಮತ್ತು ತರಗತಿ ಪ್ರವೇಶಕ್ಕೆ ನಿರಾಕರಿಸಿದ ದ್ವಾರಕ ಪಬ್ಲಿಕ್ ಶಾಲೆಯ ಆಡಳಿತವನ್ನು ದೆಹಲಿ ಹೈಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿ ಸಚಿನ್ ದತ್ತಾ ಅವರು, ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಆಸ್ತಿ ಎಂಬಂತೆ ಬೇಕಾಬಿಟ್ಟಿ ನಡೆಸಿಕೊಳ್ಳುವ ಶಾಲೆಯು ಬಾಗಿಲು ಮುಚ್ಚಲು ಅರ್ಹವಾಗಿದೆ ಎಂದು ಛೀಮಾರಿ ಹಾಕಿದರು.

ಶಾಲೆಯು ‘ಹಣ ಗಳಿಸುವ ಸಾಧನ’ ಎಂಬಂತೆ ಪರಿಗಣಿಸುವ ಶೈಕ್ಷಣಿಕ ಸಂಸ್ಥೆಗಳು ಮಕ್ಕಳಿಗೆ ಕಿರುಕುಳ ನೀಡದಂತೆ ರಕ್ಷಿಸಲು ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕಾಗಿ ಅವರನ್ನು ಅಮಾನವೀಯವಾಗಿ, ಅಗೌರವದಿಂದ ನಡೆಸಿಕೊಳ್ಳಲು ಶಾಲೆಗಳಿಗೆ ಪರವಾನಗಿ ನೀಡಿಲ್ಲ ಎಂದು ಕಟುವಾಗಿ ಹೇಳಿದರು. ವಿಚಾರಣೆ ವೇಳೆ ಶಾಲೆಯ ಹಲವು ವಿದ್ಯಾರ್ಥಿಗಳು ಸಮವಸ್ತ್ರ, ಪುಸ್ತಕ ಮತ್ತು ಬ್ಯಾಗ್‌ಗಳೊಂದಿಗೆ ಕೋರ್ಟ್‌ನಲ್ಲಿ ಹಾಜರಿದ್ದರು.

‘ಕುನಾಲ್ ಬಂಧನ ಅಗತ್ಯವಿಲ್ಲ’

ಮುಂಬೈ: ತನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿರುವ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರ ಅರ್ಜಿ ಕುರಿತು ಆದೇಶ ಹೊರಡಿಸುವವರೆಗೂ, ಅವರನ್ನು ಬಂಧಿಸಬಾರದು ಎಂದು ಬಾಂಬೆ ಹೈಕೋರ್ಟ್ ತಿಳಿಸಿದೆ.

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯೂ ಆಗಿರುವ ಶಿವಸೇನಾ ಮುಖ್ಯಸ್ಥ ಏಕನಾಥ ಶಿಂದೆ ಅವರನ್ನು ‘ವಂಚಕ’ ಎಂದು ಕರೆದಿರುವ ಆರೋಪದ ಮೇರೆಗೆ ಕುನಾಲ್ ಕಾಮ್ರಾ ವಿರುದ್ಧ ಮುಂಬೈ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕಾಮ್ರಾ ಅವರ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಆದೇಶವನ್ನು ಕಾಯ್ದಿರಿಸಿತು.

ನೇಮಕಾತಿಗೆ ಆಗ್ರಹ

ಮಹಿಳಾ ಸಿವಿಲ್ ಪೊಲೀಸ್ ಅಧಿಕಾರಿ (ಸಿಪಿಒ) ರ‍್ಯಾಂಕ್ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿಗೆ ಆಗ್ರಹಿಸಿ ತಿರುವನಂತಪುರದಲ್ಲಿರುವ ಕೇರಳದ ಸಚಿವಾಲಯದ ಹೊರಗೆ ಬುಧವಾರ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಒಬಿಸಿ ಮೀಸಲು ಶೇ 51ಕ್ಕೆ?

ಒಂದನೇ ಪುಟದಿಂದ...

ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಈ ತಿದ್ದುಪಡಿಯನ್ನು ಎತ್ತಿಹಿಡಿದಿದೆ.ಬದಲಾದ ಕಾಲಘಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 18ರಿಂದ 24ಕ್ಕೆ ಹೆಚ್ಚಿಸಿರುವುದರಿಂದ ಪ್ರಸ್ತುತ ರಾಜ್ಯದಲ್ಲಿ ಶೇ 56ರಷ್ಟು ಮೀಸಲಾತಿ ಪ್ರಮಾಣ ಜಾರಿಯಲ್ಲಿದೆ. ಕೇಂದ್ರ ಸರ್ಕಾರ ಆರ್ಥಿಕ ದುರ್ಬಲ ವರ್ಗದವರಿಗೆ ಶೇ 10ರಷ್ಟು ಮೀಸಲಾತಿಯನ್ನು ಜಾರಿಗೆ ತಂದಿದೆ. ಆದ್ದರಿಂದ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿದ್ದ ಇಂದಿರಾ ಸಾಹ್ನಿ ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕೆ ಮಿತಿಗೊಳಿಸಬೇಕು ಎಂಬುದು ಜಾರಿಯಲ್ಲಿ ಇಲ್ಲ. ಹೀಗಾಗಿ, ಆಯೋಗದ ಶಿಫಾರಸಿಗೆ ಅನುಮೋದನೆ ನೀಡಬೇಕು ಎಂದೂ ಇಲಾಖೆ ವಿವರಿಸಿದೆ.

ವರದಿ ಅನುಷ್ಠಾನಕ್ಕೆ ಹಿಂದುಳಿದವರ ಒತ್ತಡ

ಒಂದನೇ ಪುಟದಿಂದ...

ಒಕ್ಕೂಟದ ಕಚೇರಿಯಲ್ಲಿ ನಡೆದ ಸಭೆಯಲ್ಲಿ, ‘ಜಾತಿ ಜನಗಣತಿ ವರದಿಯನ್ನು ವಿರೋಧಿಸುವ ಯಾವುದೇ ಪಕ್ಷದ ಶಾಸಕರು, ಸಚಿವರಿಗೆ, ಈ ವರದಿಯ ಕುರಿತು ಮೊದಲು ಮನವರಿಕೆ ಮಾಡಿಕೊಡುವುದು. ಅದಕ್ಕೆ ಒಪ್ಪದೇ, ವಿರೋಧವನ್ನು ಮುಂದುವರಿಸಿದರೆ, ಅವರ ವಿರುದ್ಧ ಪ್ರತಿಭಟನೆ ನಡೆಸಬೇಕು’ ಎಂಬ ತೀರ್ಮಾನ ಮಾಡಲಾಯಿತು.

‘ಈಗ ಜಾತಿ ಜನಗಣತಿ ವಿರೋಧಿಸುತ್ತಿರುವವರು ಹಿಂದೆಯೂ ಹಾವನೂರು ಆಯೋಗದಿಂದ ಚಿನ್ನಪ್ಪರೆಡ್ಡಿ ಆಯೋಗದ ವರದಿಯವರೆಗೆ ಯಾವುದನ್ನೂ ಒಪ್ಪಿಲ್ಲ. ಆಗ, ನಮ್ಮ ಸಮುದಾಯಗಳಿಗೆ, ಇದನ್ನೆಲ್ಲ ವಿರೋಧಿಸಿ ಹೋರಾಡುವ ಶಕ್ತಿ ಇರಲಿಲ್ಲ. ಈಗ ನಾವು ಸಂಘಟಿತರಾಗಿದ್ದೇವೆ, ಕಾಂತರಾಜ ನೇತೃತ್ವದ ಆಯೋಗದ ವರದಿಯ ಶಿಫಾರಸುಗಳು ಅನುಷ್ಠಾನಕ್ಕೆ ಬರದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡಬೇಕು’ ಎಂದು ಸಭೆ ನಿರ್ಧರಿಸಿತು.

ಸಭೆ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ‘ಜಾತಿ ಜನಗಣತಿ ವರದಿಯನ್ನು ವಿರೋಧ ಮಾಡುವುದಕ್ಕೆ ಕಾರಣವಿಲ್ಲ. ಈ ಸಮೀಕ್ಷೆಯ ವರದಿಯನ್ನು ಯಾರೂ ಓದಿಲ್ಲ. ಆದರೂ ಅವೈಜ್ಞಾನಿಕ ಎನ್ನುತ್ತಾರೆ. ಇದು ತಪ್ಪು. ಮೊದಲು ಅಧ್ಯಯನ ಮಾಡಿ, ನ್ಯೂನತೆಗಳಿದ್ದರೆ ಸರಿಪಡಿಸಿ, ನಂತರ ಅನುಷ್ಠಾನ ಮಾಡಬೇಕು’ ಎಂದರು.

ತಜ್ಞರ ಸಮಿತಿಯೊ? ಸಂಪುಟ ಉಪ ಸಮಿತಿಯೊ?

ದತ್ತಾಂಶಗಳ ಅಧ್ಯಯನ ವರದಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ವಿವಿಧ ಸಮುದಾಯಗಳ ಸಚಿವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆ. ವರದಿಯಲ್ಲಿ ನಮೂದಾಗಿರುವ ಜಾತಿ ಜನಸಂಖ್ಯೆಗೆ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಪರ ಆಯಾ ಸಮುದಾಯಗಳು ಈಗಾಗಲೇ ತೀವ್ರ ವಿರೋಧ ವ್ಯಕ್ತಪಡಿಸಿವೆ. ಹೀಗಾಗಿ, ಆ ಸಮುದಾಯಗಳ ಸಚಿವರು ವರದಿಯನ್ನು ಅಂಗೀಕರಿಸದಂತೆ ಪಟ್ಟು ಹಿಡಿಯುವ ಸಾಧ್ಯತೆಯಿದೆ.

ಆದರೆ, ಸಮೀಕ್ಷೆಯು ವೈಜ್ಞಾನಿಕವಾಗಿ ನಡೆದಿದ್ದು, ತಪ್ಪುಗಳಿದ್ದರೆ ಸರಿಪಡಿಸುವ ಅವಕಾಶ ಇರುವುದರಿಂದ ಶಿಫಾರಸುಗಳಿಗೆ ಅನುಮೋದನೆ ನೀಡುವಂತೆ ಹಿಂದುಳಿದ ವರ್ಗಕ್ಕೆ ಸೇರಿದ ಸಚಿವರು ನಿಲುವು ವ್ಯಕ್ತಪಡಿಸಬಹುದು. ಅಂತಿಮವಾಗಿ, ಅಧ್ಯಯನ ವರದಿಯ ಪರಾಮರ್ಶೆಗೆ ನಿವೃತ್ತ ನ್ಯಾಯಮೂರ್ತಿಯ ನೇತೃತ್ವದಲ್ಲಿ ಸಮಿತಿ ಅಥವಾ ಸಚಿವ ಸಂಪುಟ ಉಪ ಸಮಿತಿ ರಚಿಸುವ ತೀರ್ಮಾನವನ್ನು ಗುರುವಾರದ ಸಭೆ ತೆಗೆದುಕೊಳ್ಳುವ ಸಂಭವವಿದೆ

ಬಿಜೆಪಿ ಜತೆ ಸಮ್ಮಿಶ್ರ ಸರ್ಕಾರ ಇಲ್ಲ: ಎಐಎಡಿಎಂಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ‘ತಮಿಳುನಾಡಿನಲ್ಲಿ ಬಿಜೆಪಿಯೊಂದಿಗೆ ತಮ್ಮ ಪಕ್ಷದ ಮೈತ್ರಿ ಕೇವಲ ಚುನಾವಣೆಗೆ ಮಾತ್ರ. ಒಂದು ವೇಳೆ ಗೆಲುವು ಸಾಧಿಸಿದರೆ ಸಮ್ಮಿಶ್ರ ಸರ್ಕಾರ ರಚಿಸುವುದಿಲ್ಲ’ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಬುಧವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಗೆ ತದ್ವಿರುದ್ಧ ಹೇಳಿಕೆ ನೀಡಿದ್ದಾರೆ.

ಪಳನಿಸ್ವಾಮಿ ಅವರ ಸಮ್ಮುಖದಲ್ಲಿ ಏಪ್ರಿಲ್ 11ರಂದು ಮೈತ್ರಿ ಘೋಷಿಸುವಾಗ, ‘ನಾವು ಎಡಪ್ಪಾಡಿ ಕೆ.ಪಳನಿಸ್ವಾಮಿ ನೇತೃತ್ವದಲ್ಲಿ 2026ರ ವಿಧಾನಸಭಾ ಚುನಾವಣೆಯಲ್ಲಿ ಒಟ್ಟಾಗಿ ಸ್ಪರ್ಧಿಸುತ್ತೇವೆ ಮತ್ತು ಒಟ್ಟಾಗಿ ಸರ್ಕಾರ ರಚಿಸುತ್ತೇವೆ. ಚುನಾವಣೆಯ ನಂತರ ಸಮ್ಮಿಶ್ರ ಸರ್ಕಾರದ ರೂಪುರೇಷೆಗಳನ್ನು ರೂಪಿಸಲಾಗುವುದು’ ಎಂದು ಬಿಜೆಪಿಯ ತಂತ್ರಗಾರ ಅಮಿತ್ ಶಾ ಹೇಳಿದ್ದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಪಳನಿಸ್ವಾಮಿ, ‘ಎನ್‌ಡಿಎ ಯನ್ನು ರಾಷ್ಟ್ರಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಜ್ಯದಲ್ಲಿ ಎಐಎಡಿಎಂಕೆ ಮುಖ್ಯಸ್ಥರು ಮುನ್ನಡೆಸಲಿದ್ದಾರೆ ಎಂದು ಶಾ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ಬಗ್ಗೆ ಅವರಲ್ಲಿ ತುಂಬಾ ಸ್ಪಷ್ಟತೆ ಇದೆ ಎಂದು ಹೇಳಿದ್ದಾರೆ.

ಮುಸ್ಲಿಮರಿಗೆ ಗುತ್ತಿಗೆ: ರಾಜ್ಯಪಾಲರ ತಕರಾರು

ಒಂದನೇ ಪುಟದಿಂದ...

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳ ₹1 ಕೋಟಿವರೆಗಿನ ಸರಕು ಮತ್ತು ಸೇವೆಗಳ ಸಂಗ್ರಹಣೆಯ ಗುತ್ತಿಗೆಯಲ್ಲೂ ಮೇಲಿನ ಪ್ರಮಾಣದಲ್ಲೇ ವಿವಿಧ ಪ್ರವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಪ್ರಸ್ತಾವ ಇದೇ ತಿದ್ದುಪಡಿ ಮಸೂದೆಯಲ್ಲಿದೆ.

ವಿಧಾನ ಮಂಡಲದ ಎರಡೂ ಸದನಗಳು ಅಂಗೀಕರಿಸಿದ್ದ ಈ ಮಸೂದೆಯನ್ನು ಏಪ್ರಿಲ್ 1ರಂದು ರಾಜ್ಯಪಾಲರ ಅಂಕಿತಕ್ಕೆ ಸರ್ಕಾರ ಕಳುಹಿಸಿತ್ತು. ಆರು ಪುಟಗಳ ಪತ್ರದೊಂದಿಗೆ ಪೂರ್ಣ ಕಡತವನ್ನು ಮಂಗಳವಾರ (ಏಪ್ರಿಲ್ 15) ಹಿಂದಿರುಗಿಸಿರುವ ಅವರು, ‘ಧರ್ಮಾಧಾರಿತ ಮೀಸಲಾತಿಗೆ ದೇಶದ ಸಂವಿಧಾನದಲ್ಲಿ ಅವಕಾಶ ಇಲ್ಲ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಜ್ಯಪಾಲರ ಪತ್ರದಲ್ಲಿ ಏನಿದೆ?: ‘ರಾಜ್ಯ ಸರ್ಕಾರವು 1994 ಸೆ. 17ರ ಅಧಿಸೂಚನೆಯ ಪ್ರಕಾರ ಮುಸ್ಲಿಂ ಸಮುದಾಯವನ್ನು 2ಬಿ ಪ್ರವರ್ಗದಡಿ ಹಿಂದುಳಿದ ವರ್ಗವೆಂದು ಗುರುತಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಲಾಗಿದೆ. ಪ್ರವರ್ಗ 1ರಲ್ಲಿ 95 ಜಾತಿಗಳು, 2ಎಯಲ್ಲಿ 102, 2ಬಿಯಲ್ಲಿ 1, 3ಎಯಲ್ಲಿ 3 ಮತ್ತು 3ಬಿಯಲ್ಲಿ 6 ಜಾತಿಗಳಿವೆ. ಈ ಹಿಂದಿನ ರಾಜ್ಯ ಸರ್ಕಾರವು 2023ರ ಮಾರ್ಚ್ 27ರ ಆದೇಶದಲ್ಲಿ ಪ್ರವರ್ಗ 2ಬಿಗೆ ನೀಡಿದ್ದ ಶೇ 4 ಮೀಸಲಾತಿ ವಾಪಸ್ ಪಡೆದಿದೆ. ಹಾಗಿದ್ದರೂ, ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಲು ಈ ಮಸೂದೆ ತರಲಾಗಿದೆ’ ಎಂದು ಪತ್ರದಲ್ಲಿ ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

‘ರಾಜ್ಯ ಸರ್ಕಾರದ ಆದೇಶದ ವಿರುದ್ಧ 2023ರ ಏಪ್ರಿಲ್ 24ರಂದು ಸಲ್ಲಿಕೆಯಾಗಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಆ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಪ್ರಕರಣವು ವಿಚಾರಣಾ ಹಂತದಲ್ಲಿದೆ. ಸೌರಭ್ ಚೌದರಿ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪಿನಲ್ಲಿ ಧರ್ಮ ಆಧಾರಿತ ಮೀಸಲಾತಿಯನ್ನು ನಿಷೇಧಿಸಿದೆ. ಪಶ್ಚಿಮ ಬಂಗಾಳ ಸರ್ಕಾರ ಇಸ್ಲಾಂ ಧರ್ಮಕ್ಕೆ ಸೇರಿದವರೇ ಹೆಚ್ಚಿದ್ದ 77 ಸಮುದಾಯಗಳನ್ನು ಇತರ ಹಿಂದುಳಿದ ವರ್ಗ (ಒಬಿಸಿ) ಎಂದು ವರ್ಗೀಕರಿಸಿದ್ದನ್ನು ಕಲ್ಕತ್ತ ಹೈಕೋರ್ಟ್ ರದ್ದುಪಡಿಸಿದೆ. ಈ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಯಲ್ಲಿ ‘ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಸಾಧ್ಯ ಇಲ್ಲ’ ಎಂದು ಸುಪ್ರೀಂ ಕೋರ್ಟ್ ಮೌಖಿಕವಾಗಿ ಹೇಳಿದೆ’ ಎಂದೂ ಪತ್ರದಲ್ಲಿ ಅವರು ವಿವರಿಸಿದ್ದಾರೆ.

ಕೆಪಿಎಸ್‌ಸಿ ಕಾಯ್ದೆ ತಿದ್ದುಪಡಿ ಮಸೂದೆ ಸ್ಪಷ್ಟೀಕರಣ ಕೇಳಿ ವಾಪಸ್

ಥಾವರಚಂದ್ ಗೆಹಲೋತ್

‘ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಕಾಯ್ದೆ–1959ಕ್ಕೂ (1959ರ ಕರ್ನಾಟಕ ಕಾಯ್ದೆ 20) ತಿದ್ದುಪಡಿ ತರಲು ಉದ್ದೇಶಿಸಿದ್ದ ಮಸೂದೆಯನ್ನು ಸ್ಪಷ್ಟೀಕರಣ ಕೇಳಿ ರಾಜ್ಯಪಾಲರು ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ. ‘ನಿಯಮಗಳನ್ನು ರೂಪಿಸುವ ಸಂದರ್ಭದಲ್ಲಿ ಸರ್ಕಾರವು ಆಯೋಗದ ಜೊತೆ ಸಮಾಲೋಚನೆ ನಡೆಸಬೇಕು’ ಎಂಬ ಕಾಯ್ದೆಯಲ್ಲಿನ ಸೆಕ್ಷನ್ 18 ಅನ್ನು ಕೈಬಿಟ್ಟು, ‘ನಿಯಮಗಳನ್ನು ರೂಪಿಸುವಾಗ ಆಯೋಗದೊಂದಿಗೆ ಸಮಾಲೋಚನೆ ನಡೆಸುವ ಅಗತ್ಯ ಇಲ್ಲ’ ಎಂದು ತಿದ್ದುಪಡಿ ಮಾಡಲು ಸರ್ಕಾರ ಮುಂದಾಗಿತ್ತು. ‘ಸಂವಿಧಾನದ ವಿಧಿ 315ರಡಿ ಆಯೋಗವು ರಚನೆಯಾಗಿದೆ. ಸಂವಿಧಾನದ 320ನೇ ವಿಧಿಯ ಅನ್ವಯ, ನಾಗರಿಕ ಹುದ್ದೆಗಳಿಗೆ ನೇಮಕ ವಿಧಾನ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಜೊತೆ ಆಯೋಗ ಸಮಾಲೋಚನೆ ನಡೆಸಬೇಕಿದೆ. ಸೆಕ್ಷನ್ 18 ಅನ್ನು ಕೈಬಿಟ್ಟರೆ ಆಯೋಗದ ಜೊತೆ ಸಮಾಲೋಚನೆ ನಡೆಸದೆ ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಅಧಿಕಾರ ಸಿಗಲಿದೆ. ಪ್ರಸ್ತಾವಿತ ತಿದ್ದುಪಡಿಯು ಸಂವಿಧಾನದ 320ನೇ ವಿಧಿಗೆ ವ್ಯತಿರಿಕ್ತವಾಗಿದ್ದು, ಆಯೋಗದ ಸ್ವಾಯತ್ತೆಯನ್ನು ಮೊಟಕುಗೊಳಿಸಲಿದೆ ಎನ್ನುವುದು ನನ್ನ ಆತಂಕ. ಹೀಗಾಗಿ ಈ ಬಗ್ಗೆ ಸ್ಪಷ್ಟೀಕರಣ ಮತ್ತು ಕಾನೂನು ಅಭಿಪ್ರಾಯದ ಜೊತೆಗೆ ಕಡತವನ್ನು ಮತ್ತೆ ಸಲ್ಲಿಸಿ’ ಎಂದು ರಾಜ್ಯಪಾಲರು ಸೂಚಿಸಿದ್ದಾರೆ.

ರಾಜ್ಯಪಾಲರ ವಾದವೇನು?

- ಮುಸ್ಲಿಮರು ಮಾತ್ರ ಇರುವ ಪ್ರವರ್ಗ 2ಬಿಗೆ ಶೇ 4ರಷ್ಟು ಮೀಸಲಾತಿ ನೀಡಿರುವುದನ್ನು ‘ಧರ್ಮ ಆಧರಿಸಿ ಸಮುದಾಯಕ್ಕೆ ನೀಡಿದ ಮೀಸಲಾತಿ’ ಎಂದು ಅರ್ಥೈಸಬಹುದಾಗಿದೆ.
- ಧರ್ಮ ಆಧಾರಿತ ಮೀಸಲಾತಿಗೆ ಸಂವಿಧಾನವು ಅವಕಾಶ ನೀಡುವುದಿಲ್ಲ. ಅಲ್ಲದೆ, ಇದು ಸಂವಿಧಾನದ ವಿಧಿ 14 (ಸಮಾನತೆ), 15 (ತಾರತಮ್ಯರಹಿತ) ಮತ್ತು 16 (ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ) ಎಂಬ ತತ್ವಗಳ ಉಲ್ಲಂಘನೆಯಾಗುತ್ತದೆ.
- ಪ್ರವರ್ಗ 2ಬಿಗೆ ನೀಡಿರುವ ಶೇ 4ರಷ್ಟು ಮೀಸಲಾತಿ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿ ಇರುವುದರಿಂದ, ಪ್ರಸ್ತಾಪಿತ ಕೆಟಿಟಿಪಿ ಕಾಯ್ದೆ ತಿದ್ದುಪಡಿ ಮೂಲಕ ಮೀಸಲಾತಿ ನೀಡಲು ಹೊರಟಿರುವುದು ಕಾನೂನು ತೊಡಕುಗಳಿಗೆ ಕಾರಣ ಆಗಬಹುದು.

ಹಿರಿಯ ವಕೀಲ ಶರತ್ ಜವಳಿ ನಿಧನ

ನವದೆಹಲಿ: ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಶರತ್ ಎಸ್.ಜವಳಿ (85) ವಯೋಸಹಜ ಅನಾರೋಗ್ಯದಿಂದ ಬುಧವಾರ ಇಲ್ಲಿ ನಿಧನರಾದರು.

ಜವಳಿ ಅವರು ಹಲವು ಪ್ರಮುಖ ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿದ್ದರು. ನ್ಯಾಯಶಾಸ್ತ್ರಜ್ಞ ಫಾಲಿ ನರೀಮನ್ ಜತೆಗೆ ಕೃಷ್ಣಾ, ಕಾವೇರಿ ಹಾಗೂ ಮಹದಾಯಿ ಜಲವಿವಾದಗಳಲ್ಲಿ ಸುಪ್ರೀಂ ಕೋರ್ಟ್ ಹಾಗೂ ನ್ಯಾಯಮಂಡಳಿಗಳಲ್ಲಿ ರಾಜ್ಯದ ಪರ ವಾದಿಸಿದ್ದರು. ಬೆಳಗಾವಿ ಗಡಿ ವಿವಾದದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಅವರಿಗೆ ಪತ್ನಿ, ಪುತ್ರ ಕಿರೀಟ್ ಜವಳಿ (ಸುಪ್ರೀಂ ಕೋರ್ಟ್ ವಕೀಲ) ಹಾಗೂ ಪುತ್ರಿ ಇದ್ದಾರೆ. ಹಾವೇರಿಯಲ್ಲಿ ಜನಿಸಿದ್ದ ಅವರು ಕರ್ನಾಟಕ ವಿ.ವಿಯಲ್ಲಿ ಪದವಿ ಪಡೆದಿದ್ದರು.

ಶಾಲಾ ಪ್ರವೇಶಕ್ಕೆ 5 ವರ್ಷ 5 ತಿಂಗಳು

ಒಂದನೇ ಪುಟದಿಂದ...

ರಾಜ್ಯ ಶಿಕ್ಷಣ ನೀತಿ ಆಯೋಗದ ಸಲಹೆ ಹಾಗೂ ಪೋಷಕರ ಮನವಿ ಪರಿಗಣಿಸಿ ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ ವಯೋಮಿತಿ ಸಡಿಲಗೊಳಿಸಲಾಗಿದೆ. ಆದರೆ, ಅಂತಹ ಮಕ್ಕಳು ಎಲ್‌ಕೆಜಿ, ಯುಕೆಜಿ, ಅಂಗನವಾಡಿ ಸೇರಿದಂತೆ ಪೂರ್ವಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರಬೇಕು. ಪೂರ್ವಪ್ರಾಥಮಿಕ ಶಿಕ್ಷಣ ಪಡೆಯದೆ ನೇರವಾಗಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳಿಗೆ ಶಿಕ್ಷಣ ಹಕ್ಕು ಕಾಯ್ದೆ ಹಾಗೂ ಕಡ್ಡಾಯ ಶಿಕ್ಷಣ ನಿಯಮದಂತೆ 6 ವರ್ಷ ವಯೋಮಿತಿಯನ್ನು ಪರಿಗಣಿಸಲಾಗುವುದು ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ 2022ರ ನವೆಂಬರ್‌ನಲ್ಲಿ ಹೊರಡಿಸಿದ ಆದೇಶದಂತೆ, 2025ರ ಜೂನ್ 1ರ ಒಳಗೆ ಆರು ವರ್ಷ ಪೂರ್ಣಗೊಳಿಸಿದ ಮಕ್ಕಳು 2025-26ನೇ ಶೈಕ್ಷಣಿಕ ವರ್ಷದಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿದ್ದರು. ಈ ನಿಯಮ ಸಾವಿರಾರು ಮಕ್ಕಳ ಪ್ರವೇಶಕ್ಕೆ ಅಡ್ಡಿಯಾಗಿದೆ. ಮೊದಲು ಇದ್ದಂತೆ 5 ವರ್ಷ 5 ತಿಂಗಳು ತುಂಬಿದ ಮಕ್ಕಳ ಪ್ರವೇಶಕ್ಕೆ ಅವಕಾಶ ಕೊಡಬೇಕು ಎಂದು ಹಲವು ಪೋಷಕರು ಮನವಿ ಮಾಡಿದ್ದರು.

ವಯೋಮಿತಿ ಸಡಿಲಿಕೆ ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳಿಗೆ ಅನ್ವಯಿಸುತ್ತದೆ. ಕೇಂದ್ರ ಪಠ್ಯದ ಶಾಲೆಗಳ ಮೇಲೆ ಹೇರಿಕೆ ಮಾಡುವುದಿಲ್ಲ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಗೃಹ ಸಚಿವಾಲಯ ಹದ್ದುಬಸ್ತಿನಲ್ಲಿಡಿ–ಪ್ರಧಾನಿಗೆ ಪಶ್ಚಿಮ ಬಂಗಾಳದ ಸಿ.ಎಂ ಆಗ್ರಹ

‘ಮುರ್ಶಿದಾಬಾದ್ ಗಲಭೆ ಪೂರ್ವಯೋಜಿತ’

ಕೋಲ್ಕತ್ತ (ಪಿಟಿಐ): ‘ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ನಡೆದ ಕೋಮುಗಲಭೆ ಪೂರ್ವ ಯೋಜಿತ. ಕಿಡಿಗೇಡಿಗಳು ಬಾಂಗ್ಲಾದಿಂದ ನುಸುಳಲು ಬಿಎಸ್‌ಎಫ್, ಕೇಂದ್ರದ ಸಂಸ್ಥೆಗಳು ಮತ್ತು ಬಿಜೆಪಿಯ ಕೆಲವರು ನೆರವಾಗಿದ್ದು, ಉದ್ವಿಗ್ನ ಪರಿಸ್ಥಿತಿ ಉಂಟಾಗಲು ಕಾರಣರಾಗಿದ್ದಾರೆ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಇಮಾಮ್‌ಗಳ ಜೊತೆಗೆ ಬುಧವಾರ ಇಲ್ಲಿ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ‘ಈಗ ಬಾಂಗ್ಲಾದಲ್ಲಿ ಪ್ರತಿಕೂಲ ಸ್ಥಿತಿ ಇದೆ. ಹಾಗಿದ್ದೂ ಕೇಂದ್ರ ಸರ್ಕಾರವು ಕಿಡಿಗೇಡಿಗಳು ಅಲ್ಲಿಂದ ಅಕ್ರಮವಾಗಿ ಗಡಿದಾಟಲು ನೆರವಾಗಿದೆ’ ಎಂದು ಆರೋಪಿಸಿದರು.

‘ಬಂಗಾಳದಲ್ಲಿ ಶಾಂತಿಭಂಗ ಮಾಡುವಲ್ಲಿ ಬಿಎಸ್‌ಎಫ್, ಕೇಂದ್ರದ ಕೆಲ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಿವೆ’ ಎಂದು ಆರೋಪಿಸಿದರು. ‘ಕಲ್ಲು ತೂರಾಟ ನಡೆಸಲು ಬಿಎಸ್‌ಎಫ್ ಯಾರಿಗೆ ಹಣ ನೀಡಿತ್ತು ಎಂದು ಪತ್ತೆಹಚ್ಚುತ್ತೇನೆ’ ಎಂದು ಹೇಳಿದರು. ಬಿಎಸ್‌ಎಫ್ ಪಾತ್ರ ಕುರಿತು ತನಿಖೆಗೆ ನಡೆಸಬೇಕು ಎಂದು ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದರು.

‘ಕ್ರೂರ’ವಾಗಿರುವ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಬಾರದು. ಅಮಿತ್ ಶಾ ನೇತೃತ್ವದ ಕೇಂದ್ರ ಗೃಹ ಸಚಿವಾಲಯವನ್ನು ಹದ್ದುಬಸ್ತಿನಲ್ಲಿ ಇಡಬೇಕು’ ಎಂದೂ ಮಮತಾ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.

‘ಶಾ ಅವರ ನಡೆ ಮೇಲೆ ಕಣ್ಗಾವಲಿಡಬೇಕು. ಅವರು ತಮ್ಮ ರಾಜಕೀಯ ಕಾರ್ಯಸೂಚಿ ಜಾರಿಗೆ ದೇಶವನ್ನೇ ಅಪಾಯಕ್ಕೆ ದೂಡುತ್ತಿದ್ದಾರೆ. ಅವರ ಚಲನವಲನದ ಮೇಲೆ ಕಣ್ಣಿಡಬೇಕು’ ಎಂದು ಆಗ್ರಹಿಸಿದರು.

ಬಾಂಗ್ಲಾದೇಶದಿಂದ ಅಕ್ರಮವಾಗಿ ಕಿಡಿಗೇಡಿಗಳು ಗಡಿಯನ್ನು ದಾಟಲು, ಗಡಿ ರಕ್ಷಣೆ ಹೊಣೆ ಹೊತ್ತಿರುವ ಬಿಎಸ್‌ಎಫ್ ಕಾರಣ. ಈ ವೈಫಲ್ಯದ ಹೊಣೆಯನ್ನು ನೇರವಾಗಿ ಕೇಂದ್ರ ಸರ್ಕಾರವೇ ಹೊರಬೇಕು’ ಎಂದರು.

ಪರಿಹಾರ ಘೋಷಣೆ: ಕೋಮು ಗಲಭೆಯಲ್ಲಿ ಮೃತಪಟ್ಟಿದ್ದ ಮೂವರ ಕುಟುಂಬಗಳಿಗೆ ಮಮತಾ ಅವರು ತಲಾ ₹10 ಲಕ್ಷ ಪರಿಹಾರ ಘೋಷಿಸಿದರು.

ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಕೋಮುಗಲಭೆ ಬಾಧಿತರು ಆಶ್ರಯ ಪಡೆದಿರುವ ಶಾಲೆಯ ಬಳಿ ಬುಧವಾರ ಹೆಚ್ಚಿನ ಭದ್ರತೆ ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

ಲೈಂಗಿಕ ದೌರ್ಜನ್ಯ ತನಿಖೆಗೆ ಸಮಿತಿ

ನವದೆಹಲಿ (ಪಿಟಿಐ): ‘ಮುರ್ಶಿದಾಬಾದ್‌ನಲ್ಲಿ ಕೋಮುಗಲಭೆ ವೇಳೆ ಹಲವು ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನಡೆದಿದೆ’ ಎಂಬ ಆರೋಪದ ತನಿಖೆಗೆ ಸಮಿತಿ ರಚಿಸಲು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ನಿರ್ಧರಿಸಿದೆ.

‘ಅಧ್ಯಕ್ಷೆ ವಿಜಯಾ ರಹತ್ಕರ್ ಅವರು ಸ್ವಯಂಪ್ರೇರಿತವಾಗಿ ಈ ಬಗ್ಗೆ ಗಮನಹರಿಸಿ ಸಮಿತಿ ರಚಿಸಲು ಆದೇಶಿಸಿದ್ದಾರೆ. ಅಲ್ಲದೆ, ಬಾಧಿತ ಸ್ಥಳಗಳಿಗೂ ಅವರು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಲಿದ್ದು, ಸಂತ್ರಸ್ತರ ಅಭಿಪ್ರಾಯವನ್ನು ಆಲಿಸಲಿದ್ದಾರೆ’ ಎಂದು ಆಯೋಗದ ಹೇಳಿಕೆ ತಿಳಿಸಿದೆ.

ಸುಭಾಷಿತ

ಚಿನ್ನದ ಅಸಲಿಯತ್ತನ್ನು ಪರೀಕ್ಷಿಸಲು ಅದನ್ನು ಬೆಂಕಿಯಲ್ಲಿ ಹಾಕಿ ಕಾಯಿಸುತ್ತಾರೆ. ಅದೇ ರೀತಿ, ವ್ಯಕ್ತಿಗಳ ಮೇಲೆ ಬರುವ ಆಪಾದನೆಗಳು ಅವರ ಅಸಲಿಯತ್ತನ್ನು ಪರೀಕ್ಷಿಸುತ್ತವೆ.

–ಚಾಣಕ್ಯ

ಗುಜರಾತ್‌ನಲ್ಲಿ ಎಐಸಿಸಿ ಅಧಿವೇಶನ ಪಕ್ಷಕ್ಕೆ ಹೊಸ ಆಲೋಚನೆ ಬೇಕು

ಕಾಂಗ್ರೆಸ್ ಪಕ್ಷವು ಈಚಿನ ಕೆಲವು ವರ್ಷಗಳಿಂದ ಎದುರಿಸುತ್ತಿರುವ ಸೈದ್ಧಾಂತಿಕ, ರಾಜಕೀಯ ಹಾಗೂ ನಾಯಕತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳು ಅಹಮದಾಬಾದ್‌ನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಅಧಿವೇಶನದ ನಂತರವೂ ಹಾಗೇ ಉಳಿದುಕೊಂಡಿವೆ. ಪಕ್ಷವು ಬಹಳ ಹಿನ್ನಡೆ ಕಂಡಿರುವ ಸಂದರ್ಭದಲ್ಲಿ ಅಧಿವೇಶನ ನಡೆಯಿತು, ಅಲ್ಲಿ ಕೆಲವು ಚರ್ಚೆಗಳು ಆದವು, ಆತ್ಮಾವಲೋಕನ ಸಹ ನಡೆಯಿತು. ಈಗ ಪಕ್ಷವು ಮೂರು ರಾಜ್ಯಗಳಲ್ಲಿ ಮಾತ್ರ ಸರ್ಕಾರದ ನೇತೃತ್ವ ವಹಿಸಿದೆ. ಕಳೆದ ವರ್ಷದ ಲೋಕಸಭಾ ಚುನಾವಣೆ ನಂತರ ನಡೆದ ಎಲ್ಲ ಚುನಾವಣೆಗಳಲ್ಲಿ ಪಕ್ಷವು ಕಳಪೆ ಸಾಧನೆ ತೋರಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷವು ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿತಾದರೂ ನಂತರದ ಚುನಾವಣೆಗಳಲ್ಲಿ ಬಿಜೆಪಿಯು ಮತ್ತೆ ಬಲ ಹೆಚ್ಚಿಸಿಕೊಂಡ ಪರಿಣಾಮವಾಗಿ ಲೋಕಸಭಾ ಚುನಾವಣೆಯಲ್ಲಿನ ಕಾಂಗ್ರೆಸ್ಸಿನ ಸಾಧನೆಯು ಗೌಣವಾಗಿದೆ. ಮೂರು ದಶಕಗಳಿಗಿಂತ ಹೆಚ್ಚಿನ ಅವಧಿಯಿಂದ ಪಕ್ಷವು ಅಧಿಕಾರದಿಂದ ಹೊರಗಿರುವ ರಾಜ್ಯದಲ್ಲಿ ಎಐಸಿಸಿ ಅಧಿವೇಶನ ಆಯೋಜಿಸಿದ್ದಕ್ಕೆ ಒಂದಿಷ್ಟು ಸಾಂಕೇತಿಕತೆ ಇದೆ. ಗುಜರಾತ್ ರಾಜ್ಯವು ಈಗಿನ ಮಟ್ಟಿಗೆ ಬಿಜೆಪಿಯ ಪ್ರಾಬಲ್ಯದ ಸಂಕೇತ. ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು 'ತನ್ನವರು' ಎಂದು ದೃಢವಾಗಿ ಹೇಳಲು ಸಹ ಕಾಂಗ್ರೆಸ್ ಯತ್ನಿಸಿತು. ಆದರೆ ಕಾಂಗ್ರೆಸ್ಸಿನ ಸಮಸ್ಯೆಯು ಸಂಕೇತಗಳ ಆಚೆಗೂ ಇದೆ.

ಪಕ್ಷವು ಮತ್ತೆ ಪುಟಿದೆದ್ದು ಬರಬೇಕು ಎಂದಾದರೆ ಅದು ತನ್ನ ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಬೇಕು, ದ್ವಂದ್ವಗಳನ್ನು ನಿವಾರಿಸಿಕೊಳ್ಳಬೇಕು

ಕಾಂಗ್ರೆಸ್ಸಿನ ಸೈದ್ಧಾಂತಿಕ ನಿಲುವನ್ನು ಬಿಜೆಪಿಯು ಬಹಳ ಆಕ್ರಮಣಕಾರಿಯಾಗಿ ಪ್ರಶ್ನಿಸುತ್ತಿದೆ. ಹಿಂದೆ ಇದ್ದಂತಹ ರಾಜಕೀಯ ಪ್ರಾಬಲ್ಯವು ಕಾಂಗ್ರೆಸ್ಸಿಗೆ ಈಗ ಇಲ್ಲ. ಕಾಂಗ್ರೆಸ್ ಪಕ್ಷವು ಪ್ರತಿಪಾದಿಸುವುದಾಗಿ ಹೇಳುವ ಕೆಲವು ಮೌಲ್ಯಗಳಾದ ಧರ್ಮನಿರಪೇಕ್ಷ ನಿಲುವು, ಬಹುತ್ವ, ಒಕ್ಕೂಟ ವ್ಯವಸ್ಥೆಗೆ ಗೌರವ, ರಾಷ್ಟ್ರೀಯತೆ ಮತ್ತು ಒಳಗೊಳ್ಳುವಿಕೆಯಂಥವುಗಳನ್ನು ಬಿಜೆಪಿಯು ಭಿನ್ನ ಬಗೆಯಲ್ಲಿ ವ್ಯಾಖ್ಯಾನಿಸಿದೆ. ಕೆಲವು ಮೌಲ್ಯಗಳನ್ನು ಬಿಜೆಪಿಯು ತನ್ನದೆಂಬುದಾಗಿ ಬಿಂಬಿಸಿಕೊಂಡಿದೆ. ಧರ್ಮನಿರಪೇಕ್ಷ ನಿಲುವನ್ನು ಬಿಜೆಪಿಯು ತುಷ್ಟೀಕರಣ ಎಂದು ಚಿತ್ರಿಸಿದೆ, ರಾಷ್ಟ್ರೀಯತೆಗೆ ಈಗ ಹೆಚ್ಚಿನ ಬಲ ಸಿಕ್ಕಿದೆ. ಹಿಂದುಳಿದ ವರ್ಗಗಳು ಹಾಗೂ ಇನ್ನೂ ದುರ್ಬಲವಾಗಿಯೇ ಇರುವ ಕೆಲವು ಸಮುದಾಯಗಳ ಬೆಂಬಲವು ಕಡಿಮೆ ಆಗಿದ್ದುದು ಕಾಂಗ್ರೆಸ್ಸಿನ ಅವನತಿಗೆ ಒಂದು ಕಾರಣ. ಬಿಜೆಪಿ ಹಾಗೂ ಕೆಲವು ಪ್ರಾದೇಶಿಕ ಪಕ್ಷಗಳು ಈ ವರ್ಗಗಳ ಬೆಂಬಲವನ್ನು ಕಾಂಗ್ರೆಸ್ಸಿನಿಂದ ಕಿತ್ತುಕೊಂಡಿವೆ, ತಮ್ಮದಾಗಿಸಿಕೊಂಡಿವೆ. ದೇಶದ ಎಲ್ಲೆಡೆ ಜಾತಿ ಜನಗಣತಿ ನಡೆಯಬೇಕು, ಸಾಮಾಜಿಕ ನ್ಯಾಯಕ್ಕೆ ಆದ್ಯತೆ ಸಿಗಬೇಕು ಎಂದು ಕಾಂಗ್ರೆಸ್ ಹೇಳುತ್ತಿರುವುದರ ಹಿಂದೆ ಹಿಂದುಳಿದ ವರ್ಗಗಳ ಬೆಂಬಲವನ್ನು ಮತ್ತೆ ತನ್ನದಾಗಿಸಿಕೊಳ್ಳುವ ಉದ್ದೇಶ ಇದೆ. ಆದರೆ, ಇಂಥದ್ದೊಂದು ರಾಜಕೀಯ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತರುವ ಸಾಮರ್ಥ್ಯವು ಕಾಂಗ್ರೆಸ್ಸಿಗೆ ಇದೆಯೇ ಎಂಬ ಅನುಮಾನವೂ ಇದೆ. ಜಾತಿ ಜನಗಣತಿಯ ವಿಚಾರವು ಈಚೆಗೆ ನಡೆದ ಯಾವುದಾದರೂ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ನೆರವಿಗೆ ಬಂದಿದೆಯೇ ಎಂಬುದು ಚರ್ಚಾರ್ಹ. 'ಇಂಡಿಯಾ' ಮೈತ್ರಿಕೂಟದ ಜೊತೆ ಕಾಂಗ್ರೆಸ್ಸಿನ ಸಂಬಂಧವು ಈಗ ಅಸ್ಪಷ್ಟವಾಗಿದೆ.

ಕಾಂಗ್ರೆಸ್ಸಿನ ನಾಯಕತ್ವ ಹಾಗೂ ಸಂಘಟನೆಯ ಹಂತಗಳಲ್ಲಿ ಹಲವು ಸವಾಲುಗಳು ಇವೆ. ಪಕ್ಷದ ರಾಜಕೀಯ ಸಂದೇಶವನ್ನು ಜನರಿಗೆ ಮುಟ್ಟಿಸಲು ದೇಶದ ಹಲವೆಡೆ ಕಾಂಗ್ರೆಸ್ಸಿಗೆ ತಳಮಟ್ಟದ ಕಾರ್ಯಕರ್ತರಿಲ್ಲ. ಈಗ ಜಿಲ್ಲಾ ಮಟ್ಟದ ನಾಯಕತ್ವದ ಮೇಲೆ ಗಮನ ನೀಡುವ ಕಾರ್ಯತಂತ್ರ ಪಾಲಿಸಲು ಪಕ್ಷ ಚಿಂತನೆ ನಡೆಸಿದೆ. ತಳಮಟ್ಟದಿಂದ ಹೊಸ ನಾಯಕತ್ವವನ್ನು ಬೆಳೆಸಲು ಪಕ್ಷ ಚಿಂತನೆ ನಡೆಸಿದ್ದರೆ ಅದು ಒಳ್ಳೆಯದೇ. ಆದರೆ ತೀರಾ ಕೇಂದ್ರೀಕೃತವಾಗಿರುವ, ಅಧಿಕಾರದ ಶ್ರೇಣಿಗಳನ್ನು ಹೊಂದಿರುವ ಮತ್ತು ಗುಂಪುಗಳಾಗಿ ಒಡೆದುಹೋಗಿರುವ ಪಕ್ಷದಲ್ಲಿ ಈ ಕಾರ್ಯತಂತ್ರದಿಂದಾಗಿ ಅನಿರೀಕ್ಷಿತ ಪರಿಣಾಮಗಳು ಉಂಟಾಗಬಹುದು. ಪಕ್ಷದಲ್ಲಿ ನಾಯಕತ್ವಕ್ಕೆ ಸಂಬಂಧಿಸಿದಂತೆ ಇನ್ನೂ ಒಂದು ಮುಖ್ಯವಾದ ವಿಚಾರ ಇದೆ. ಕುಟುಂಬಕೇಂದ್ರಿತವಾದ ನಾಯಕತ್ವವು ರಾಜಕೀಯದ ಬಗ್ಗೆ ಅರಿವು ಇರುವವರಲ್ಲಿ ವಿಶ್ವಾಸ ಮೂಡಿಸುವಂತೆ ಇಲ್ಲ. ಆದರೆ ಈ ನಾಯಕತ್ವವನ್ನು ಬಿಟ್ಟುಕೊಡಲು ಪಕ್ಷಕ್ಕೆ ಸಾಧ್ಯವಿಲ್ಲ. ಜನರಿಗೆ ಇನ್ನಷ್ಟು ಹತ್ತಿರವಾಗಲು ಪಕ್ಷವು ಹೊಸ ಆಲೋಚನೆಗಳನ್ನು ಮತ್ತು ಸಂಕಥನಗಳನ್ನು ಕಂಡುಕೊಳ್ಳಲು ಇನ್ನೂ ತಿಣುಕಾಡುತ್ತಿದೆ. ಪಕ್ಷವು ಮತ್ತೆ ಪುಟಿದೆದ್ದು ಬರಬೇಕು ಎಂದಾದರೆ, ಅದು ತನ್ನ ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಬೇಕು, ದ್ವಂದ್ವಗಳನ್ನು ನಿವಾರಿಸಿಕೊಳ್ಳಬೇಕು.

ದಿನದ ಟ್ವೀಟ್

ಮೆಟ್ರೊ ಕಾಮಗಾರಿ: ಸುರಕ್ಷೆಗೆ ಆದ್ಯತೆ ಇರಲಿ

ಮೆಟ್ರೊ ರೈಲು ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ಸುರಕ್ಷಾ ಕ್ರಮ ಬಹುತೇಕ ಇಲ್ಲವೇ ಇಲ್ಲ ಎನ್ನುವಂತಿದೆ. ಈ ಪ್ರಕರಣ ನಡೆಯಬಾರದಿತ್ತು. ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಎಲ್ಲಾ ಸ್ಥಳಗಳಲ್ಲಿ ಬಿಎಂಆರ್‌ಸಿಎಲ್ ತಕ್ಷಣವೇ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು.

(ಬೆಂಗಳೂರಿನಲ್ಲಿ 'ನಮ್ಮ ಮೆಟ್ರೊ' ರೈಲು ಕಾಮಗಾರಿ ನಡೆಯುತ್ತಿದ್ದ ಸಂದರ್ಭದಲ್ಲಿ ಸಂಭವಿಸಿದ ಅವಘಡದಲ್ಲಿ ಆಟೊ ಚಾಲಕರೊಬ್ಬರು ಸಾವಿಗೀಡಾಗಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ರವೀಂದ್ರ ಗುಡಿ

ಕಿಡಿನುಡಿ

ಹಲ್ಲೆಗೆ ಒಳಗಾದ ಬಾಲಕ ಸುರಕ್ಷಿತವಾಗಿ ಇದ್ದಾನೆ ಎಂದು ನಂಬೋಣ. ಇದು ಒಂದು ಗಂಭೀರವಾದ ಅಪರಾಧ. ತಪ್ಪಿತಸ್ಥರನ್ನು ಕಠಿಣವಾದ ಕಾನೂನು ಕ್ರಮಕ್ಕೆ ಒಳಪಡಿಸಬೇಕು.



(ಬೆಂಗಳೂರು ಹೊರವಲಯದ ಪುನರ್ವಸತಿ ಕೇಂದ್ರವೊಂದರಲ್ಲಿ ವಾರ್ಡನ್ ಬಟ್ಟೆಗಳನ್ನು ಒಗೆಯಲು ಮತ್ತು ಶೌಚಾಲಯ ಸ್ವಚ್ಛಗೊಳಿಸಲು ನಿರಾಕರಿಸಿದ ಬಾಲಕನ ಮೇಲೆ ಅಲ್ಲಿನ ನೌಕರನೊಬ್ಬ ದೊಣ್ಣೆಯಿಂದ ಹಲ್ಲೆ ನಡೆಸಿರುವ ಮಾಧ್ಯಮ ವರದಿಗೆ ಪ್ರತಿಕ್ರಿಯೆ)

ಅಪರ್ಣಾ ವಾಲಿ

25 ವರ್ಷಗಳ ಹಿಂದೆ

ಸೋಮವಾರ, 17-4-2000

• ಕ್ರಿಕೆಟ್ ಬಾಜಿಗೆ ಶಾಸನಬದ್ಧ ಸ್ಥಾನ ಇಲ್ಲ: ವಾಜಪೇಯಿ

ನವದೆಹಲಿ, ಏ. 16– ಕ್ರಿಕೆಟ್ ಬಾಜಿ ಪದ್ಧತಿಯನ್ನು ಶಾಸನಬದ್ಧಗೊಳಿಸುವ ಯಾವುದೇ ಉದ್ದೇಶವು ಸರ್ಕಾರದ ಮುಂದಿಲ್ಲ ಎಂಬುದಾಗಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಕ್ರಿಕೆಟ್ ಬಾಜಿ ಕಟ್ಟುವ ಹಾವಳಿಯನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು ಎನ್ನುವುದು ನಮ್ಮ ಉದ್ದೇಶ ಎಂದು ಅವರು ಇಂದು ಇಲ್ಲಿ ಮುಕ್ತಾಯಗೊಂಡ ಎರಡು ದಿನಗಳ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು.

ದಕ್ಷಿಣ ಆಫ್ರಿಕಾದ ಕ್ರಿಕೆಟ್ ಮೋಸದಾಟದಲ್ಲಿನ ವಂಚನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಬೆಟ್ಟಿಂಗ್ ಪದ್ಧತಿಯನ್ನೇ ಶಾಸನಬದ್ಧಗೊಳಿಸುವ ಬಗೆಗೆ ಸರ್ಕಾರ ಪರಿಶೀಲಿಸುವುದಾಗಿ ಕ್ರೀಡಾ ಸಚಿವ ಸುಖ್‌ದೇವ್ ಸಿಂಗ್ ದಿಂಡ್ಸಾ ಅವರು ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದುದನ್ನು ಪ್ರಧಾನಿ ಪರೋಕ್ಷವಾಗಿ ಪ್ರಸ್ತಾಪಿಸಿದರು.

• ಕಲ್ರಾ ನಿವಾಸದಿಂದ ದಾಖಲೆ ವಶ

ನವದೆಹಲಿ, ಏ. 16 (ಯುಎನ್‌ಐ)– ಮೋಸದ ಕ್ರಿಕೆಟ್ ಆಟದಲ್ಲಿ ಶಾಮೀಲಾಗಿದ್ದಾರೆಂಬುದಕ್ಕೆ ಸಾಕ್ಷಿಯಾಗಬಲ್ಲಂತಹ ಮಹತ್ವದ ದಾಖಲೆಗಳನ್ನು ಹಗರಣದ ಪ್ರಮುಖ ಆರೋಪಿ ರಾಜೇಶ್ ಕಲ್ರಾ ಅವರ ನಿವಾಸದಿಂದ ತಾನು ವಶಪಡಿಸಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ಹೇಳಿದೆ.

ನಿರ್ದೇಶನಾಲಯದ ವಿಶೇಷ ಪ್ರಾಸಿಕ್ಯೂಟರ್ ಸುಭಾಷ್ ಬನ್ಸಲ್ ಅವರು ಇಂದು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿ.ಕೆ.ಖನ್ನಾ ಅವರ ಮುಂದೆ ನೀಡಿದ ಹೇಳಿಕೆ ವೇಳೆ ಇದನ್ನು ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 17-4-1975

• ರಾಧಾಕೃಷ್ಣನ್ ಅವರ ನಿಧನ

ಮದರಾಸ್, ಏ. 16– ಮಾಜಿ ರಾಷ್ಟ್ರಪತಿ ಡಾ. ಎಸ್.ರಾಧಾಕೃಷ್ಣನ್ ಅವರು ಇಂದು ರಾತ್ರಿ 12.45ಕ್ಕೆ ನಿಧನ ಹೊಂದಿದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಡಾ. ರಾಧಾಕೃಷ್ಣನ್ ಅವರು ಕಳೆದ ಎಂಟು ತಿಂಗಳಿಂದ ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಕಳೆದ ಹತ್ತು ದಿನಗಳಿಂದ ಅವರ ಹೃದಯ ದುರ್ಬಲವಾಗಿತ್ತು.

• ತಂಪು ಹಸಿರಿಗೇಕೆ ಈ ವಿಪತ್ತು?

ಬೆಂಗಳೂರು, ಏ. 16– ಹಸಿರಿನ ತಾಣವಾಗಿ ಕಬ್ಬನ್‌ಪಾರ್ಕಿನ ಬೆಳವಣಿಗೆಯನ್ನು ಮೂರು ನಾಲ್ಕು ತಲೆಮಾರಿನವರು ಕಂಡಿರಬಹುದು. ಅವರು ಅಲ್ಲಿನ ನೆರಳಿನ ಆಶ್ರಯವನ್ನು ಪಡೆದಿರಲೇಬೇಕು. ಆದರೆ ಇನ್ನೆಷ್ಟು ತಲೆಮಾರಿನವರೆಗೆ ಅದು ಮುಂದುವರಿದೀತು?

ಕಟ್ಟಡ ನಿರ್ಮಾಣಕ್ಕಾಗಿ ಪಾರ್ಕಿನ ಜಮೀನನ್ನು ಕಬಳಿಸುವ ಕಾರ್ಯ ಅವ್ಯಾಹತವಾಗಿ ನಡೆದಿರುವಾಗ, ಭವಿಷ್ಯದಲ್ಲಿ ಪಾರ್ಕಿನ ಗಾತ್ರ ಯಾವ ಪ್ರಮಾಣಕ್ಕೆ ಇಳಿದೀತೆಂಬ ಸಂಶಯ ಸ್ವಾಭಾವಿಕ.

ನಗರದ ಕೇಂದ್ರ ಭಾಗದಲ್ಲಿ 230 ಎಕರೆಗಳಷ್ಟು ವಿಸ್ತಾರವಾಗಿ ಚಾಚಿಕೊಂಡಿರುವ ಕಬ್ಬನ್‌ಪಾರ್ಕ್, ಕ್ರಮೇಣ ಕಟ್ಟಡಗಳ ಆಕ್ರಮಣಕ್ಕೆ ಒಳಗಾಗುತ್ತಿದೆ. ಕಬ್ಬನ್‌ಪಾರ್ಕಿನಲ್ಲಿ ಹೊಸದಾಗಿ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಕೊಡಬಾರದು ಎಂಬ, ಹಲವು ವರ್ಷಗಳಿಂದ ಜಾರಿಯಲ್ಲಿರುವ ಸರ್ಕಾರದ ತೀರ್ಮಾನಕ್ಕೆ ತಿಲಾಂಜಲಿ ನೀಡಲಾಗಿದೆ.

ಅಧಿಕಾರದ ನೆಲೆ ಕುಸಿಯುವ ಭೀತಿಯಲ್ಲಿ ಪ್ರಬಲ ಸಮುದಾಯಗಳು

ಜಾತಿ ದತ್ತಾಂಶಕ್ಕೆ ವಿರೋಧ ಏಕೆ?

ಗತಿಬಿಂಬ

• ವೈ.ಗ. ಜಗದೀಶ್

2019: ಲೋಕಸಭೆ ಚುನಾವಣೆ ಹೊತ್ತಿನೊಳಗೆ ಪ್ರಧಾನಿ ನರೇಂದ್ರ ಮೋದಿ ಅವರು, ಸಾಮಾನ್ಯ ಪ್ರವರ್ಗಕ್ಕೆ ಸೇರಿದ ಜಾತಿಗಳಲ್ಲಿನ ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10ರಷ್ಟು ಮೀಸಲಾತಿ ಘೋಷಿಸಿದರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 4ರಷ್ಟು ಇರಬಹುದು ಎಂದು ಅಂದಾಜಿಸಲಾದ ಬ್ರಾಹ್ಮಣ, ವೈಶ್ಯ ಸೇರಿ ಕೆಲವೇ ಜಾತಿಗಳ ಜನರಿಗಷ್ಟೇ ಇದರ ಲಾಭ. ಮೀಸಲಾತಿ ನೀಡುವ ಮೊದಲು ಯಾವುದೇ ಸಮೀಕ್ಷೆಯನ್ನೂ ನಡೆಸಿರಲಿಲ್ಲ. ಸುಪ್ರೀಂ ಕೋರ್ಟ್ ಕೂಡ ಈ ತೀರ್ಮಾನವನ್ನು ಒಪ್ಪಿಕೊಂಡಿತು.

2023: ಕರ್ನಾಟಕ ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳ ಮುನ್ನ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಹಿಂದುಳಿದ ವರ್ಗಗಳ ಪ್ರವರ್ಗ–2ಬಿ ಅಡಿ ಮುಸ್ಲಿಮರಿಗೆ ನೀಡಲಾಗಿದ್ದ ಶೇ 4ರಷ್ಟು ಮೀಸಲಾತಿ ರದ್ದುಪಡಿಸಿ, ಅದನ್ನು ಒಕ್ಕಲಿಗ ಹಾಗೂ ಲಿಂಗಾಯತರಿಗೆ ತಲಾ ಶೇ 2ರಷ್ಟು ಮರುಹಂಚಿಕೆ ಮಾಡಿತು. ಆಗಲೂ ಯಾವುದೇ ಸಮೀಕ್ಷೆಯ ದಾಖಲೆಗಳಿರಲಿಲ್ಲ.

2025: ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ನಡೆಸಿದ 'ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ 'ದತ್ತಾಂಶ ಅಧ್ಯಯನ ವರದಿ'ಯು 2024ರ ಫೆಬ್ರುವರಿಯಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಯಿತು. ಇದನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ಸ್ವೀಕರಿಸಲಾಗಿದೆ. ವರದಿಯ ಪ್ರಮುಖಾಂಶ ಹಾಗೂ ಶಿಫಾರಸುಗಳೇನು ಎಂಬುದನ್ನು ಮಾಧ್ಯಮಗಳು ವರದಿ ಮಾಡಿವೆ.

ಹಿಂದುಳಿದ ವರ್ಗಗಳ ಆಯೋಗದ ವರದಿಯ ಪರಿಶೀಲನೆ, ಪರಿಷ್ಕರಣೆ, ಅಂಗೀಕಾರ ಅಥವಾ ತಿರಸ್ಕಾರದ ಅವಕಾಶಗಳು ಸರ್ಕಾರದ ಮುಂದಿವೆ. ಹಾಗಿದ್ದರೂ ರಾಜಕೀಯವಾಗಿ ಪ್ರಭಾವಿಯಾಗಿರುವ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳ ಪ್ರಮುಖರು, ಬಿಜೆಪಿ–ಜೆಡಿಎಸ್‌ನ ಕೆಲವು ನಾಯಕರು ಗದ್ದಲ ಎಬ್ಬಿಸಿದ್ದಾರೆ. ಯಾವುದೇ ಬೇಡಿಕೆ ಅಥವಾ ಸಮೀಕ್ಷೆ ಇಲ್ಲದೆ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡಿದಾಗ, ತಮ್ಮ ಪಾಲನ್ನು ಕಸಿದುಕೊಳ್ಳಲಾಗುತ್ತಿದೆ ಎಂಬ ಕ್ಷೀಣ ಸ್ವರವನ್ನೂ ಈ ಸಮುದಾಯಗಳವರು ಹೊರಡಿಸಿರಲಿಲ್ಲ. ಈಗ ಜಾತಿ ಜನಗಣತಿಯ ದತ್ತಾಂಶ ಹೊರಬೀಳುತ್ತಿದ್ದಂತೆ, 'ಎಲ್ಲರ ಮೀಸಲಾತಿಯನ್ನೇ ಕಿತ್ತುಕೊಳ್ಳಲು ಸಿದ್ದರಾಮಯ್ಯ ಮುಂದಾಗಿದ್ದು, ಅವರೇ ವರದಿ ಬರೆಸಿದ್ದಾರೆ' ಎಂದು ಹುಯಿಲೆಬ್ಬಿಸಿದ್ದಾರೆ.

ಸಮೀಕ್ಷೆ ವೇಳೆ 1.35 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಭೇಟಿ ನೀಡಿ, 5.98 ಕೋಟಿ ಜನರ ಮಾಹಿತಿ ಸಂಗ್ರಹಿಸಲಾಗಿದೆ. ಸಮೀಕ್ಷೆಯಿಂದ 37 ಲಕ್ಷ ಜನ ಹೊರಗೆ ಉಳಿದಿದ್ದಾರೆ ಎಂದು ಆಯೋಗವೇ ಹೇಳಿದೆ. ಆಗ ಸಂಗ್ರಹಿಸಲಾದ ದತ್ತಾಂಶದ ಅಷ್ಟೂ ವಿವರಗಳ ದಾಖಲೆಗಳನ್ನು ಆಯೋಗವು ಸರ್ಕಾರಕ್ಕೆ ಸಲ್ಲಿಸಿದೆ. 'ಸಮೀಕ್ಷೆ ನಡೆಸಲು ಮನೆಗಳಿಗೆ ಭೇಟಿ ನೀಡಿಯೇ ಇಲ್ಲ, ದತ್ತಾಂಶ ಸಂಗ್ರಹಿಸಿಯೇ ಇಲ್ಲ' ಎಂದು ಅಪಪ್ರಚಾರ ನಡೆಸುವುದು ಜನರನ್ನು ದಿಕ್ಕು ತಪ್ಪಿಸುವ ಕ್ರಮ.

1931ರ ಬಳಿಕ ದೇಶದಲ್ಲಿಯೇ ಜಾತಿವಾರು ಜನಗಣತಿ ನಡೆದಿಲ್ಲ. 2005ರಲ್ಲಿ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು, ಈ ಮಾದರಿಯ ಸಮೀಕ್ಷೆಯೊಂದನ್ನು ನಡೆಸಲು ಮುಂದಾದರು. ಪ್ರಾಯೋಗಿಕವಾಗಿ ಕರ್ನಾಟಕದಲ್ಲಿ ಸಮೀಕ್ಷೆ ನಡೆಸುವ ನಿರ್ಧಾರ ಕೈಗೊಂಡ ಕೇಂದ್ರ, ಅದಕ್ಕಾಗಿ ಅನುದಾನ ನೀಡಿತು. ಆಗ ಎನ್. ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ, ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯ ಅವರು ರಾಜ್ಯದ ಪಾಲಿನ ಅನುದಾನ ಮಂಜೂರು ಮಾಡಿದರು. 2013ರಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ, ಇದಕ್ಕೆ ಅನುದಾನವನ್ನೂ ತೆಗೆದಿರಿಸಿದರು. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಯನ್ನು ನಡೆಸಿತು. ಸಂವಿಧಾನಬದ್ಧ ಆಯೋಗವೊಂದು ಸರ್ಕಾರಿ ನೌಕರರನ್ನೇ ನಿಯೋಜಿಸಿ ನಡೆಸಿದ ಸಮೀಕ್ಷೆಯೊಂದನ್ನು ಸುಳ್ಳು ಎನ್ನುವುದು ಸಂವಿಧಾನಕ್ಕೆ ಮಾಡುವ ಅಪಚಾರ.

ಜನಗಣತಿ ಜತೆ ಜಾತಿಗಣತಿಯನ್ನೂ ನಡೆಸುವುದು ಕೇಂದ್ರ ಸರ್ಕಾರದ ಕರ್ತವ್ಯ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಜಾತಿಗಳ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ವಾಸ್ತವಿಕ ಚಿತ್ರಣ ತಿಳಿಯಬೇಕಾದರೆ ಈ ತೆರನಾದ ಸಮೀಕ್ಷೆ ಅಗತ್ಯ. ನೈಜ ದತ್ತಾಂಶಗಳ ಆಧಾರದಲ್ಲಿ ಆಯಾ ಸಮುದಾಯದ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿಕೊಂಡು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ನೀಡಬೇಕು ಎಂಬ ಷರತ್ತನ್ನು ಸುಪ್ರೀಂ ಕೋರ್ಟ್ ವಿಧಿಸಿದೆ. ಹೀಗಿರುವಾಗ, ಸಮೀಕ್ಷೆಯನ್ನು ವಿರೋಧಿಸಿದರೆ ಸುಪ್ರೀಂ ಕೋರ್ಟ್ ಆದೇಶವನ್ನೂ ವಿರೋಧಿಸಿದಂತೆ ಆಗುತ್ತದೆ.

ಹಾಗೆಂದು ಸಮೀಕ್ಷೆಯಲ್ಲಿ ಲೋಪಗಳೂ ಇಲ್ಲವೆಂದಲ್ಲ. ಸಮೀಕ್ಷೆ ನಡೆಯುತ್ತಿದ್ದಾಗ, ನಿರ್ದಿಷ್ಟ ಹೆಸರನ್ನಷ್ಟೇ ಉಲ್ಲೇಖಿಸಿ, ಉಪಪಂಗಡದ ಹೆಸರು ಸೇರಿಸಬೇಡಿ ಎಂದು ಆಯಾ ಸಮುದಾಯದ ಮುಖಂಡರು ಸೂಚಿಸಿದರೆ, ಇನ್ನು ಕೆಲವರು, ಉಪಪಂಗಡ ಅಥವಾ ಉಪಜಾತಿ ಹೆಸರನ್ನು ಉಲ್ಲೇಖಿಸಿ ಎಂದರು. ಗಣತಿದಾರರು ಮನೆಗೆ ಬಂದಾಗ, ನೀಡಿದ ಮಾಹಿತಿಯಷ್ಟೇ ದತ್ತಾಂಶದಲ್ಲಿ ಉಲ್ಲೇಖವಾಗಿದೆ. ಲಿಂಗಾಯತ, ಒಕ್ಕಲಿಗ ಅಥವಾ ಈಡಿಗ ಜಾತಿಗಳಲ್ಲಿ ಅನೇಕ ಉಪಪಂಗಡಗಳಿವೆ. ನಿರ್ದಿಷ್ಟ ಜಾತಿಯ ಹೆಸರು ಉಲ್ಲೇಖಿಸಿದವರನ್ನಷ್ಟೇ ಈ ಗುಂಪಿನಲ್ಲಿ ಗುರುತಿಸಿದ್ದಾರೆ. ಇದರಿಂದ, ಮೇಲ್ನೋಟಕ್ಕೆ ಜನಾಂಗದ ಒಟ್ಟು ಸಂಖ್ಯೆ ಕಡಿಮೆಯಾಗಿ ಕಾಣಿಸುತ್ತಿದೆ. ಸಮೀಕ್ಷೆ ವೇಳೆಯಲ್ಲೇ ಒಕ್ಕಲಿಗ–ಲಿಂಗಾಯತ ಉಪಪಂಗಡಗಳು ಒಂದೇ ಜಾತಿನಾಮ ಬರೆಸಿದ್ದರೆ, ಈಗ ಅಳುವ ಪ್ರಮೇಯವೇ ಬರುತ್ತಿರಲಿಲ್ಲ.

ಸಮೀಕ್ಷೆಯೊಂದು ಸತ್ಯ ಹೇಳಿದಾಗ, ಇಲ್ಲಿಯವರೆಗೆ 'ದೊಡ್ಡ ಸಂಖ್ಯೆ'ಯಲ್ಲಿ ಇದ್ದೇವೆ ಎಂದು ಭ್ರಮೆ ಹುಟ್ಟಿಸಿ, ಅಧಿಕಾರ ಅನುಭವಿಸುತ್ತಿರುವವರ ನಿಂತ ನೆಲ ಕುಸಿಯುವುದು ಖಚಿತ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸಿಗದೇ ಇರುವ ಸಮುದಾಯಗಳು ತಮ್ಮ ಹಕ್ಕು ಹಾಗೂ ಪ್ರಾತಿನಿಧ್ಯಕ್ಕೆ ಕೂಗೆಬ್ಬಿಸಿದರೆ, ಪ್ರಬಲ ಜಾತಿಗಳ ನಾಯಕರ ಬುಡವೇ ಅಲ್ಲಾಡಲಿದೆ. ತಾವೇ ಪ್ರಬಲ ಎಂದು ಬಿಂಬಿಸಿಕೊಂಡು ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಹಾಗೂ ಕುರುಬ ಸಮುದಾಯದವರು ಏಳು ದಶಕಗಳ ಕಾಲ ಆಳ್ವಿಕೆ ನಡೆಸಿದ್ದಾರೆ. ಈ ಪ್ರಬಲರು ಇನ್ನು ಮುಂದಾದರೂ ಮೀಸಲಾತಿಯ ಗಂಧವನ್ನೇ ಈವರೆಗೆ ಆಸ್ವಾದಿಸದ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯವನ್ನು ಬಿಟ್ಟುಕೊಡಲೇಬೇಕಾದ ಅನಿವಾರ್ಯ ಎದುರಾಗಲಿದೆ. ದಶಕಗಳ ದಬ್ಬಾಳಿಕೆಯಿಂದ ಆಳಿದವರು ಇನ್ನು ಮುಂದೆ ಆಳಿಸಿಕೊಳ್ಳಬೇಕಾಗಿ ಬರುತ್ತದಲ್ಲ ಎಂಬ ಕೊರಗಿನಿಂದ ಈಗ ಸಮೀಕ್ಷೆಯ ವಿರುದ್ಧ ಕೂಗೆಬ್ಬಿಸಿದ್ದಾರೆ.

ಸಮೀಕ್ಷೆಯ ಮಾಹಿತಿಯಂತೆ, ಪರಿಶಿಷ್ಟ ಜಾತಿಯವರು 1.09 ಕೋಟಿ, ಪರಿಶಿಷ್ಟ ಪಂಗಡದವರು 42.81 ಲಕ್ಷದಷ್ಟಿದ್ದಾರೆ. ಲಿಂಗಾಯತ–ವೀರಶೈವರು 76.74 ಲಕ್ಷ, ಒಕ್ಕಲಿಗರು 61.58 ಲಕ್ಷ, ಬ್ರಾಹ್ಮಣರು 15.64 ಲಕ್ಷ ಇದ್ದಾರೆ. ಮುಸ್ಲಿಮರು 75.25 ಲಕ್ಷದಷ್ಟಿದ್ದಾರೆ. ಪ್ರವರ್ಗ 1ಎ, 1ಬಿ ಹಾಗೂ 2ಎ ಸೇರಿ ಹಿಂದುಳಿದವರ ಒಟ್ಟು ಸಂಖ್ಯೆ 1.86 ಕೋಟಿಯಷ್ಟಾಗಲಿದೆ. ಅಂದರೆ, ಪ್ರಬಲ ಜಾತಿಯವರಿಗಿಂತ ಹಿಂದುಳಿದವರು, ಪರಿಶಿಷ್ಟ ಸಮುದಾಯದವರ ಸಂಖ್ಯೆಯೇ ಹೆಚ್ಚಿದೆ. ಹಿಂದುಳಿದವರು, ಮುಸ್ಲಿಮರು, ಪರಿಶಿಷ್ಟರು ಒಟ್ಟಾದರೆ ಪ್ರಬಲ ಜಾತಿಗಳ ಅಧಿಕಾರದ ನೆಲೆ ಸಡಿಲಗೊಳಿಸಬಹುದು.

ಹಾಗೆ ನೋಡಿದರೆ, ಈ ವರದಿಯು ಪ್ರವರ್ಗ 1ರಲ್ಲಿದ್ದ ಅಲೆಮಾರಿ, ಅರೆ ಅಲೆಮಾರಿ ಗುಣಲಕ್ಷಣಗಳಿರುವ ಜಾತಿಯವರಿಗೆ ಆಘಾತಕಾರಿಯಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ 1ರಲ್ಲಿದ್ದ ಸಮುದಾಯಗಳಿಗೆ ಈ ಹಿಂದೆ ಕೆನೆಪದರ ನೀತಿ ಅನ್ವಯವಾಗುತ್ತಿರಲಿಲ್ಲ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಹೊಸದಾಗಿ ಸೃಜಿಸಿರುವ ಪ್ರವರ್ಗ '1ಎ' ಪಟ್ಟಿಯಲ್ಲಿ ಇರುವವರಿಗೆ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಯಲ್ಲಿ ಕೆನೆಪದರ ನೀತಿಯಡಿ ಆದಾಯದ ಮಿತಿ ಹೇರುವಂತೆ ಶಿಫಾರಸು ಮಾಡಿದೆ. ಪ್ರತಿಭಟಿಸಬೇಕಾದ ಸಮುದಾಯ ಇನ್ನೂ ಮೌನದಲ್ಲಿಯೇ ಇದೆ. ತಲಾ ಶೇ 3ರಷ್ಟು ಹೆಚ್ಚುವರಿ ಮೀಸಲಾತಿ ದಕ್ಕಲಿರುವ ಒಕ್ಕಲಿಗ–ಲಿಂಗಾಯತರು ಮಾತ್ರ ಆಕ್ರೋಶ ಹೊರಹಾಕುತ್ತಿದ್ದಾರೆ. ಇದು ನಿಜಕ್ಕೂ ಚೋದ್ಯ.

ಕೊನೆಯದಾಗಿ, ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಹಾಗೂ ಸದಸ್ಯರ ನೇಮಕವಾಗಿದ್ದು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ. ಎಚ್. ಕಾಂತರಾಜ ಆಯೋಗದ ದತ್ತಾಂಶವನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಿದ್ದು ಇದೇ ಆಯೋಗ. ವಿಚಿತ್ರವೆಂದರೆ, ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ರಚನೆಯಾಗಿದ್ದ ಆಯೋಗದ ವರದಿ ಅವೈಜ್ಞಾನಿಕ ಹಾಗೂ ಅದನ್ನು ಕಸದಬುಟ್ಟಿಗೆ ಹಾಕಿ ಎಂದು ಬಿಜೆಪಿಯ ನಾಯಕರೇ ಏರುಧ್ವನಿಯಲ್ಲಿ ಆಗ್ರಹಿಸುತ್ತಿದ್ದಾರೆ. ಇದನ್ನು ರಾಜಕೀಯ ಎನ್ನಬೇಕೇ? ಕುಚೋದ್ಯ ಎನ್ನಬೇಕೇ? ಕಾಲವೇ ನಿರ್ಣಯಿಸಬೇಕು.

ಚುರುಮುರಿ

ಬಡ ಮನುಷ್ಯ ಜಾತಿ!

• ಗುರು ಪಿ.ಎಸ್.

'ಸರ್, ನನ್ನ ಜಾತಿ ಯಾವುದಿರಬಹುದು ಹೇಳಿ...' ವಿಜಿಯನ್ನು ಕೇಳಿದ ಮುದ್ದಣ್ಣ.

'ನನ್ನ ಜಾತಿ ಯಾವುದೋ ಅದೇ ನಿನ್ನ ಜಾತಿ'.

'ಹಾಗಾದರೆ, ನಿಮ್ಮ ಜಾತಿ ಯಾವುದು?'

'ನಿನ್ನ ಜಾತಿ ಯಾವುದೋ ಅದೇ ನನ್ನ ಜಾತಿ'.

'ಏನೋ ದೊಡ್ಡ ವೇದಾಂತಿಯಂತೆ ಹೇಳ್ತಿದ್ದೀರಲ್ಲ ಸರ್, ಸರಿಯಾಗಿ ಹೇಳಿ'.

'ನಮ್ಮದು ಜಾತ್ಯತೀತ ದೇಶ ಕಣಪ್ಪ'.

'ಅಂದ್ರೆ?'

'ಅಂದ್ರೆ ಎಲ್ಲ ಜಾತಿ, ಧರ್ಮಗಳನ್ನ ಸಮಾನವಾಗಿ ನೋಡುವ ದೇಶ ಅಂತ ಅರ್ಥ'.

'ನಮ್ಮ ದೇಶದಲ್ಲಿ ಒಬ್ಬರಾದರೂ ಹಾಗೆ ನಡೆದುಕೊಳ್ತಿದ್ದಾರ ಈಗ?'

'ಯಾಕ್ ನಡೆದುಕೊಳ್ತಿಲ್ಲ, ಜಾತಿ ಜನಗಣತಿ ವೇಳೆ ಸುಮಾರು ಒಂದೂವರೆ ಲಕ್ಷದಷ್ಟು ಜನ ತಮ್ಮ ಜಾತಿ ಯಾವುದು ಅಂತ ಹೇಳಿಕೊಂಡೇ ಇಲ್ಲ. ನಾವು ಜಾತಿ ಮೀರಿದವರು ಅಂತ ಹೇಳಿದ್ದಾರಂತೆ ಗೊತ್ತಾ?' ಎಂದ ವಿಜಿ.

'ಪಾಪ ಅವರಿಗೆ ಮುಂದೆ ಎದುರಾಗೋ ಕಷ್ಟಗಳ ಅರಿವು ಇದ್ದಂತಿಲ್ಲ' ಎಂದ ಮುದ್ದಣ್ಣ.

'ಅಂಥಾದ್ದು ಏನಾಗಿಬಿಡುತ್ತೆ?'

'ಮಕ್ಕಳನ್ನ ಶಾಲೆಗೆ ಸೇರಿಸೋವಾಗ ಜಾತಿ ಕೇಳ್ತಾರೆ, ಮನೆ ಬಾಡಿಗೆ ಕೊಡುವಾಗಲೂ ಜಾತಿ ಕೇಳ್ತಾರೆ, ಮದುವೆ ಆಗೋವಾಗ, ಎಲೆಕ್ಷನ್‌ಗೆ ನಿಲ್ಲೋವಾಗ, ಅಷ್ಟೇ ಏಕೆ, ಯಾವುದಾದರೂ ಪ್ರಶಸ್ತಿ ಕೊಡೋವಾಗಲೂ ಜಾತಿ ಕೇಳ್ತಾರೆ ಗೊತ್ತಾ?' ಎಂದು ನಕ್ಕ.

'ಅಂದ್ರೆ, ನಿನ್ನ ಪ್ರಕಾರ ಈಗ ಜಾತಿ ಜನಗಣತಿ ಮಾಡಬೇಕೋ ಬೇಡ್ವೋ ?'

'ನೋಡಿ ಸರ್, ನಾನು ಬಲಾಢ್ಯನಾಗಿದ್ದರೆ ಬೇಡ ಅಂತಿದ್ದೆ, ದುರ್ಬಲನಾಗಿದ್ದರೆ ಬೇಕು ಅಂತಿದ್ದೆ' ಒಗಟಿನಂತೆ ಮಾತನಾಡಿದ.

'ಆರ್ಥಿಕ- ಸಾಮಾಜಿಕ ಸ್ಥಿತಿಗತಿ ಬಗ್ಗೆ ಮಾತಾಡು ಅಂದ್ರೆ ಸಬಲ, ದುರ್ಬಲ ಅಂತೆಲ್ಲ ಮಾತಾಡ್ತಿದ್ದೀಯಲ್ಲಪ್ಪ ನೀನು'.

'ಅದೇ ನಾನೂ ಕೇಳ್ತಿರೋದು, ಜನರ ನಿಜವಾದ ಸ್ಥಿತಿಗತಿ ತಿಳಿಸೋ ಬದಲು ಜಾತಿಯನ್ನೇ ಮುಂದು ಮಾಡ್ತಿದ್ದೀರಲ್ಲ ಅಂತ. ಹೋಗ್ಲಿ, ಈಗಲಾದರೂ ನಿಮ್ಮ ಜಾತಿ ಯಾವುದು ಹೇಳಿ'.

'ಬಡ ಮನುಷ್ಯ ಜಾತಿ' ಎಂದ ವಿಜಿ. ತಲೆ ಚಚ್ಚಿಕೊಳ್ಳುತ್ತ ಎದ್ದುಹೋದ ಮುದ್ದಣ್ಣ.

ಸಂಗತ

ಸ್ತ್ರೀ ಸ್ವಾಸ್ಥ್ಯ: ಬೇಕಿದೆ ಪ್ರಾಶಸ್ತ್ಯ

ಹೆಣ್ಣುಮಕ್ಕಳಲ್ಲಿನ ರಕ್ತಸ್ರಾವದ ತೊಂದರೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ

• ಶಿಶಿರ ವಸಿಷ್ಠ

ಈ ಬಾರಿಯ ವಿಶ್ವ ಹಿಮೋಫೀಲಿಯ ದಿನಾಚರಣೆಯು (ಏ. 17) ಬರೀ ಈ ರೋಗಿಗಳ ಬಗೆಗಷ್ಟೇ ಚಿಂತಿಸದೆ, ರಕ್ತಸ್ರಾವದಿಂದ ಬಳಲುವ ಇಡೀ ಜಗತ್ತಿನ ಎಲ್ಲ ಹೆಣ್ಣುಮಕ್ಕಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರಿಗೆ ನೆರವಾಗುವತ್ತ ಗಮನ ನೆಟ್ಟಿದೆ.

ಹದಿವಯಸ್ಕರಾಗುತ್ತಿದ್ದಂತೆ ರಕ್ತಸ್ರಾವ ಅನುಭವಿಸುವ ಹುಡುಗಿಯರು ನಂತರದ ನಾಲ್ಕೈದು ದಶಕಗಳ ಕಾಲ ರಕ್ತಸ್ರಾವ ಸಂಬಂಧಿ ತೊಂದರೆಗಳನ್ನು ಎದುರಿಸುತ್ತಾರೆ. ವಿಶ್ವ ಹಿಮೋಫೀಲಿಯ ಒಕ್ಕೂಟದ ನೇತೃತ್ವದಲ್ಲಿ 'ಆ್ಯಕ್ಸೆಸ್ ಫಾರ್ ಆಲ್- ವಿಮೆನ್ ಆ್ಯಂಡ್ ಗರ್ಲ್ಸ್ ಬ್ಲೀಡ್ ಟೂ' ಎಂಬ ತಿರುಳಿನೊಂದಿಗೆ ಈ ಬಾರಿಯ ಹಿಮೋಫೀಲಿಯ ದಿನಾಚರಣೆ ಜಗತ್ತಿನಾದ್ಯಂತ ನಡೆಯಲಿದೆ. ಅಧ್ಯಯನದ ಪ್ರಕಾರ, ರಕ್ತಸ್ರಾವದ ತೊಂದರೆಗಳಿಂದ ಬಳಲುವವರಿಗೆ ಸಿಗಬೇಕಾದ ರೋಗ ಪತ್ತೆ ವ್ಯವಸ್ಥೆ, ಆರೈಕೆ, ಚಿಕಿತ್ಸೆ, ಮನ್ನಣೆ ಸಿಗುತ್ತಿಲ್ಲ. ಈ ಸಮಸ್ಯೆಯ ಕುರಿತು ಅರಿವು ಮೂಡಿಸಲು ವಿಶ್ವದ ಅನೇಕ ಸಂಘಟನೆಗಳು ದುಡಿಯುತ್ತಿವೆ.

ರಕ್ತಸ್ರಾವದ ತೊಂದರೆ ಇರುವ ಹೆಣ್ಣುಮಕ್ಕಳು ಹಲವು ಬಗೆಯ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಅನುಭವಿಸುತ್ತಾರೆ. ನಗರದ ಸುಶಿಕ್ಷಿತ ಮತ್ತು ಅನುಕೂಲಸ್ಥ ಮಹಿಳೆಯರು ಸೌಲಭ್ಯಗಳಿರುವ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆಯುತ್ತಾರೆ. ಆದರೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸಕಾಲಕ್ಕೆ ಯಾವ ಚಿಕಿತ್ಸೆಯೂ ದೊರಕುವುದಿಲ್ಲ. ಅರಿವಿನ ಕೊರತೆ, ರೋಗಪತ್ತೆ ವಿಳಂಬ, ತಪಾಸಣಾ ಕೇಂದ್ರಗಳ ಕೊರತೆ, ಕಾಯಿಲೆ ವರ್ಗೀಕರಣದ ತೊಂದರೆಗಳು ಕಾಯಿಲೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತವೆ. ಹೆರಿಗೆ ಸಮಯದಲ್ಲಿ ಏರಿಕೆ ಕಾಣುತ್ತಿರುವ ತಾಯಂದಿರು ಹಾಗೂ ಶಿಶುಗಳ ಸಾವುಗಳಿಗೂ ರಕ್ತಸ್ರಾವಕ್ಕೂ ನೇರ ಸಂಬಂಧವಿದೆ. ಮುಟ್ಟಿನ ದಿನಗಳ ಅನಿಯಂತ್ರಿತ ರಕ್ತ ಸ್ರಾವವಲ್ಲದೆ ಶಸ್ತ್ರಚಿಕಿತ್ಸೆ ಮತ್ತು ಗಾಯಗಳಿಂದಲೂ ರಕ್ತಹೀನತೆ ಅನುಭವಿಸುವ ಮಹಿಳೆಯರು ದೈಹಿಕ ನಿಶ್ಶಕ್ತಿಯ ಜೊತೆಗೆ ಮಾನಸಿಕವಾಗಿಯೂ ಬಳಲುತ್ತಾರೆ.

ಅಚ್ಚರಿ ಎಂದರೆ, ಅಮೆರಿಕದಂತಹ ಮುಂದುವರಿದ ದೇಶದಲ್ಲಿ ವಾನ್ ವಿಲೆಬ್ರಾಂಡ್ (ವಿಡಬ್ಲ್ಯುಡಿ- ಒಂದು ಬಗೆಯ ಆನುವಂಶಿಕ ರಕ್ತಸ್ರಾವ) ಕಾಯಿಲೆಯನ್ನು ಖಚಿತವಾಗಿ ಗುರುತಿಸಿ ಚಿಕಿತ್ಸೆ ಶುರು ಮಾಡುವ ವೇಳೆಗೆ ಸರಾಸರಿ 16 ವರ್ಷಗಳಷ್ಟು ವಿಳಂಬವಾಗಿರುತ್ತದೆ! ಮೂಗು, ಕರುಳು, ಗರ್ಭಕೋಶ ಮತ್ತು ಯೋನಿಯಿಂದ ರಕ್ತಸ್ರಾವವಾಗುತ್ತದೆ. ರಕ್ತವನ್ನು ಹೆಪ್ಪುಗಟ್ಟಿಸುವ ವಾನ್ ವಿಲೆಬ್ರಾಂಡ್ ಫ್ಯಾಕ್ಟರ್ (ರಕ್ತವನ್ನು ಹೆಪ್ಪುಗಟ್ಟಿಸುವ ಪ್ರೋಟೀನ್) ಇಲ್ಲದಿದ್ದಾಗ ರಕ್ತಸ್ರಾವವು ಹೆಚ್ಚಿರುತ್ತದೆ. ಈ ಕಾಯಿಲೆಯು ಗಂಡು ಮತ್ತು ಹೆಣ್ಣು ಇಬ್ಬರಲ್ಲೂ ಕಂಡುಬರುತ್ತದೆ. ಇದನ್ನು ಆಂಜಿಯೋ ಹಿಮೋಫೀಲಿಯ ಎಂದೂ ಕರೆಯುತ್ತಾರೆ.

ಜಗತ್ತಿನಾದ್ಯಂತ ನಡೆಯುವ ಬಹುತೇಕ ಆರೋಗ್ಯ ಸಂಬಂಧಿ ಸಂಶೋಧನೆಗಳು ಪುರುಷರ ಆರೋಗ್ಯಕ್ಕೆ ಸಂಬಂಧಿಸಿದಂತೆ ಇರುತ್ತವೆ. 'ಕೆಲವು ರಾಷ್ಟ್ರಗಳಲ್ಲಿ ಅತಿಯಾದ ಸಾಮಾಜಿಕ ಕಟ್ಟುಪಾಡುಗಳಿಂದಲೂ ಮಹಿಳೆಯರು ರಕ್ತಸ್ರಾವದ ದಿನಗಳಲ್ಲಿ ಅವ್ಯಕ್ತ ಯಾತನೆಯಿಂದ ನರಳುತ್ತಾರೆ' ಎಂದಿರುವ ವಿಶ್ವ ಹಿಮೋಫೀಲಿಯ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕಿ ತಾಹಿರಾ ಜಫರ್, ಮಹಿಳೆಯರನ್ನು ಕಡೆಗಣಿಸುವ ಪ್ರವೃತ್ತಿ ಕಡಿಮೆಯಾಗದ ವಿನಾ ಅವರಿಗೆ ದೊರಕಬೇಕಾದ ಆರೋಗ್ಯ ಸೌಲಭ್ಯಗಳು ಸಿಗುವುದು ಕಷ್ಟ' ಎಂದು ಮರುಗುತ್ತಾರೆ.

ರಕ್ತಸ್ರಾವ ಸಂಬಂಧಿ ಕಾಯಿಲೆಗಳನ್ನು ಬಹಳ ಬೇಗ ಪತ್ತೆ ಹಚ್ಚಿ ಚಿಕಿತ್ಸೆ ಶುರು ಮಾಡಿದರೆ ರೋಗಿಗಳನ್ನು ಕಾಪಾಡಬಹುದು. ಕೀಲು, ಸ್ನಾಯುಗಳಲ್ಲಿ ರಕ್ತಸ್ರಾವ ಉಂಟುಮಾಡುವ ಆನುವಂಶಿಕ ಹಿಮೋಫೀಲಿಯ ಕಾಯಿಲೆಯ ಚಿಕಿತ್ಸೆಗೆಂದೇ 35 ವರ್ಷಗಳಿಂದ ದುಡಿಯುತ್ತಿರುವ, ರಾಷ್ಟ್ರ ಪ್ರಶಸ್ತಿ ವಿಜೇತ ವೈದ್ಯರಾದ ದಾವಣಗೆರೆಯ ಸುರೇಶ್ ಹನಗವಾಡಿ, ದಾವಣಗೆರೆಯಲ್ಲಿ ಕರ್ನಾಟಕ ಹಿಮೋಫೀಲಿಯ ಸೊಸೈಟಿ ಸ್ಥಾಪಿಸಿ ಹಿಮೋಫೀಲಿಯ ರೋಗಿಗಳ ಚಿಕಿತ್ಸೆಗೆ ನೆರವಾಗುತ್ತಿದ್ದಾರೆ. ಪ್ರಪಂಚದಲ್ಲಿ ನಾಲ್ಕು ಲಕ್ಷ ಹಿಮೋಫೀಲಿಯ ರೋಗಿಗಳಿದ್ದು, ಅವರಲ್ಲಿ 1 ಲಕ್ಷ ಜನ ಭಾರತದಲ್ಲಿದ್ದಾರೆ.

ಸ್ತ್ರೀಯರ ವಿಶ್ವ ಆರೋಗ್ಯ ಸೂಚ್ಯಂಕದ ಪಟ್ಟಿಯಲ್ಲಿ ಏಷ್ಯಾದ ದಕ್ಷಿಣ ಕೊರಿಯಾ, ಸಿಂಗಪುರ, ಚೀನಾ, ಜಪಾನ್ ದೇಶಗಳು ಮುಂಚೂಣಿಯಲ್ಲಿವೆ. ಪಶ್ಚಿಮದ ಸ್ವೀಡನ್, ಡೆನ್ಮಾರ್ಕ್, ನಾರ್ವೆ ತಮ್ಮ ಸದೃಢ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಅಪ್ರತಿಮ ಸೇವೆಗಳಿಂದ ಮಹಿಳೆಯರ ಆರೋಗ್ಯದ ವಿಷಯದಲ್ಲಿ ಬಹಳಷ್ಟು ಮುತುವರ್ಜಿ ವಹಿಸುತ್ತಿವೆ. ಮಹಿಳೆಯರ ಆರೋಗ್ಯ ಸಂರಕ್ಷಣೆಯ ಕುರಿತು ಜಗತ್ತಿನಾದ್ಯಂತ ಆಗಿರುವ ಕೆಲಸಗಳು ಕಡಿಮೆಯೇ.

ಮಹಿಳೆಯರ ಆರೋಗ್ಯ ಮತ್ತು ಸಾಮಾಜಿಕ ಸ್ಥಾನಮಾನದ ಕುರಿತು ನಾವು ಇನ್ನೂ ಬಹಳಷ್ಟು ರಚನಾತ್ಮಕವಾಗಿ ಕೆಲಸ ಮಾಡಬೇಕಾಗಿದೆ. ಚೀನಾದಲ್ಲಿನ ಹೆಣ್ಣುಮಕ್ಕಳು ದೇಶದ ಆರ್ಥಿಕ ಶಕ್ತಿಯ ಸಶಕ್ತ ಭಾಗವಾಗಿ ಇದ್ದುಕೊಂಡು, ತಮಗೆ ಸಿಗಬೇಕಾದ ಆರೋಗ್ಯ ಸೌಲಭ್ಯಗಳನ್ನು ಕಾನೂನಾತ್ಮಕವಾಗಿ ಪಡೆದುಕೊಂಡಿದ್ದಾರೆ. ನಮ್ಮಲ್ಲಿ 5 ಕೋಟಿ ಮಹಿಳೆಯರು ಸಂತಾನಾಭಿವೃದ್ಧಿ ಸಂಬಂಧಿ ಕಾಯಿಲೆಗಳಿಂದ ಮತ್ತು ಗರ್ಭಧಾರಣೆ ಶಕ್ತಿ ಇರುವ ಒಟ್ಟು ಮಹಿಳೆಯರ ಪೈಕಿ ಅರ್ಧದಷ್ಟು ಮಂದಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂಬ ವರದಿಗಳಿವೆ. ಪ್ರತಿ ರಾಜ್ಯದಲ್ಲಿ ನ್ಯಾಷನಲ್ ಹೆಲ್ತ್ ಮಿಷನ್ ಅಡಿಯಲ್ಲಿ ಸ್ಥಾಪಿಸಲಾದ 'ಸ್ಟೇಟ್ ಬ್ಲಡ್ ಸೆಲ್'ಗಳಿವೆ. ಸ್ತ್ರೀಯರ ವಿಶ್ವ ಆರೋಗ್ಯ ಸೂಚ್ಯಂಕ ಪಟ್ಟಿಯಲ್ಲಿ ಭಾರತ 146ನೇ ಸ್ಥಾನದಲ್ಲಿದೆ.

ಸಾರ್ವಜನಿಕ ಆರೋಗ್ಯ ಸೇವಾ ವ್ಯವಸ್ಥೆ ದೊಡ್ಡ ಮಟ್ಟದಲ್ಲಿ ಬಲಗೊಳ್ಳಬೇಕಿದೆ. ಕೇಂದ್ರದ ಈ ಸಾಲಿನ ಬಜೆಟ್‌ನಲ್ಲಿ ಆರೋಗ್ಯಕ್ಕಾಗಿ ಬರೀ ₹ 99 ಸಾವಿರ ಕೋಟಿ ನಿಗದಿ ಮಾಡಲಾಗಿದೆ. ಇದು ಅತ್ಯಂತ ಕಡಿಮೆ.

ವಾಚಕರ ವಾಣಿ

ಶಾಲೆ ವೈಚಾರಿಕತೆಯ ತಾಣವಾಗಲಿ

ತಮಿಳುನಾಡಿನ ಶಾಲೆಯೊಂದರಲ್ಲಿ ಇತ್ತೀಚೆಗೆ ನಡೆದಿದೆ ಎನ್ನಲಾದ ಪ್ರಕರಣವೊಂದು ಇಡೀ ಮನುಕುಲ ತಲೆತಗ್ಗಿಸುವಂತೆ ಮಾಡಿದೆ. ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳನ್ನು ಋತುಚಕ್ರದ ಕಾರಣದಿಂದ ತರಗತಿಯ ಹೊರಗೆ ಕೂರಿಸಿ ಪರೀಕ್ಷೆ ಬರೆಸಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಇದು ನಿಜವೇ ಆಗಿದ್ದರೆ ಅಮಾನವೀಯತೆಯ ಪರಮಾವಧಿಯೇ ಸರಿ. ಋತುಚಕ್ರವು ಹೆಣ್ಣುಮಕ್ಕಳ ದೇಹದಲ್ಲಿ ನಡೆಯುವ ನೈಸರ್ಗಿಕ ಪ್ರಕ್ರಿಯೆ. ಮಕ್ಕಳಲ್ಲಿ ವೈಚಾರಿಕತೆಯ ಬಗ್ಗೆ ಅರಿವು ಮೂಡಿಸಬೇಕಾದ ಶಾಲೆಯಲ್ಲೇ ಇಂತಹ ಕೃತ್ಯ ನಡೆಯುವುದು ಸಹಿಸಲು ಅಸಾಧ್ಯ. ಇಂತಹ ಕೃತ್ಯ ಮತ್ತೊಮ್ಮೆ ನಡೆಯದಂತೆ ಅಲ್ಲಿನ ಶಿಕ್ಷಣ ಇಲಾಖೆ ಸೂಕ್ತ ಆದೇಶ ಹೊರಡಿಸುವುದೇ ಎಂಬುದನ್ನು ಕಾದು ನೋಡಬೇಕಿದೆ.

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ಮೌಲ್ಯಮಾಪನಕ್ಕೆ ಸೂಕ್ತ ವ್ಯವಸ್ಥೆ ಮಾಡಲಿಲ್ಲವೇಕೆ?

ಸಿಇಟಿ ಪರೀಕ್ಷೆಗೆ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಟೇಬಲ್‌ಗಳ ಮೇಲೆ ಬರೆಯುವ ಕಾರ್ಯ ಆರಂಭವಾಗಿದ್ದರಿಂದ ದಾವಣಗೆರೆಯ ಮೋತಿ ವೀರಪ್ಪ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕಾರ್ಯವನ್ನು ಶಿಕ್ಷಕರು ಕಾರಿಡಾರಿನಲ್ಲಿ ನೆಲದ ಮೇಲೆ ಕುಳಿತು ನಡೆಸಿದ ಸಚಿತ್ರ ವರದಿ (ಪ್ರ.ವಾ., ಏ. 16) ಓದಿ, ಇಡೀ ವ್ಯವಸ್ಥೆಯ ಬಗ್ಗೆ ಜುಗುಪ್ಸೆ ಉಂಟಾಯಿತು. ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ ಏಪ್ರಿಲ್ ತಿಂಗಳಲ್ಲಿ ಬಿಸಿಲ ತಾಪಮಾನ ಅತಿ ಹೆಚ್ಚು. ಶಿಕ್ಷಕರು ಉತ್ತರ ಪತ್ರಿಕೆಯನ್ನು ನೆಲದ ಮೇಲೆ ಇಟ್ಟು ಬಹಳ ಸಮಯದವರೆಗೆ ಬಗ್ಗಿ ಕಾರ್ಯ ನಿರ್ವಹಿಸುವುದು ಅಸಾಧ್ಯ. ಹಾಗಾಗಿ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಮೌಲ್ಯಮಾಪನ ಕಾರ್ಯಕ್ಕೆ ಸೂಕ್ತ ವ್ಯವಸ್ಥೆ ಮಾಡಲಿಲ್ಲವೇಕೆ?

ಸಿಇಟಿ ಪರೀಕ್ಷೆಗೆ ಕೇಂದ್ರಗಳನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. ಆದಾಗ್ಯೂ ಅಂತಹ ಕಡೆ ಹತ್ತನೇ ತರಗತಿ ಪರೀಕ್ಷೆ ಉತ್ತರ ಪತ್ರಿಕೆಯ ಮೌಲ್ಯಮಾಪನ ಕಾರ್ಯ ಆರಂಭಿಸಿದ್ದು ಸರಿಯೇ? ಸರ್ಕಾರಿ ಕಾಲೇಜುಗಳಿಗೆ ಎಲ್ಲಾ ಸೌಲಭ್ಯ ಕಲ್ಪಿಸಲಾಗಿದೆ ಎಂದು ಸರ್ಕಾರ ಹೇಳುವುದು ಎಷ್ಟು ಪೊಳ್ಳು ಎಂಬುದು ಈ ನಿದರ್ಶನದಿಂದ ಸಾಬೀತಾಗಿದೆ. ಇದು ಬರೀ ಈ ಸರ್ಕಾರಿ ಕಾಲೇಜಿನ ಕತೆ ಆಗಿರದೆ ರಾಜ್ಯದ ಬಹುತೇಕ ಸರ್ಕಾರಿ ಶಾಲಾ ಕಾಲೇಜುಗಳ ಕತೆಯಾಗಿದೆ. ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸರಿಯಾಗಿಲ್ಲ ಎಂಬುದು ಸೂರ್ಯನ ಬೆಳಕಿನಷ್ಟೇ ಸತ್ಯ. ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಪರೀಕ್ಷೆ ಮತ್ತು ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕೆ ಇನ್ನಾದರೂ ಸರ್ಕಾರ ಸೂಕ್ತ ವ್ಯವಸ್ಥೆ ಕಲ್ಪಿಸಬೇಕಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ವಸತಿ ನಿಲಯದಲ್ಲಿ ಅನ್ಯರ ವಾಸ್ತವ್ಯ ಸಲ್ಲ

ರಾಯಚೂರಿನ ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ವೃತ್ತಿಪರ ಬಾಲಕರ ವಸತಿ ನಿಲಯದಲ್ಲಿ ಇದಕ್ಕೆ ಸಂಬಂಧವೇ ಇಲ್ಲದ ವ್ಯಕ್ತಿಗಳೂ ವಾಸ್ತವ್ಯ ಹೂಡಿರುವುದರ ಕುರಿತು ವರದಿಯಾಗಿದೆ (ಪ್ರ.ವಾ., ಏ. 16). ವಿದ್ಯಾರ್ಥಿಗಳಿಗಾಗಿ ಸರ್ಕಾರ ಕಟ್ಟಿಸಿರುವ ಎಲ್ಲ ಹಂತದ ವಸತಿ ನಿಲಯಗಳಲ್ಲಿ ಅಕ್ರಮವಾಗಿ ಯಾರೋ ಬಂದು ಸೇರಿಕೊಳ್ಳುವುದು ನಾಚಿಕೆಗೇಡು. ರಾಯಚೂರಿನ ವಸತಿ ನಿಲಯದಲ್ಲಿ ಬೇರೊಬ್ಬರು ನೆಲಸಿರುವುದು ಅಧಿಕಾರಿಗಳ ಗಮನಕ್ಕೆ ಬಂದರೂ ಅವರು ಅದನ್ನು ನೋಡಿಯೂ ನೋಡದಂತೆ ಇದ್ದುದು ಸರಿಯಲ್ಲ. ಮಾಧ್ಯಮ ವರದಿಗಳ ಸರಣಿ ಪ್ರಕಟಗೊಂಡಾಗ ತಡವಾಗಿ ಎಚ್ಚೆತ್ತುಕೊಂಡು ಷೋಕಾಸ್ ನೋಟಿಸ್ ನೀಡಿರುವುದು ಸಮಾಧಾನಕರ ಸಂಗತಿ. ಇನ್ನಾದರೂ ಉನ್ನತ ಅಧಿಕಾರಿಗಳು ಅಕ್ರಮವಾಗಿ ವಾಸವಾಗಿರುವವರಿಗೆ ಕಡಿವಾಣ ಹಾಕಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು.

ಶಿವರಾಜ ಯತಗಲ್, ರಾಯಚೂರು

ಶಿಕ್ಷಕರನ್ನು ಕಂಡರೆ ವಿದ್ಯಾರ್ಥಿಗಳು ಓಡುವುದೇಕೆ?

ಸರ್ಕಾರಿ ಶಾಲೆಯೊಂದರ ಆವರಣದಲ್ಲಿ ಸೇರಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು, ತಮಗೆ ಹೆಚ್ಚುವರಿ ತರಗತಿ ತೆಗೆದುಕೊಳ್ಳಲು ಬಂದ ಶಿಕ್ಷಕರನ್ನು ಕಂಡು ಓಡಿಹೋದ ಬಗ್ಗೆ ಎಂ.ಜೆ.ಅಲ್ಫೋನ್ಸ್ ಪಿಂಟೊ ಬೇಸರ ವ್ಯಕ್ತಪಡಿಸಿದ್ದಾರೆ (ಸಂಗತ, ಏ. 16). ಕಲಿಕೆಯಲ್ಲಿ ವಿದ್ಯಾರ್ಥಿಗಳ ನಿರಾಸಕ್ತಿಯನ್ನೇ ಪೂರ್ಣವಾಗಿ ದೂಷಿಸಿದ್ದಾರೆ. ಆದರೆ ಪರಿಸ್ಥಿತಿಯನ್ನು ವಿಶ್ಲೇಷಿಸಿ ನೋಡಬೇಕಾಗುತ್ತದೆ. ಈಗಿನ ಹತ್ತನೇ ತರಗತಿ ವಿದ್ಯಾರ್ಥಿಗಳು ಬಹಳಷ್ಟು ಒತ್ತಡ ಎದುರಿಸುತ್ತಿದ್ದಾರೆ. ಫಲಿತಾಂಶವನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿರುವ ಶಾಲೆಗಳು ಬೆಳಿಗ್ಗೆ 8ರಿಂದಲೇ ತರಗತಿಗಳನ್ನು ಆರಂಭಿಸಿ, ಬಿಡುವು ನೀಡದೆ ಸಂಜೆ 6ರವರೆಗೂ ನಡೆಸುತ್ತವೆ. ರಾತ್ರಿ ತರಗತಿ, ಭಾನುವಾರದ ತರಗತಿ, ಮನೆ ಭೇಟಿ, ಬೆಳಿಗ್ಗೆ 4ಕ್ಕೆ ವೇಕ್‌ಅಪ್ ಕಾಲ್, ರಾತ್ರಿ 11ಕ್ಕೆ ಚೆಕ್‌ಅಪ್ ಕಾಲ್, ಇದರ ಜೊತೆಗೆ ವಿದ್ಯಾರ್ಥಿಗಳು ಟಿ.ವಿ. ನೋಡುವಂತಿಲ್ಲ, ಮೊಬೈಲ್ ಬಳಸುವಂತಿಲ್ಲ ಎಂಬೆಲ್ಲ ಒತ್ತಡಗಳನ್ನು ಹಾಕಲಾಗುತ್ತದೆ.

ಈ ಕ್ರಮಗಳನ್ನು ಕೇಳಿದಾಗ ಶಿಕ್ಷಕರು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಉತ್ತಮ ಫಲಿತಾಂಶಕ್ಕಾಗಿ ಎಷ್ಟು ಕಷ್ಟಪಡುತ್ತಾರೆ ಎಂದು ಅನ್ನಿಸುತ್ತದೆ. ಆದರೆ ವಾಸ್ತವ ಅದಲ್ಲ. ಮಕ್ಕಳ ವಯೋಮಾನ, ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಶಿಕ್ಷಕರು ಮತ್ತು ಇಲಾಖೆಯು ಕಾರ್ಯಸೂಚಿ ಸಿದ್ಧಪಡಿಸಿ ಅನುಷ್ಠಾನಗೊಳಿಸಬೇಕಾಗುತ್ತದೆ. ಆದರೆ ಹಾಗೆ ಆಗಿಲ್ಲ. ಶಾಲೆಯಲ್ಲಿ ಸರಿಯಾಗಿ ಪಾಠ ಮಾಡದಿದ್ದರೂ ರಾತ್ರಿ ಪಾಲಕರಿಗೆ ಕರೆ ಮಾಡಿ ವಿದ್ಯಾರ್ಥಿಯ ಓದಿನ ಬಗ್ಗೆ ವಿಚಾರಿಸಿದರೆ, ಅವರಿಗೆ ಉತ್ತಮ ಶಿಕ್ಷಕ ಎಂಬ ಪ್ರಶಂಸೆ ಸಿಗುತ್ತದೆ! ಏಕರೀತಿಯ ಬೋಧನೆ, ಅರ್ಥವಾಗದ ಪಾಠಗಳು, ಪಠ್ಯವನ್ನು ಉರು ಹೊಡೆಯುವಂತೆ ಪೀಡಿಸುವ ಶಿಕ್ಷಕರು, ಪಾಲಕರ ಎದುರು ಅಂಕಗಳನ್ನು ಹೇಳಿ ಅವಮಾನಿಸುವ ಮುಖ್ಯ ಶಿಕ್ಷಕರು, ಹೀಗೆ ಹಲವಾರು ರೀತಿಯಲ್ಲಿ ಗೋಳು ಹೊಯ್ದುಕೊಳ್ಳುತ್ತಿರುವುದರಿಂದ ಶಿಕ್ಷಕರೆಂದರೆ ವಿದ್ಯಾರ್ಥಿಗಳು ಮಾರುದ್ದ ಜಿಗಿಯುವಂತೆ ಆಗಿದೆ. ವಿದ್ಯಾರ್ಥಿಗಳು ಅಭ್ಯಾಸದಿಂದ ದೂರವಾಗಲು ಕಾರಣವೇನು ಎಂಬ ಬಗ್ಗೆ ಯೋಚಿಸಬೇಕಾಗಿದೆ. ವಿದ್ಯಾರ್ಥಿಗಳು ಓದಬೇಕು ಎಂದು ಅಪೇಕ್ಷಿಸುವ ಶಿಕ್ಷಕರು ತಾವು ಎಷ್ಟು ಅಭ್ಯಾಸ ಮಾಡುತ್ತಾರೆ? ಮಕ್ಕಳಿಗೆ ಸುಲಭವಾಗಿ ಕಲಿಸಲು ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. 'ಸಂತಸದ ಕಲಿಕೆ' ಎಂಬುದು ಅಕ್ಷರಗಳಲ್ಲಿ ಮಾತ್ರ ಉಳಿದಿದೆ. ಶಾಲಾ ಅವಧಿಯಲ್ಲೇ ಪರಿಣಾಮಕಾರಿಯಾಗಿ ಬೋಧಿಸುವತ್ತ ಶಿಕ್ಷಕರು ನಿರಂತರವಾಗಿ ಪ್ರಯತ್ನಶೀಲರಾಗಬೇಕು. ಇದರಿಂದ ವಿದ್ಯಾರ್ಥಿಗಳು ಉಳಿದ ಸಮಯದಲ್ಲಿ ಮನರಂಜನೆ, ಮನೆಗೆಲಸ, ಆಟೋಟ ಮತ್ತು ಸ್ವ-ಅಭ್ಯಾಸಗಳಲ್ಲಿ ಕಳೆಯಲು ಸಾಧ್ಯವಾಗುತ್ತದೆ. ಶಾಲಾ ಸಮಯದಲ್ಲಿ ಅವರು ಉಲ್ಲಸಿತರಾಗಿ ಕಲಿಕೆಯಲ್ಲಿ ತೊಡಗಲು ನೆರವಾಗುತ್ತದೆ. ಆಗ ಮಾತ್ರ ವಿದ್ಯಾರ್ಥಿಗಳು ಶಿಕ್ಷಕರನ್ನು ಕಂಡ ಕೂಡಲೇ ಓಡಿಹೋಗದೆ ಅವರ ಬಳಿ ಓಡಿ ಬರುತ್ತಾರೆ.

ಅಶೋಕ ಎನ್.ಎಚ್., ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

₹2,000 ಕೋಟಿ ಮೌಲ್ಯದ ಆಸ್ತಿಯನ್ನು ₹50 ಲಕ್ಷಕ್ಕೆ ಖರೀದಿಸಿದ ಆರೋಪ

'ನ್ಯಾಷನಲ್ ಹೆರಾಲ್ಡ್' ಪ್ರಕರಣ ಏನು, ಎತ್ತ...

ಸೋನಿಯಾ ಗಾಂಧಿ

'ನ್ಯಾಷನಲ್ ಹೆರಾಲ್ಡ್' ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕಾಂಗ್ರೆಸ್ ಸಾಗರೋತ್ತರ ಘಟಕದ ಅಧ್ಯಕ್ಷ ಸ್ಯಾಮ್ ಪಿತ್ರೊಡಾ ಮತ್ತು ರಾಹುಲ್ ಆಪ್ತ, ಪತ್ರಕರ್ತ ಸುಮನ್ ದುಬೆ ಅವರ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ. 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ, ವಿರೋಧ ಪಕ್ಷಗಳ ಧ್ವನಿ ಅಡಗಿಸಲು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ. 'ನ್ಯಾಯಾಲಯದ ಆದೇಶದ ಪ್ರಕಾರ ತನಿಖೆ ನಡೆಯುತ್ತಿದೆ' ಎಂದು ಬಿಜೆಪಿ ಹೇಳುತ್ತಿದೆ. ದಶಕದ ಇತಿಹಾಸ ಇರುವ ಈ ಪ್ರಕರಣದ ವಿವರಗಳನ್ನು ಇಲ್ಲಿ ನೀಡಲಾಗಿದೆ

ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಎನ್ನುವ ಸಂಸ್ಥೆಯ ಆಸ್ತಿಯನ್ನು ಕೈವಶ ಮಾಡಿಕೊಳ್ಳಲು ಕಾಂಗ್ರೆಸ್ ಪಕ್ಷದ ಹಣವನ್ನು ಬಳಸಿಕೊಂಡಿದ್ದಾರೆ ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2012ರಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಎಜೆಎಲ್ ಪ್ರಕಟಿಸುತ್ತಿದ್ದ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆ 2008ರಲ್ಲಿ ಮುಚ್ಚಿಹೋಗಿತ್ತು. ಆ ಸಂದರ್ಭದಲ್ಲಿ ಎಜೆಎಲ್ ಸಂಸ್ಥೆಯು ಕಾಂಗ್ರೆಸ್ ಪಕ್ಷಕ್ಕೆ ₹90 ಕೋಟಿ (ಪತ್ರಿಕೆಯ ನಿರ್ವಹಣೆಗೆಂದು ಆಗಿಂದಾಗ್ಗೆ ಪಡೆದಿದ್ದ) ಸಾಲ ಮರುಪಾವತಿ ಮಾಡಬೇಕಿತ್ತು. 2010ರಲ್ಲಿ ಕಾಂಗ್ರೆಸ್ ಪಕ್ಷವು ಆ ಸಾಲವನ್ನು ಯಂಗ್ ಇಂಡಿಯನ್ ಲಿಮಿಟೆಡ್‌ಗೆ ವಹಿಸಿತ್ತು. ಆಗ್ಗೆ ಕೆಲವು ತಿಂಗಳ ಹಿಂದಷ್ಟೇ ಸ್ಥಾಪನೆಯಾಗಿದ್ದ, ಲಾಭರಹಿತ ಕಂಪನಿ ಯಂಗ್ ಇಂಡಿಯನ್‌ನ ಆಡಳಿತ ಮಂಡಳಿಯಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ನಿರ್ದೇಶಕರಾಗಿದ್ದು, ಇಬ್ಬರು ತಲಾ ಶೇ 38ರಷ್ಟು ಷೇರುಗಳನ್ನು (ಒಟ್ಟು ಶೇ 76) ಹೊಂದಿದ್ದಾರೆ. ಉಳಿದ ಶೇ 24ರಷ್ಟು ಷೇರುಗಳನ್ನು ಕಾಂಗ್ರೆಸ್ ಮುಖಂಡರಾಗಿದ್ದ ಮೋತಿಲಾಲ್ ವೋರಾ, ಆಸ್ಕರ್ ಫರ್ನಾಂಡಿಸ್ ಹೊಂದಿದ್ದಾರೆ ಎಂದು ಸುಬ್ರಮಣಿಯನ್ ಸ್ವಾಮಿ ಅವರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದರು. ಎಜೆಎಲ್ ಸಂಸ್ಥೆ ಮತ್ತು ಅದಕ್ಕೆ ಸೇರಿದ ಮುಂಬೈ, ದೆಹಲಿ, ಲಖನೌ ಮುಂತಾದೆಡೆ ಇದ್ದ ಕೋಟ್ಯಂತರ ಮೌಲ್ಯದ ಆಸ್ತಿಯನ್ನು ಸೋನಿಯಾ, ರಾಹುಲ್ ಮತ್ತು ಇತರರು ಅಕ್ರಮ ಮಾರ್ಗದಲ್ಲಿ ಅತ್ಯಂತ ಕಡಿಮೆ ಬೆಲೆಗೆ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಎಂದು ಅವರು ಆರೋಪಿಸಿದ್ದರು.


ಸುಬ್ರಮಣಿಯನ್ ಸ್ವಾಮಿ

ಇ.ಡಿ. ಹೇಳುತ್ತಿರುವುದೇನು?

ಸುಬ್ರಮಣಿಯನ್ ಸ್ವಾಮಿ ಅವರ ದೂರನ್ನು ಪಟಿಯಾಲಾ ಹೌಸ್‌ನ ಮೆಟ್ರೊಪಾಲಿಟನ್ ನ್ಯಾಯಾಧೀಶರು 2014ರ ಜೂನ್ 26ರಂದು ಪರಿಗಣನೆಗೆ ತೆಗೆದುಕೊಂಡರು. ಈ ಬಗ್ಗೆ ಜಾರಿ ನಿರ್ದೇಶನಾಲಯವು 2021ರಂದು ತನಿಖೆ ಆರಂಭಿಸಿತು. ಪ್ರಕರಣದಲ್ಲಿ ಸೋನಿಯಾ ಗಾಂಧಿ ಅವರು ಒಂದನೇ ಆರೋಪಿಯಾಗಿದ್ದರೆ, ರಾಹುಲ್ ಗಾಂಧಿ ಅವರು ಎರಡನೇ ಆರೋಪಿ ಆಗಿದ್ದಾರೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಆರೋಪಿಗಳ ವಿರುದ್ಧ ದೋಷಾರೋಪ ನಿಗದಿ ಮಾಡಲಾಗಿದೆ. ಜಾರಿ ನಿರ್ದೇಶನಾಲಯವು ಪ್ರಕರಣದ ಸಂಬಂಧ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು 2022ರಲ್ಲಿ ದೀರ್ಘ ವಿಚಾರಣೆಗೆ ಒಳಪಡಿಸಿತ್ತು.

ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ನ (ಎಜೆಎಲ್) ಸಾವಿರಾರು ಕೋಟಿ ಮೌಲ್ಯದ ಆಸ್ತಿಯನ್ನು ಸ್ವಾಧೀನಕ್ಕೆ ಪಡೆಯುವ ಸಲುವಾಗಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸ್ಯಾಮ್ ಪಿತ್ರೊಡಾ, ಸುಮನ್ ದುಬೆ ಮತ್ತು ಇತರ ಕಾಂಗ್ರೆಸ್ ನಾಯಕರು ಕ್ರಿಮಿನಲ್ ಪಿತೂರಿ ನಡೆಸಿದ್ದಾರೆ; ಯಂಗ್ ಇಂಡಿಯನ್ ಲಿಮಿಟೆಡ್ ಮೂಲಕ, ₹2,000 ಕೋಟಿ ಮೌಲ್ಯದ ಆಸ್ತಿಯನ್ನು ಸೋನಿಯಾ ಮತ್ತು ರಾಹುಲ್ ಅವರು ಕೇವಲ ₹50 ಲಕ್ಷಕ್ಕೆ ಸ್ವಾಧೀನ ಪಡಿಸಿಕೊಂಡಿದ್ದಾರೆ. ಹಾಗೂ ಕಾಂಗ್ರೆಸ್ ಪಕ್ಷವು ಎಜೆಎಲ್‌ಗೆ ನೀಡಿದ್ದ ₹90.2 ಕೋಟಿ ಸಾಲವನ್ನು 9.02 ಕೋಟಿಯ ಈಕ್ವಿಟಿ ಷೇರುಗಳನ್ನಾಗಿ ಪರಿವರ್ತಿಸಿ ಯಂಗ್ ಇಂಡಿಯನ್‌ಗೆ ವರ್ಗಾಯಿಸಲಾಗಿದೆ ಎಂದು ಇ.ಡಿ. ದೋಷಾರೋಪ ಪಟ್ಟಿಯಲ್ಲಿ ತಿಳಿಸಿದೆ.

ಸ್ಯಾಮ್ ಪಿತ್ರೊಡಾ

ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್)

1937ರಲ್ಲಿ ಜವಾಹರಲಾಲ್ ನೆಹರೂ ಅವರು ಸ್ಥಾಪಿಸಿದ ಕಂಪನಿ ಇದು. 5,000 ಸ್ವಾತಂತ್ರ್ಯ ಹೋರಾಟಗಾರರು ಈ ಕಂಪನಿಯಲ್ಲಿ ಷೇರುಗಳನ್ನು ಹೊಂದಿದ್ದರು. ಕಂಪನಿಯು ನಿರ್ದಿಷ್ಟ ವ್ಯಕ್ತಿಗೆ ಸೇರಿರಲಿಲ್ಲ. 2010ರ ವೇಳೆಗೆ ಅದು 1,057 ಷೇರುದಾರರನ್ನು ಹೊಂದಿತ್ತು. ಎಜೆಎಲ್ 'ನ್ಯಾಷನಲ್ ಹೆರಾಲ್ಡ್' ಎಂಬ ಇಂಗ್ಲಿಷ್ ಪತ್ರಿಕೆ, 'ಕೌಮೀ ಆವಾಜ್' ಎಂಬ ಉರ್ದು ಪತ್ರಿಕೆ ಮತ್ತು 'ನವಜೀವನ್' ಎಂಬ ಹಿಂದಿ ಪತ್ರಿಕೆಗಳನ್ನು 2008ರವರೆಗೂ ಪ್ರಕಟಿಸುತ್ತಾ ಬಂದಿತ್ತು. ನಷ್ಟ ಅನುಭವಿಸಿದ ಕಾರಣಕ್ಕೆ ನಂತರ ಪತ್ರಿಕೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಕಂಪನಿಯು ದೆಹಲಿ, ಮುಂಬೈ ಮತ್ತು ಲಖನೌಗಳಲ್ಲಿ ಸ್ವಂತ ಆಸ್ತಿಗಳನ್ನು ಹೊಂದಿತ್ತು. 2011ರಲ್ಲಿ ಕಂಪನಿಯ ಮಾಲೀಕತ್ವವನ್ನು ಯಂಗ್ ಇಂಡಿಯನ್ ಪ್ರೈವೆಟ್ ಲಿಮಿಟೆಡ್‌ಗೆ ವರ್ಗಾವಣೆ ಮಾಡಲಾಗಿತ್ತು. ಮೂರೂ ಪತ್ರಿಕೆಗಳನ್ನು ಪುನರಾರಂಭಿಸಲು ಎಜೆಎಲ್ 2016ರಲ್ಲಿ ನಿರ್ಧರಿಸಿತ್ತು.

'ನ್ಯಾಷನಲ್ ಹೆರಾಲ್ಡ್' ಎಂದರೆ...

ಜವಾಹರಲಾಲ್ ನೆಹರೂ ಅವರು ಇತರ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸೇರಿ 1938ರಲ್ಲಿ ಆರಂಭಿಸಿದ ಪತ್ರಿಕೆ 'ನ್ಯಾಷನಲ್ ಹೆರಾಲ್ಡ್'. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಈ ಪತ್ರಿಕೆಯು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಅದರ ಮುಖಂಡರ ಅಭಿಪ್ರಾಯಗಳನ್ನು ಜನರಿಗೆ ತಲುಪಿಸುವ ಮಾರ್ಗವಾಗಿತ್ತು. ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ ಪ್ರಕಟಿಸುತ್ತಿದ್ದ ಈ ಪತ್ರಿಕೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷದ ಮುಖವಾಣಿಯಾಗಿತ್ತು. ₹90 ಕೋಟಿ ಸಾಲದ ಸುಳಿಗೆ ಸಿಲುಕಿ ನಷ್ಟದಲ್ಲಿದ್ದ ಪತ್ರಿಕೆ 2008ರಲ್ಲಿ ಸ್ಥಗಿತಗೊಂಡಿತ್ತು. ಈಗ ಅದು ವೆಬ್‌ಸೈಟ್ ಮೂಲಕ ಸಕ್ರಿಯವಾಗಿದೆ.

ಕಾಂಗ್ರೆಸ್ ವಾದವೇನು?

ಆರೋಪ ತಳ್ಳಿ ಹಾಕಿರುವ ಕಾಂಗ್ರೆಸ್, 'ಯಂಗ್ ಇಂಡಿಯನ್ ಲಿಮಿಟೆಡ್ ಒಂದು ಲಾಭ ರಹಿತ ಸಂಸ್ಥೆಯಾಗಿದ್ದು, ಅದಕ್ಕೆ ಎಜೆಎಲ್ ಆಸ್ತಿ ವರ್ಗಾವಣೆಯಾಗಿದ್ದರೂ ಯಾವ ವ್ಯಕ್ತಿಯೂ ಅದನ್ನು ಬಳಸಿಕೊಳ್ಳಲಾಗದು' ಎಂದು ಪ್ರತಿಕ್ರಿಯಿಸಿದೆ.

'ಪತ್ರಿಕೆ ಉಳಿಸುವುದಕ್ಕಾಗಿ ಪಕ್ಷ ₹90 ಕೋಟಿ ಸಾಲ ನೀಡಿತ್ತು. ಸಾಲಮುಕ್ತ ಮಾಡುವ ಸಲುವಾಗಿ ಯಂಗ್ ಇಂಡಿಯನ್‌ಗೆ ಮಾಲೀಕತ್ವ ವರ್ಗಾವಣೆ ಮಾಡಲಾಗಿದೆ. ಅದರ ಆಸ್ತಿಯಿಂದ ಲಾಭ ಮಾಡುವ ಉದ್ದೇಶ ಇರಲಿಲ್ಲ' ಎಂದು ಅದು ಹೇಳಿದೆ.

'ಬಿಜೆಪಿ ದ್ವೇಷದ ರಾಜಕಾರಣ ಮಾಡುತ್ತಿದೆ. ವಿರೋಧ ಪಕ್ಷಗಳ ಧ್ವನಿ ಅಡಗಿಸಲು ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದೆ ಎನ್ನುವುದಕ್ಕೆ ಇದು ನಿದರ್ಶನವಾಗಿದೆ' ಎಂದು ಅದು ದೂರಿದೆ.

'ಸೋನಿಯಾ ಮತ್ತು ರಾಹುಲ್ ಅವರನ್ನು ಗುರಿಮಾಡಲಾಗಿದೆ. ನಾವು ಸುಮ್ಮನಿರುವುದಿಲ್ಲ. ನಮ್ಮನ್ನು ಸುಮ್ಮನಿರಿಸುವುದಕ್ಕೆ ಸಾಧ್ಯವಿಲ್ಲ. ನಾವು ಜನರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಲೇ ಇರುತ್ತೇವೆ' ಎಂದು ಕಾಂಗ್ರೆಸ್ ಹೇಳಿದೆ.

ಯಂಗ್ ಇಂಡಿಯನ್ ಲಿಮಿಟೆಡ್

2010ರ ನವೆಂಬರ್ 23ರಂದು ಸ್ಥಾಪಿಸಲಾಗಿದ್ದ ಲಾಭರಹಿತ ಉದ್ದೇಶದ ಕಂಪನಿ ಯಂಗ್ ಇಂಡಿಯನ್ ಪ್ರೈವೆಟ್ ಲಿಮಿಟೆಡ್. ₹5 ಲಕ್ಷ ಮೂಲ ಬಂಡವಾಳದೊಂದಿಗೆ ಇದನ್ನು ಆರಂಭಿಸಲಾಗಿತ್ತು. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ತಲಾ ಶೇ 38ರಷ್ಟು ಷೇರುಗಳನ್ನು ಹೊಂದಿದ್ದಾರೆ. ಕಾಂಗ್ರೆಸ್ ಮುಖಂಡರಾಗಿದ್ದ ದಿವಂಗತ ಮೋತಿಲಾಲ್ ವೋರಾ, ಆಸ್ಕರ್ ಫರ್ನಾಂಡಿಸ್ ಮುಂತಾದವರು ಉಳಿದ ಶೇ 24ರಷ್ಟು ಪಾಲುದಾರಿಕೆ ಹೊಂದಿದ್ದರು ಎಂದು ಹೇಳಲಾಗಿದೆ.

ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಎಸ್.ಜಿ.ಪಿತ್ರೊಡಾ, ಸುಮನ್ ದುಬೆ, ಅಜಯ್ ಮಾಕನ್ ಮತ್ತು ಪವನ್ ಕುಮಾರ್ ಬನ್ಸಾಲ್ ಅವರು ಈ ಕಂಪನಿಯ ಹಾಲಿ ನಿರ್ದೇಶಕರಾಗಿದ್ದಾರೆ.

ಲಾಭದ ಉದ್ದೇಶದ ಕಂಪನಿ ಅಲ್ಲದಿದ್ದರೂ ಯಂಗ್ ಇಂಡಿಯನ್ ಯಾವುದೇ ಸೇವಾ ಉದ್ದೇಶದ ಚಟುವಟಿಕೆಗಳನ್ನು ನಡೆಸುತ್ತಿಲ್ಲ ಎಂದು ಆರೋಪಿಸಲಾಗಿದೆ.

ಸುಮನ್ ದುಬೆ

ಆಸ್ತಿ ಮುಟ್ಟುಗೋಲು

ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ ಸೇರಿದ ದೆಹಲಿ, ಮುಂಬೈ ಮತ್ತು ಲಖನೌಗಳಲ್ಲಿರುವ ₹661 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹90.2 ಕೋಟಿ ಮೌಲ್ಯದ ಎಜೆಎಲ್ ಷೇರುಗಳನ್ನು 2023ರ ನವೆಂಬರ್ 20ರಂದು ಮುಟ್ಟುಗೋಲು ಹಾಕಿಕೊಂಡಿತ್ತು. ಈ ಆಸ್ತಿಯನ್ನು ತನ್ನ ವಶಕ್ಕೆ ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಇ.ಡಿ. ಆರಂಭಿಸಿದೆ. ದೆಹಲಿ, ಮುಂಬೈ ಮತ್ತು ಲಖನೌದ ನೋಂದಣಾಧಿಕಾರಿಗಳಿಗೆ ನೋಟಿಸ್ ನೀಡಿದೆ. ಅಲ್ಲದೇ, ಮುಂಬೈನ ಬಾಂದ್ರಾದಲ್ಲಿರುವ (ಪೂರ್ವ) ಎಜೆಎಲ್‌ಗೆ ಸೇರಿದ ಕಟ್ಟಡದಲ್ಲಿ (ಹೆರಾಲ್ಡ್ ಹೌಸ್) ಕಾರ್ಯಾಚರಿಸುತ್ತಿರುವ ಎಂ/ಎಸ್ ಜಿಂದಾಲ್ ಸೌತ್ ವೆಸ್ಟ್ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿಗೂ ನೋಟಿಸ್ ನೀಡಿ, ಕಟ್ಟಡದ ಬಾಡಿಗೆ/ಗುತ್ತಿಗೆ ಮೊತ್ತವನ್ನು ಪ್ರತಿ ತಿಂಗಳು ಜಾರಿ ನಿರ್ದೇಶನಾಲಯದ ನಿರ್ದೇಶಕರಿಗೆ ವರ್ಗಾವಣೆ ಮಾಡುವಂತೆ ಸೂಚಿಸಲಾಗಿದೆ.

ಆಧಾರ: ಪಿಟಿಐ, ಜಾರಿ ನಿರ್ದೇಶನಾಲಯದ ಪ್ರಕಟಣೆಗಳು

ರಾಷ್ಟ್ರೀಯ

ದೆಹಲಿ ವಿ.ವಿ.: ಸಗಣಿ ಬಳಿದು ಪ್ರಾಂಶುಪಾಲರ ಕಚೇರಿ ವಿರೂಪ

ಲಕ್ಷ್ಮೀಬಾಯಿ ಕಾಲೇಜಿನ ಪ್ರಾಂಶುಪಾಲರ ಕಚೇರಿಯ ಗೋಡೆಗೆ ಮಂಗಳವಾರ ಸಗಣಿ ತಟ್ಟಿದ ಡಿಯುಎಸ್‌ಯು ಅಧ್ಯಕ್ಷ ರೋನಕ್ ಖತ್ರಿ — ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆ (ಡಿಯುಎಸ್‌ಯು) ಅಧ್ಯಕ್ಷ ರೋನಕ್ ಖತ್ರಿ ಅವರು ಲಕ್ಷ್ಮೀಬಾಯಿ ಕಾಲೇಜಿನ ಪ್ರಾಂಶುಪಾಲರ ಕಚೇರಿಯ ಗೋಡೆಗೆ ಮಂಗಳವಾರ ಸಗಣಿ ತಟ್ಟುವ ಮೂಲಕ ವಿರೂಪಗೊಳಿಸಿದರು.

'ಸಗಣಿ ಲೇಪಿಸುವುದರಿಂದ ತಂಪಾಗಿರುತ್ತದೆ ಎನ್ನುವುದಾದರೆ, ನಿಮ್ಮ ಕಚೇರಿಗೆ ಎ.ಸಿ. ಏಕೆ ಬೇಕು? ಸಗಣಿಯನ್ನೇ ಬಳಿಯುತ್ತೇವೆ' ಎಂದು ಪ್ರಾಂಶುಪಾಲರ ಕಚೇರಿಯ ಗೋಡೆಗೆ ಹಸುವಿನ ಸಗಣಿ ಅಂಟಿಸಿದರು.

'ನೀವು ಸಂಶೋಧನೆ ಮಾಡಲು ಬಯಸಿದರೆ, ಅದನ್ನು ನಿಮ್ಮ ಮನೆಯಲ್ಲೇ ಮಾಡಿ' ಎಂದು ಪ್ರಾಂಶುಪಾಲರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರತ್ಯುಷ್ ವತ್ಸಲಾ ಅವರು ತಮ್ಮ ಕಾಲೇಜಿನ ಗೋಡೆಗಳಿಗೆ ಸಗಣಿ ಲೇಪಿಸಿರುವ ವಿಡಿಯೊವೊಂದನ್ನು ಏ. 13ರಂದು ಸಾಮಾಜಿಕ ಜಾಲತಾಣ ದಲ್ಲಿ ಹಂಚಿಕೊಂಡು, 'ತಂಪಾಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಇದು ಸಂಶೋಧನೆಯ ಭಾಗ' ಎಂದಿದ್ದರು.

ಸಂಕ್ಷಿಪ್ತ ಸುದ್ದಿ

ತಮಿಳು ಭಾಷೆಯಲ್ಲೇ ಸರ್ಕಾರಿ ಆದೇಶ


ಎಂ.ಕೆ ಸ್ಟಾಲಿನ್

ಚೆನ್ನೈ: ಸರ್ಕಾರಿ ಆದೇಶಗಳನ್ನು ಮತ್ತು ಇಲಾಖೆಗಳು ಹಾಗೂ ಅಧಿಕಾರಿಗಳ ನಡುವಿನ ಪತ್ರ ವ್ಯವಹಾರಗಳನ್ನು ತಮಿಳು ಭಾಷೆಯಲ್ಲಿಯೇ ನಡೆಸುವಂತೆ ತಮಿಳುನಾಡು ಸರ್ಕಾರ ಸುತ್ತೋಲೆ ಹೊರಡಿಸಿದೆ.

ತಮಿಳುನಾಡು ಅಧಿಕೃತ ಭಾಷಾ ಕಾಯ್ದೆ 1956 ಅನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲ ಇಲಾಖೆಗಳ ಕಾರ್ಯದರ್ಶಿ, ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳಿಗೆ ತಮಿಳುನಾಡು ಅಭಿವೃದ್ಧಿ ಮತ್ತು ಮಾಹಿತಿ ಸಚಿವ ವಿ.ರಾಜಾರಮಣ ಅವರು ಪತ್ರ ಬರೆದಿದ್ದಾರೆ.

ತಮಿಳುನಾಡಿನ ಅಧಿಕಾರಿಗಳು ತಮ್ಮ ಪತ್ರಗಳಿಗೆ ತಮಿಳು ಭಾಷೆಯಲ್ಲಿ ಸಹಿ ಮಾಡುವುದಿಲ್ಲ ಎಂದು ಪ್ರಧಾನಿ ಮೋದಿ ಟೀಕಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅಡಿ ತ್ರಿಭಾಷಾ ಸೂತ್ರ ಅಳವಡಿಕೆ ಕುರಿತು ಕೇಂದ್ರ ಸರ್ಕಾರ ಮತ್ತು ತಮಿಳುನಾಡಿನ ಸ್ಟಾಲಿನ್ ಸರ್ಕಾರದ ನಡುವಿನ ತಿಕ್ಕಾಟ ಮುಂದುವರಿದಿದೆ.

ಅನಧಿಕೃತ ದರ್ಗಾ ತೆರವು: ಕಲ್ಲು ತೂರಾಟ

ನಾಸಿಕ್ (ಪಿಟಿಐ): ಅನಧಿಕೃತ ದರ್ಗಾದ ತೆರವು ಕಾರ್ಯಾಚರಣೆಯನ್ನು ವಿರೋಧಿಸಿದ ಉದ್ರಿಕ್ತರ ಗುಂಪು ನಗರದಲ್ಲಿ ಪೊಲೀಸರ ಮೇಲೆ ಮಂಗಳವಾರ ರಾತ್ರಿ ದಾಳಿ ನಡೆಸಿದೆ. 21 ಕಾನ್‌ಸ್ಟೆಬಲ್‌ಗಳು ಗಾಯಗೊಂಡಿದ್ದು, ಪೊಲೀಸರ ಮೂರು ವಾಹನಗಳು ಜಖಂಗೊಂಡಿವೆ.

ಪ್ರತಿಭಟನಕಾರರ ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದು, ಅಶ್ರುವಾಯು ಶೆಲ್ ಪ್ರಯೋಗಿಸಿದರು. ಪರಿಸ್ಥಿತಿ ಬುಧವಾರ ನಿಯಂತ್ರಣದಲ್ಲಿತ್ತು. ಈ ಸಂಬಂಧ 15 ಜನರನ್ನು ಬಂಧಿಸಿದ್ದು, 57 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ನಿಯೋಜಿಸಲಾಗಿದ್ದ ಪೊಲೀಸ್ ಕಾನ್‌ಸ್ಟೆಬಲ್‌ಗಳು ಗಾಯಗೊಂಡಿದ್ದಾರೆ. ನಾಸಿಕ್ ನಗರಸಭೆಯ ಸಿಬ್ಬಂದಿ ಮಂಗಳವಾರ ಬೆಳಿಗ್ಗೆ ಇಲ್ಲಿನ ಕಾತೆ ಗಲ್ಲಿ ಪ್ರದೇಶದಲ್ಲಿದ್ದ ಸತ್‌ಪೀರ್ ಬಾಬಾ ದರ್ಗಾ ತೆರವುಗೊಳಿಸಿದರು ಎಂದು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಆಸ್ಟ್ರೇಲಿಯಾ ಸರ್ಕಾರವು ಭಾರತದ ಗುಜರಾತ್, ಹರಿಯಾಣ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯದ ವಿದ್ಯಾರ್ಥಿಗಳು ತನ್ನ ದೇಶದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವುದನ್ನು ನಿಷೇಧಿಸಿದೆ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಂಚಿಕೊಳ್ಳುತ್ತಿದ್ದಾರೆ. ನಕಲಿ ವೀಸಾ ಮತ್ತು ಇತರೆ ವಂಚನೆ ಪ್ರಕರಣಗಳಿಂದ ಆಸ್ಟ್ರೇಲಿಯಾ ಈ ನಿರ್ಧಾರಕ್ಕೆ ಬಂದಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ನಿರ್ದಿಷ್ಟ ಪದಗಳನ್ನು ಹಾಕಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಈ ಪ್ರತಿಪಾದನೆಯನ್ನು ಸಮರ್ಥಿಸುವ ಯಾವ ವರದಿಯೂ ಕಂಡುಬರಲಿಲ್ಲ. ಈ ಬಗ್ಗೆ ಮತ್ತಷ್ಟು ಹುಡುಕಾಟ ನಡೆಸಿದಾಗ, 2023ರಲ್ಲಿ ಆಸ್ಟ್ರೇಲಿಯಾದ ಕೆಲವು ವಿಶ್ವವಿದ್ಯಾಲಯಗಳು ಭಾರತದ ಕೆಲವು ರಾಜ್ಯಗಳ ವಿದ್ಯಾರ್ಥಿಗಳ ಪ್ರವೇಶಗಳನ್ನು ಕೆಲ ಕಾಲ ನಿರ್ಬಂಧಿಸಿದ್ದವು. ಅದಕ್ಕೆ ವೀಸಾ ನಿರಾಕರಣೆಯಲ್ಲಿ ಹೆಚ್ಚಳ ಮತ್ತು ವಿದ್ಯಾರ್ಥಿಗಳು ಡ್ರಾಪ್ ಔಟ್‌ಗಳಾಗುತ್ತಿದ್ದುದು ಕಾರಣವಾಗಿತ್ತು. ಅದು ವಿ.ವಿ.ಗಳ ಸ್ವತಂತ್ರ ನಿರ್ಧಾರವಾಗಿತ್ತು. ನಂತರ ಆ ನಿರ್ಬಂಧವನ್ನು ತೆಗೆದುಹಾಕಲಾಗಿತ್ತು. ಅದನ್ನು ಆಧರಿಸಿ ಈಗ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ



ಬದುಕಿನಲ್ಲಿ ಭರವಸೆ ಬೇಕು

ನುಡಿ ಬೆಳಗು — ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 175

ಈ ಜಗತ್ತು ದೇವನ ಅಡುಗೆ ಮನೆ. ನಮ್ಮ ಅಡುಗೆ ಮನೆಗೂ ದೇವನ ಅಡುಗೆ ಮನೆಗೂ ಬಹಳ ವ್ಯತ್ಯಾಸ ಇದೆ. ಅಲ್ಲಿ ಒಂದು ಆಕಳು ಇದೆ. ನೀವು ಅದನ್ನು ಬಿಟ್ಟರೆ ಅದು ಹಳ್ಳಕ್ಕೆ ಹೋಗಿ ರಾಡಿ ನೀರು ಕುಡಿಯುತ್ತದೆ. ಕಸಕಡ್ಡಿ ತಿನ್ನುತ್ತದೆ. ಅಂತಹ ಆಹಾರ ತಿಂದ ಆಕಳು ತನ್ನ ಕರುವಿಗೆ ಹಾಲುಣಿಸಿದರೆ ಅದಕ್ಕೆ ಯಾವುದೇ ಇನ್‌ಫೆಕ್ಷನ್ ಆಗಲ್ಲ. ಇದು ಭಗವಂತನ ದಾಸೋಹ. ನಮ್ಮ ದಾಸೋಹದಲ್ಲಿ ಸ್ವಲ್ಪ ನೀರು ಬದಲಾದರೆ ನೆಗಡಿ ಬರುತ್ತದೆ. ಯಾವಯಾವುದೋ ಗಿಡದ ಹಣ್ಣು ತಿನ್ನುವ, ಎಲ್ಲಿಯೋ ಸಿಕ್ಕ ನೀರು ಕುಡಿಯುವ ಯಾವುದೇ ಪಕ್ಷಿಗಳಿಗೆ ಗಂಟಲು ನೋವು ಬಂದಿಲ್ಲ. ಭಗವಂತನ ದಾಸೋಹ ಅಷ್ಟು ಅದ್ಭುತ. ನಮ್ಮ ದಾಸೋಹದಲ್ಲಿ ಇನ್‌ಫೆಕ್ಷನ್ ಇದೆ. ನಮ್ಮದು ಅಚ್ಚಿನ ಮೊಳೆ. ಆದರೆ ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ನವನವೀನ. ತನುಮನಧನ ಎಲ್ಲವೂ ಗುಹೇಶ್ವರನ ಸ್ವತ್ತು. ನಮ್ಮದು ಎನ್ನುವುದು ಏನೂ ಇಲ್ಲ ಜಗತ್ತಿನಲ್ಲಿ. ನಾವು ಸುಮ್ಮನೆ ಹೆಸರಿಗೆ ಬಡಿದಾಡುತ್ತೇವೆ. ಆಕಳು ಹಾಲು ಕೊಟ್ಟಿದೆ. ನಾವು ಪ್ಯಾಕೆಟ್ ಮೇಲೆ ನಮ್ಮ ಹೆಸರು ಬರೆದುಕೊಂಡಿದ್ದೇವೆ. ಆದರೆ ಆಕಳು ತನ್ನ ಹಾಲಿನ ಮೇಲೆ ಹೆಸರು ಬರೆದುಕೊಂಡಿಲ್ಲ. ಭೂಮಿತಾಯಿ ಅಕ್ಕಿ ಕೊಡ್ತಾಳ. ಅಕ್ಕಿ ಪ್ಯಾಕೆಟ್ ಮೇಲೆ ನಮ್ಮ ಹೆಸರು ಬರೆದುಕೊಂಡಿದ್ದೇವೆ. ಆದರೆ ಭೂಮಿ ತಾಯಿ ತನ್ನ ಹೆಸರು ಬರೆದುಕೊಂಡಿಲ್ಲ. ಚೀಲದ ಮೇಲೆ ನಮ್ಮ ಫ್ಯಾಕ್ಟರಿ ಹೆಸರು ಇರಬೇಕು, ತಲೆಯಲ್ಲಿ ಇದು ಅವನು ಕೊಟ್ಟಿದ್ದು ಎಂಬ ಉಸಿರು ಇರಬೇಕು.

ಕೆಎಲ್‌ಇ ಸಂಸ್ಥೆಯಲ್ಲಿ ಭೂಮರಡ್ಡಿ ಬಸಪ್ಪನವರು ಅಂತ ಒಬ್ಬರು ಇದ್ದರು. ಅವರು 1946ರಲ್ಲಿ ಐದು ಲಕ್ಷ ರೂಪಾಯಿ ದಾನ ಮಾಡಿದರು. ಇನ್ನೂ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ನಮ್ಮ ಭಾಗಕ್ಕೆ ಒಂದು ಎಂಜಿನಿಯರಿಂಗ್ ಕಾಲೇಜು ಆಗಬೇಕು ಎಂದು ಹಣ ನೀಡಿದರು. 1970ರ ವೇಳೆಗೆ ಆ ಕಾಲೇಜು ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. ಮುಚ್ಚುವ ಪ್ರಸಂಗ ಬಂತು. ಆಗ ಬಸಪ್ಪನವರು ಕಾಲೇಜಿನವರನ್ನು ಕರೆದು 'ನನ್ನ ಹೆಸರು ಹೋದರೂ ಪರವಾಗಿಲ್ಲ. ಕಾಲೇಜು ಮುಂದಕ್ಕೆ ನಡೀಬೇಕು. ಅದಕ್ಕೆ ಯಾರಾದರೂ ಹಣ ಸಹಾಯ ಮಾಡಿದರೆ ಅವರ ಹೆಸರು ಹಾಕಿ' ಎಂದರು. ಇದು ದೈವೀ ಭಾವ. ಹೆಸರಿಗಾಗಿ ದುಡಿಯುವುದಲ್ಲ. ಜಗತ್ತು ಬೆಳೆಯಲಿ ಎಂದು ದುಡಿಯುವ ಸೇವಾ ಮನೋಭಾವ ಇರಬೇಕು. ದೇವನಿಗೆ ಪತಿ ಎಂದು ಕರೆಯುತ್ತಾರೆ. ನಮ್ಮ ಪತಿ ಬೇರೆ. ಪತಿ ಎಂದರೆ ಒಡೆಯ. ಇವನು ಬೆಳಿಗ್ಗೆ ಎದ್ದ ತಕ್ಷಣ ಚಾ ಕುಡಿದು ಚಾಪತಿಯಾಗುತ್ತಾನೆ. ಸಂಜೆಯಾದರೆ ನಾಪತಿ. ಯಾವ ಅಂಗಡಿಗೆ ಹೋಗುತ್ತಾನೋ ಗೊತ್ತಾಗೋದಿಲ್ಲ. ಇವನ ಕುಡಿತ ಬಿಡಿಸಲು ಪತ್ನಿ ನಮ್ಮಲ್ಲಿ ಅಲೋಪಥಿ, ಹೋಮಿಯೋಪಥಿ, ನ್ಯಾಚುರೋಪಥಿ ಎಲ್ಲ ಮುಗಿಸಿ ತಿರುಪತಿಗೆ ಹೋದರೂ ಇವ ಬಿಡಲಿಲ್ಲ ಕಿತಾಪತಿ. ಅದಕ್ಕೆ ಮನದಲ್ಲಿ ಪಶುಪತಿಯ ಭಾವ ಇರಬೇಕು.

ತಾಯಿ ಶಿಶುವನ್ನು ಮೇಲಕ್ಕೆ ಹಾರಿಸಿದರೂ ಮಗು ನಗುತ್ತಿರುತ್ತದೆ. ಮಗು ಯಾಕೆ ನಗುತ್ತಿರುತ್ತದೆ ಎಂದರೆ, ಆ ಮಗುವಿಗೆ ತನ್ನ ತಾಯಿ ಕೈಬಿಡುವುದಿಲ್ಲ ಎಂಬ ಭರವಸೆ ಇರುತ್ತದೆ. ಹಾಗೆಯೇ ನಮಗೆ ಈ ಜನ್ಮಕೊಟ್ಟ ದೇವ ನಮ್ಮ ಕೈಬಿಡುವುದಿಲ್ಲ ಎಂಬ ನಂಬಿಕೆ ಇರಬೇಕು. ಇದು ದೇವ ಕೊಟ್ಟ ಪ್ರಸಾದ ಎಂಬ ಭಾವ ಇದ್ದರೆ ಸಮಾಧಾನ ಇರುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 17, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ಥಿ ಗಂ. 15-24 ನಕ್ಷತ್ರ: ಅನುರಾಧ ಗಂ. 05-55 ಯೋಗ: ವರಿಯಾನ್ ಗಂ. 24-50 ಕರಣ: ಬಾಲವ ಗಂ. 15-24, ಮೇಷ ಮಾಸದ 04 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-20 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 18 ಶವ್ವಾಲ್
ಅದೃಷ್ಟ ಸಂಖ್ಯೆ : 5, 3

ಮೇಷ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ರಕ್ಷಣಾ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಆಯ್ಕೆಗೊಳ್ಳುವಿರಿ. ರಾಜಕೀಯ ವರಿಷ್ಠರೊಂದಿಗೆ ಮಾತುಕತೆ ಇರಲಿದೆ.

ವೃಷಭ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯ ಹೋಗಲಾಡಿಸಿ ಸಂಘಟಿಸಲು ಸುದಿನ. ಮಕ್ಕಳಲ್ಲಿ ಒಳ್ಳೆಯ ಸಾಮರಸ್ಯವನ್ನು ಕಾಣುವಿರಿ. ತಾಳ್ಮೆ ಕಳೆದುಕೊಂಡಲ್ಲಿ ಅನವಶ್ಯಕವಾಗಿ ಕಲಹ ಉಂಟಾದೀತು.

ಮಿಥುನ: ದಾಂಪತ್ಯದಲ್ಲಿ ಸಂಶಯದ ವಾತಾವರಣ ಸೃಷ್ಟಿಯಾಗದಂತೆ ಜೀವನವನ್ನು ನಡೆಸಿ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೊದಲು ಎರಡೆರಡು ಬಾರಿ ಯೋಚಿಸುವುದು ಅಗತ್ಯವಾಗಿದೆ.

ಕರ್ಕಾಟಕ: ಹೆಗಲಿಗೆ ಹೆಗಲು ಕೊಡುತ್ತಿದ್ದ ಗೆಳೆಯನ ಜೊತೆ ಒಂದೆರೆಡು ಜೋರಿನ ಮಾತುಗಳನ್ನು ಆಡುವಿರಿ. ಗೃಹೋಪಯೋಗಿ ವಸ್ತುಗಳ ಮಾರಾಟಗಾರರಿಗೆ ಲಾಭವಿದೆ.

ಸಿಂಹ: ಜವಳಿ ವ್ಯಾಪಾರಿಗಳು ಪ್ರಚಾರದಿಂದಾಗಿ ಉತ್ತಮ ವ್ಯಾಪಾರವನ್ನು ನಡೆಸಬಹುದು. ಶ್ರಮಭರಿತವಾಗಿದ್ದರೂ ವಿರಾಮ ದೊರೆಯುವುದು. ಎಲ್ಲವೂ ನಿಮ್ಮಿಚ್ಛೆಯಂತೆ ನಡೆಯಲಿದೆ.

ಕನ್ಯಾ: ನಿರಂತರವಾಗಿ ತೊಂದರೆಗಳನ್ನೇ ಅನುಭವಿಸುತ್ತಿದ್ದ ನಿಮಗೆ ಈಗಿನ ಪ್ರಶಾಂತ ವಾತಾವರಣದಿಂದ ನೆಮ್ಮದಿ ಸಿಗಲಿದೆ. ಸಂಜೆಯ ಕಾಲದಲ್ಲಿ ಸಣ್ಣ ವಾಯುವಿಹಾರ ಮಾಡುವುದರಿಂದ ಉಲ್ಲಾಸ ಮೂಡುವುದು.

ತುಲಾ: ಕನಸು ನನಸಾಗುವ ಎಲ್ಲಾ ಲಕ್ಷಣಗಳೂ ಕಾಣುವುದು. ತಾಯಿ ತಂದೆ ಜತೆ ಉತ್ತಮ ಸಮಯವನ್ನು ಕಳೆಯುವಿರಿ. ಸಮುದ್ರದ ಜೊತೆಯಲ್ಲಿ ಕೆಲಸ ಮಾಡುವವರು ಹವಾಮಾನವನ್ನು ನೋಡಿಕೊಳ್ಳಿ.

ವೃಶ್ಚಿಕ: ಮಗಳು ಇಡುವ ಬೇಡಿಕೆಗಳನ್ನು ಈಡೇರಿಸುವ ಮುನ್ನ ಆರ್ಥಿಕ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡಿ. ಕುಟುಂಬದವರಲ್ಲಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಮುಕ್ತವಾಗಿ ಮಾತನಾಡುವಿರಿ.

ಧನು: ಹೊರಗೆ ತಿನ್ನುವ ಪ್ರಸಂಗ ಬಂದರೆ ಆದಷ್ಟು ಆರೋಗ್ಯಕರ ಆಹಾರವನ್ನು ಮಾತ್ರ ಸೇವಿಸಿ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಇದ್ದ ಗೊಂದಲಗಳನ್ನು ಪರಿಹರಿಸುವವರು ಸಿಗುವರು.

ಮಕರ: ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಹೆಚ್ಚು ಆನಂದ ಸಿಗಬಹುದು. ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

ಕುಂಭ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾಗಬಹುದು. ಸ್ವಲ್ಪ ಪ್ರಯತ್ನ ಪಟ್ಟರೆ ಜಯಗಳಿಸಬಹುದು. ಮನೆಯ ನಿರ್ಮಾಣ ಕೆಲಸಗಳು ತುಂಬಾ ಸರಾಗವಾಗಿ ಸಾಗಲಿವೆ.

ಮೀನ: ಹೆಂಡತಿಗೆ ಅಥವಾ ಮಕ್ಕಳಿಗೆ ಸಮಯವನ್ನು ಸ್ವಲ್ಪವಾದರೂ ಮೀಸಲಿಡಿ. ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವವು. ನೂತನವಾದ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ.

ಪದಬಂಧ 6014

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಾತಃಕಾಲವಿದು (2)
3.ಒಳ್ಳೆಯ ಅದೃಷ್ಟವನ್ನು ಹೊಂದಿರುವಿಕೆ (3)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲ! ಬಹಳ ಹತ್ತಿರ! (3)
7.ಮಾವು ಅಥವಾ ನೆಲ್ಲಿಕಾಯಿಯ ಮುರಬ್ಬ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರವು ತನ್ನ ಸ್ವಾಮ್ಯವನ್ನು ಸ್ಥಾಪಿಸುವುದು (5)
9.ಮಾಸದ ನಂತರ ಕಟ್ಟಿಸಿದ ಗೋರಿ (3)
10.ಕಕ್ಷದೊಳಗಿರುವ ಕೃಪಾ ದೃಷ್ಟಿ (3)
13.ಹಲ್ಲುಗಳನ್ನು ತೊಳೆಯುವುದು (5)
14.ಗತಿಸಿದ ವಿಭೂತಿ ಪುರುಷರ ಜನ್ಮ ದಿನ (3)
15.ಸಂಕಟದಿಂದ ಕಟ್ಟಿದ ಸೇತುವೆ (2)

ಮೇಲಿಂದ ಕೆಳಕ್ಕೆ
1.ಯಾವುದೇ ಆಹಾರವನ್ನು ಸೇವಿಸದಿರುವಿಕೆ (4)
2.ಕುಂಕುಮ ಅಥವಾ ಅರಿಶಿಣ ಸವರಿದ ಅಕ್ಕಿ (3)
3.ಹರಸುತಲಿದ್ದಾಗ ಕಾಣಿಸಿದ ಮಗ (2)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವನು (4)
11.ಈತ ಜೈನ ಸನ್ಯಾಸಿ (4)
12.ಅಧೀನ ರಾಜನಿಲ್ಲಿದ್ದಾನೆ (3)
13.ದಮಯಂತಿ ನೋಡಿದ ಅನೆ (2)



6013ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮದಗಜ 3.ಒಬ್ಬಂಟಿಗ 5.ಜುಲುಮೆ 6.ರಿಕಾಪು 8.ವಿಚಾರ 9.ಹರುಷ 10.ನಗದು 12.ಸಂಭಾವ್ಯ 14.ರತ್ನಾಕರ 15.ನಡುಮನೆ

ಮೇಲಿಂದ ಕೆಳಕ್ಕೆ:
1.ಮದನಾರಿ 2.ಜಹಜು 3.ಒಲುಮೆ 4.ಗಡಿಯಾರ 7.ಪುರುಷ 8.ವಿಧಾನ 9.ಹರಿಕಾರ 11.ದುರ್ವರ್ತನೆ 12.ಸಂಕರ 13.ವ್ಯಸನ

ಸುಡೊಕು 6399

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6398 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಇಂಡಿಯನ್ ಪ್ರೀಮಿಯರ್ ಲೀಗ್ 2025

ಅಥ್ಲೆಟಿಕ್ಸ್: ನಿತಿನ್, ತನ್ನುಗೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ನಿತಿನ್ ಗುಪ್ತಾ ಅವರು ಸೌದಿ ಅರೇಬಿಯಾದ ದಮ್ಮಾಮ್‌ನಲ್ಲಿ ನಡೆಯುತ್ತಿರುವ ಆರನೇ ಏಷ್ಯನ್ 18 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 5000 ಮೀ. ರೇಸ್ ವಾಕ್‌ನಲ್ಲಿ ಬುಧವಾರ ಬೆಳ್ಳಿ ಪದಕ ಗೆದ್ದರು. ಮಹಿಳೆಯರ 400 ಮೀ. ಓಟದಲ್ಲಿ ತನ್ನು ಬೆಳ್ಳಿ ಗೆದ್ದರು.

17 ವರ್ಷ ವಯಸ್ಸಿನ ಗುಪ್ತಾ 20ನಿ.21.51 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿ ಎರಡನೇ ಸ್ಥಾನ ಪಡೆದರು. ಚೀನಾದ ಝು ನಿಂಗ್‌ಹಾವೊ ಈ ದೂರವನ್ನು 20 ನಿ.21.50 ಸೆ.ಗಳಲ್ಲಿ ಪೂರೈಸಿ ಚಿನ್ನ ಗೆದ್ದರು.

ಪಟ್ನಾದಲ್ಲಿ ಕಳೆದ ತಿಂಗಳು ನಡೆದ ರಾಷ್ಟ್ರೀಯ ಯುವ ಅಥ್ಲೆಟಿಕ್ ಕೂಟದಲ್ಲಿ ಗುಪ್ತಾ ಈ ಸ್ಪರ್ಧೆಯನ್ನು 19ನಿ.24.48 ಸೆ.ಗಳಲ್ಲಿ ಕ್ರಮಿಸಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿದ್ದರು.

ತನ್ನು 400 ಮೀ. ಓಟವನ್ನು 57.63 ಸೆಕೆಂಡುಗಳಲ್ಲಿ ಕ್ರಮಿಸಿದರು. ಜಪಾನ್‌ನ ಇಮಾಮಿನ (57.27 ಸೆ.) ಚಿನ್ನ ಗೆದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಆರ್. ನಿರ್ಮಲ ದೇವಿ
(ಶ್ರೀ ಎಂ. ಬೈಯಣ್ಣ ಇವರ ಧರ್ಮಪತ್ನಿ)
ಇವರು ದಿನಾಂಕ: 7.4.2025ನೇ ಸೋಮವಾರ ರಾತ್ರಿ 9:00ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ: 17.4.2025 ಗುರುವಾರ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ: ದುಃಖತಪ್ತರು:–
ಶ್ರೀ ಬೈಯಣ್ಣ ಹಾಗೂ ಕುಟುಂಬದವರು
ವಿಳಾಸ: #114, 5ನೇ ಮುಖ್ಯರಸ್ತೆ, ಪೂರ್ವ ಎನ್.ಜಿ.ಇ.ಎಫ್, ಕಸ್ತೂರಿ ನಗರ, ಬಿ. ಚನ್ನಸಂದ್ರ ಮುಖ್ಯರಸ್ತೆ, ಬೆಂಗಳೂರು–560043
9880266274, 9008990077

ಮಿಂಚಿದ ಮಿಚೆಲ್ ಸ್ಟಾರ್ಕ್ • ಗೆಲುವಿನ ಹೊಸ್ತಿಲಲ್ಲಿ ಮುಗ್ಗರಿಸಿದ ರಾಯಲ್ಸ್

ಕ್ಯಾಪಿಟಲ್ಸ್‌ಗೆ 'ಸೂಪರ್' ಜಯ

ನವದೆಹಲಿ (ಪಿಟಿಐ): ಅನುಭವಿ ವೇಗಿ ಮಿಚೆಲ್ ಸ್ಟಾರ್ಕ್ ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಸೂಪರ್ ಓವರ್‌ವರೆಗೆ ಬೆಳೆದ ಐಪಿಎಲ್ ರೋಚಕ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಲಿಸಿ ಗೆಲುವಿನ ಹಳಿಗೆ ಮರಳಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಗೆಲುವಿಗೆ 189 ರನ್‌ಗಳ ಗುರಿಯನ್ನು ಪಡೆದಿದ್ದ ರಾಯಲ್ಸ್ ತಂಡವು ಒಂದು ಹಂತದಲ್ಲಿ 19 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 180 ರನ್ ಗಳಿಸಿ ಗೆಲುವಿನ ಹಾದಿಯಲ್ಲಿತ್ತು. ಆದರೆ, ಕೊನೆಯ ಓವರ್‌ನಲ್ಲಿ ಬಿಗಿ ದಾಳಿ ನಡೆಸಿದ ಸ್ಟಾರ್ಕ್ ಕೇವಲ ಎಂಟು ರನ್ ನೀಡಿದ್ದರಿಂದ ಪಂದ್ಯ ಸಮಬಲಗೊಂಡಿತು.

ಸೂಪರ್ ಓವರ್‌ನಲ್ಲಿ ಮತ್ತೆ ದಾಳಿಗಿಳಿದ ಸ್ಟಾರ್ಕ್ ಬರೀ 11 ರನ್‌ಗೆ ರಾಯಲ್ಸ್ ತಂಡವನ್ನು ಕಟ್ಟಿಹಾಕಿದರು. ಜೊತೆಗೆ ಎರಡು ರನೌಟ್‌ಗಳು ಆದವು. ಇದಕ್ಕೆ ಉತ್ತರವಾಗಿ ಕೆ.ಎಲ್. ರಾಹುಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರು ಸಂದೀಪ್ ಶರ್ಮಾ ಅವರ ದಾಳಿಯನ್ನು ಸಮರ್ಥವಾಗಿ ಎದುರಿಸಿ ನಾಲ್ಕೇ ಎಸೆತದಲ್ಲಿ 13 ರನ್ ಗಳಿಸಿದರು. ನಾಲ್ಕನೇ ಎಸೆತವನ್ನು ಸ್ಟಬ್ಸ್ ಅವರು ಮಿಡ್‌ವಿಕೆಟ್ ಮೇಲೆ ಸಿಕ್ಸರ್ ಎತ್ತಿ ತವರಿನ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು.

ಈ ಗೆಲುವಿನೊಂದಿಗೆ ಡೆಲ್ಲಿ ತಂಡವು ಮತ್ತೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿತು. ರಾಜಸ್ಥಾನ ತಂಡಕ್ಕೆ ಇದು ಏಳು ಪಂದ್ಯಗಳಲ್ಲಿ ಐದನೇ ಸೋಲಾಗಿದೆ.

ಪಂದ್ಯದ ಬಳಿಕ ಪ್ರತಿಕ್ರಿಯಿಸಿದ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್ ಅವರು ಸ್ಟಾರ್ಕ್ ಅವರ ಬೌಲಿಂಗ್ ಅನ್ನು ಶ್ಲಾಘಿಸಿ, 'ಅವರು ಪಂದ್ಯವನ್ನು ನಮ್ಮ ಕೈಯಿಂದ ಕಿತ್ತುಕೊಂಡರು' ಎಂದರು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಅಭಿಷೇಕ್ ಪೊರೆಲ್ (49;37ಎ, 4x5, 6x1) ಮತ್ತು ಕೆ.ಎಲ್. ರಾಹುಲ್ (38;32ಎ, 4x2, 6x2) ಅವರ ಉಪಯುಕ್ತ ಜೊತೆಯಾಟದ ಬಲದಿಂದ 5 ವಿಕೆಟ್‌ಗಳಿಗೆ 188 ರನ್ ಗಳಿಸಿತು.

ರಾಹುಲ್ ಮತ್ತು ಅಭಿಷೇಕ್ 3ನೇ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದರು. ನಂತರದಲ್ಲಿ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 34; 18ಎ, 4X2, 6X2) ಮತ್ತು ಅಕ್ಷರ್ ಪಟೇಲ್ (34; 14ಎ, 4X4, 6X2) ಕೂಡ ತಂಡದ ಮೊತ್ತ ಬೆಳೆಯಲು ಕಾರಣರಾದರು. ಜೋಫ್ರಾ ಆರ್ಚರ್ ಎರಡು ವಿಕೆಟ್ ಕಬಳಿಸಿದ್ದರು.

ಗುರಿಯನ್ನು ಬೆನ್ನಟ್ಟಿದ ರಾಯಲ್ಸ್ ತಂಡವು ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ (51;37, 4x3, 6x4) ಮತ್ತು ನಾಯಕ ಸಂಜು ಸ್ಯಾಮ್ಸನ್ (31) ತಂಡಕ್ಕೆ ಉತ್ತಮ ಆರಂಭ ಒದಗಿಸಿದ್ದರು. ತಂಡದ ಮೊತ್ತ 61 ಆಗಿದ್ದಾಗ ಸಂಜು ಅವರು ಗಾಯಗೊಂಡು ನಿವೃತ್ತರಾದರು. ನಂತರ ಬಂದ ರಿಯಾನ್ ಪರಾಗ್ (8) ನಿರಾಸೆ ಮೂಡಿಸಿದರು.

ಆದರೆ, ನಿತೀಶ್ ರಾಣಾ (51;28ಎ, 4x6, 6x2) ಮಧ್ಯಮ ಕ್ರಮಾಂಕದಲ್ಲಿ ತಂಡಕ್ಕೆ ಆಸರೆಯಾದರು. ಅವರ ನಿರ್ಗಮನದ ನಂತರ ಡೆಲ್ಲಿ ಬೌಲರ್‌ಗಳು ಹಿಡಿತ ಸಾಧಿಸಿದರು. ಧ್ರುವ್ ಜುರೇಲ್ (ಔಟಾಗದೇ 26;17ಎ) ಮತ್ತು ಶಿಮ್ರಾನ್ ಹೆಟ್ಮೆಯರ್ (ಔಟಾಗದೇ 15;9ಎ) ಅವರು ಮುರಿಯದ ಮೂರನೇ ವಿಕೆಟ್‌ಗೆ 27 (14ಎ) ರನ್ ಸೇರಿದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5ಕ್ಕೆ188 (ಅಭಿಷೇಕ್ ಪೊರೆಲ್ 49, ಕೆ.ಎಲ್. ರಾಹುಲ್ 38, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 34, ಅಕ್ಷರ್ ಪಟೇಲ್ 34, ಜೋಫ್ರಾ ಆರ್ಚರ್ 32ಕ್ಕೆ2). ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 4ಕ್ಕೆ 188 (ಯಶಸ್ವಿ ಜೈಸ್ವಾಲ್ (51, ಸಂಜು ಸ್ಯಾಮ್ಸನ್ 31 (ಗಾಯಗೊಂಡು ನಿವೃತ್ತಿ), ನಿತೀಶ್ ರಾಣಾ 51, ಧ್ರುವ್ ಜುರೇಲ್ ಔಟಾಗದೇ 26, ಶಿಮ್ರಾನ್ ಹೆಟ್ಮೆಯರ್ ಔಟಾಗದೇ 15; ಮಿಚೆಲ್ ಸ್ಟಾರ್ಕ್ 36ಕ್ಕೆ 1, ಅಕ್ಷರ್ ಪಟೇಲ್ 23ಕ್ಕೆ 1). ಫಲಿತಾಂಶ: ಸೂಪರ್ ಓವರ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಗೆ ಜಯ. ಪಂದ್ಯದ ಆಟಗಾರ: ಮಿಚೆಲ್ ಸ್ಟಾರ್ಕ್

ವಿಕೆಟ್ ಪಡೆದ ಮಿಚೆಲ್ ಸ್ಟಾರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಬೂಮ್ರಾಗೆ ಸನ್ ಸವಾಲು

ವಾಂಖೆಡೆಯಲ್ಲಿ ಮುಂಬೈ–ಹೈದರಾಬಾದ್ ಮುಖಾಮುಖಿ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಈಗ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಫೋಟಕ ಶೈಲಿಯ ಬ್ಯಾಟರ್‌ಗಳ ಎದುರು ಬೌಲಿಂಗ್ ಮಾಡುವ ಕಠಿಣ ಸವಾಲು ಎದುರಾಗಿದೆ.

ಗಾಯದಿಂದ ಸುಮಾರು ಮೂರು ತಿಂಗಳು ವಿಶ್ರಾಂತಿಯಲ್ಲಿದ್ದ ಬೂಮ್ರಾ ಈಚೆಗೆ ಐಪಿಎಲ್‌ನಲ್ಲಿ ಕಣಕ್ಕಿಳಿದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರಿನ ಪಂದ್ಯದಲ್ಲಿ ಬೂಮ್ರಾ ಬೌಲಿಂಗ್ ಪರಿಣಾಮಕಾರಿ ಆಗಿರಲಿಲ್ಲ. ಯಾರ್ಕರ್‌ಗಳನ್ನು ಪ್ರಯೋಗಿಸುವಲ್ಲಿ ನಿಖರತೆ ಇರಲಿಲ್ಲ. ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಕರುಣ್ ನಾಯರ್ ಕೂಡ ಬೂಮ್ರಾ ಎಸೆತಗಳನ್ನು ದಂಡಿಸಿದ್ದರು. ಆ ಪಂದ್ಯದಲ್ಲಿ ಬೂಮ್ರಾ 44 ರನ್ ನೀಡಿದ್ದರು.

31 ವರ್ಷದ ಬೂಮ್ರಾ ಅವರ ಮುಂದೆ ಈಗ ಕಠಿಣ ಪರೀಕ್ಷೆ ಎದುರಾಗಿದೆ. ಈಚೆಗಷ್ಟೇ ಮಿಂಚಿನ ವೇಗದ ಶತಕ ಬಾರಿಸಿದ ಅಭಿಷೇಕ್ ಶರ್ಮಾ, ಬೀಸು ಹೊಡೆತಗಳ ಪರಿಣತರಾದ ಇಶಾನ್ ಕಿಶನ್, ಟ್ರಾವಿಸ್ ಹೆಡ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರನ್ನು ಕಟ್ಟಿಹಾಕುವ ಸವಾಲು ಬೂಮ್ರಾ ಮುಂದಿದೆ.

ಐದು ಬಾರಿಯ ಚಾಂಪಿಯನ್ ಮುಂಬೈ ತಂಡದ ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಕೂಡ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಅವರು ಉತ್ತಮ ಆರಂಭ ನೀಡಿದರೆ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಅನುಕೂಲವಾಗಲಿದೆ. ಅವರು ಕಳೆದ ಐದು ಪಂದ್ಯಗಳಿಂದ 56 ರನ್ ಮಾತ್ರ ಗಳಿಸಿದ್ದಾರೆ. ಹೀಗಾಗಿ ಬ್ಯಾಟಿಂಗ್ ವಿಭಾಗವು ಸೂರ್ಯಕುಮಾರ್ ಯಾದವ್ ಮತ್ತು ತಿಲಕ್ ವರ್ಮಾ ಅವರ ಸಾಮರ್ಥ್ಯದ ಮೇಲೆ ಅವಲಂಬಿತವಾಗಿದೆ.

ಸನ್‌ರೈಸರ್ಸ್ ತಂಡ ಕೂಡ ಟೂರ್ನಿಯಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಸತತ ನಾಲ್ಕು ಸೋಲುಗಳ ನಂತರ ಈಚೆಗೆ ಪಂಜಾಬ್ ಕಿಂಗ್ಸ್ ಎದುರು ಜಯಿಸಿತ್ತು. ಈ ಟೂರ್ನಿಯಲ್ಲಿ ಒಟ್ಟು ಆರು ಪಂದ್ಯಗಳನ್ನು ಆಡಿರುವ ತಂಡವು ಎರಡರಲ್ಲಿ ಗೆದ್ದಿದೆ. ಮುಂಬೈ ಕೂಡ ಆರು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದಿದೆ. ಉಳಿದ ಪಂದ್ಯಗಳಲ್ಲಿ ಸೋತಿದೆ. ಬೌಲಿಂಗ್ ವಿಭಾಗದಲ್ಲಿ ಹಾರ್ದಿಕ್ ಪಾಂಡ್ಯ, ಹರ್ಷಲ್ ಪಟೇಲ್ ಮತ್ತು ಇಶಾನ್ ಮಾಲಿಂಗ ಅವರು ಪ್ರಮುಖ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಸನ್‌ರೈಸರ್ಸ್ ಹೈದರಾಬಾದ್ ತಂಡದ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ (ಎಡ) ಮುಂಬೈ ಇಂಡಿಯನ್ಸ್ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ ಕ್ಯಾಪಿಟಲ್ಸ್	6	5	1	10	0.744
ಗುಜರಾತ್ ಟೈಟನ್ಸ್	6	4	2	8	1.081
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	4	2	8	0.672
ಪಂಜಾಬ್ ಕಿಂಗ್ಸ್	6	4	2	8	0.172
ಲಖನೌ ಸೂಪರ್ ಜೈಂಟ್ಸ್	7	4	3	8	0.086
ಕೋಲ್ಕತ್ತ ನೈಟ್ ರೈಡರ್ಸ್	7	3	4	6	0.547
ಮುಂಬೈ ಇಂಡಿಯನ್ಸ್	6	2	4	4	0.104
ರಾಜಸ್ಥಾನ ರಾಯಲ್ಸ್	7	2	5	4	-0.714
ಸನ್‌ರೈಸರ್ಸ್ ಹೈದರಾಬಾದ್	6	2	4	4	-1.245
ಚೆನ್ನೈ ಸೂಪರ್ ಕಿಂಗ್ಸ್	7	2	5	4	-1.276

ಆರೆಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 357 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಶೂಟಿಂಗ್ ವಿಶ್ವಕಪ್: ಸುರುಚಿಗೆ ಚಿನ್ನ, ಮನುಗೆ ಬೆಳ್ಳಿ

ಲಿಮಾ (ಪೆರು), (ಪಿಟಿಐ): ಹದಿಹರೆಯದ ಶೂಟರ್ ಸುರುಚಿ ಇಂದರ್ ಸಿಂಗ್ ಅವರು ಮತ್ತೊಮ್ಮೆ ಅಮೋಘ ಗುರಿಯ ಪ್ರದರ್ಶನ ನೀಡಿ, ಐಎಸ್‌ಎಸ್‌ಎಫ್ ವಿಶ್ವಕಪ್‌ನ ಮಹಿಳೆಯರ 10 ಮೀ. ಏರ್ ಪಿಸ್ತೂಲ್‌ನಲ್ಲಿ ಸತತ ಎರಡನೇ ಚಿನ್ನ ಗೆದ್ದರು.

ಪ್ಯಾರಿಸ್ ಒಲಿಂಪಿಕ್ಸ್‌ನ ಪದಕ ವಿಜೇತೆ ಮನುಭಾಕರ್ ಈ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದುಕೊಳ್ಳುವುದರೊಂದಿಗೆ ಭಾರತ ಪ್ರಾಬಲ್ಯ ಸಾಧಿಸಿತು.

ಝಜ್ಜರ್‌ನವರಾದ 18 ವರ್ಷ ವಯಸ್ಸಿನ ಸುರುಚಿ ಇತ್ತೀಚೆಗಷ್ಟೇ ಅರ್ಜೆಂಟೀನಾದ ಬ್ಯೂನೊ ಏರ್ಸ್‌ನಲ್ಲಿ ಚಿನ್ನ ಗೆದ್ದಿದ್ದರು. ಇಲ್ಲಿ 24 ಗುರಿಗಳ ಫೈನಲ್‌ನಲ್ಲಿ 243.6 ಪಾಯಿಂಟ್ಸ್ ಗಳಿಸಿದರು. 1.3 ಪಾಯಿಂಟ್ಸ್‌ನಿಂದ ಹಿಂದೆಬಿದ್ದ ಮನು ಬೆಳ್ಳಿ ಗೆದ್ದರು. ಕಂಚಿನ ಪದಕ ಚೀನಾದ ಯಾವೊ ಕ್ವಿಯಾನ್‌ಕ್ಸುನ್ ಪಾಲಾಯಿತು.

ಇದಕ್ಕೆ ಮೊದಲು, ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಸೌರಭ್ ಚೌಧರಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಇದರೊಂದಿಗೆ ಭಾರತ ಪದಕ ಪಟ್ಟಿಯಲ್ಲಿ ಮೂರು ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಪುರುಷರ ಏರ್ ಪಿಸ್ತೂಲ್‌ನಲ್ಲಿ ಚಿನ್ನ ಗೆದ್ದ ಚೀನಾ ಎರಡನೇ ಸ್ಥಾನದಲ್ಲಿದೆ.

60 ಶಾಟ್‌ಗಳ ಅರ್ಹತಾ ಸುತ್ತಿನಲ್ಲಿ ಸುರುಚಿ (582 ಪಾಯಿಂಟ್) ಎರಡನೇ ಸ್ಥಾನ ಗಳಿಸಿದ್ದರು. ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಮನು (578) ನಾಲ್ಕನೇ ಸ್ಥಾನ ಗಳಿಸಿದ್ದರು. ಕಣದಲ್ಲಿದ್ದ ಭಾರತದ ಮೂರನೇ ಸ್ಪರ್ಧಿ ಸೈನ್ಯಮ್ (571) 11ನೇ ಸ್ಥಾನಕ್ಕೆ ಸರಿದರು. ಆದರೆ ಫೈನಲ್‌ನಲ್ಲಿ ಸುರುಚಿ ಒಳ್ಳೆಯ ಲಯದೊಡನೆ ತಮ್ಮ ಪ್ರದರ್ಶನ ಮಟ್ಟವನ್ನು ಉನ್ನತ ಸ್ತರಕ್ಕೇರಿಸಿದರು.

ಸುರುಚಿ, ಇತ್ತೀಚೆಗೆ ಬ್ಯೂನೊ ಏರ್ಸ್‌ನಲ್ಲಿ ನಡೆದ ವಿಶ್ವಕಪ್ ಮೊದಲ ಹಂತದಲ್ಲಿ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು.

ಅಳತೆ ಮೀರಿದ ಬ್ಯಾಟ್ ಬದಲಿಸಿದ ಸುನಿಲ್, ನಾಕಿಯಾ

ಮುಲ್ಲನಪುರ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸುನಿಲ್ ನಾರಾಯಣ್ ಅವರು ಬ್ಯಾಟ್ ಅಳತೆ ನಿಯಮವನ್ನು ಉಲ್ಲಂಘಿಸಿದ ಮೊದಲ ಅಟಗಾರನಾದರು.

ಈ ಸಲದ ಐಪಿಎಲ್‌ನಲ್ಲಿ ಬ್ಯಾಟರ್‌ಗಳು ಬಳಸುವ ಬ್ಯಾಟ್‌ಗಳ ಅಳತೆಯನ್ನು ಫೀಲ್ಡ್ ಅಂಪೈರ್‌ಗಳು ಪರಿಶೀಲಿಸುವ ನಿಯಮ ಜಾರಿಯಾಗಿದೆ. ನಿಗದಿತ ಅಳತೆಯನ್ನು ಮೀರಿದ ಬ್ಯಾಟ್‌ಗಳನ್ನು ಬಳಸುವಂತಿಲ್ಲ.

ಮಂಗಳವಾರ ಪಂಜಾಬ್ ಕಿಂಗ್ಸ್ ಎದುರು ನಡೆದ ಪಂದ್ಯದಲ್ಲಿ ಸುನಿಲ್ ಅವರ ಬ್ಯಾಟ್ ಅನ್ನು ರಿಸರ್ವ್ ಅಂಪೈರ್ ಸೈಯದ್ ಖಾಲೀದ್ ಅವರು ಗೇಜ್ ಸಲಕರಣೆ ಮೂಲಕ ಪರಿಶೀಲಿಸಿದರು. ಬ್ಯಾಟಿನ ದಪ್ಪ ಭಾಗವು ನಿಗದಿತ ಅಳತೆ ಹೊಂದಿರಲಿಲ್ಲ. ಆದ್ದರಿಂದ ಅವರಿಗೆ ಬ್ಯಾಟ್ ಬದಲಿಸುವಂತೆ ಸೂಚಿಸಲಾಯಿತು.

ಇದೇ ವೇಳೆ ಅವರು ಅಂಪೈರ್ ಖಾಲೀದ್ ಜೊತೆಗೆ ವಾಗ್ವಾದ ನಡೆಸಿದರು. ಅದರಿಂದಾಗಿ ಫೀಲ್ಡ್ ಅಂಪೈರ್‌ಗಳಾದ ಮೋಹಿತ್ ಕೃಷ್ಣದಾಸ್ ಮತ್ತು ಸಾಯಿದರ್ಶನ್ ಕುಮಾರ್ ಅವರು ಸುನಿಲ್ ಬ್ಯಾಟ್ ಪರಿಶೀಲಿಸಿದರು. ಆಗಲೂ ಲೋಪ ಕಂಡುಬಂದಿತು. ಸುನಿಲ್ ಅವರು ಬ್ಯಾಟ್ ಬದಲಿಸಬೇಕಾಯಿತು.

ಇದೇ ಪಂದ್ಯದಲ್ಲಿ ಎನ್ರಿಚ್ ನಾಕಿಯಾ ಅವರ ಬ್ಯಾಟ್ ಕೂಡ ಪರಿಶೀಲನೆಯಲ್ಲಿ ಫೇಲ್ ಆಯಿತು. ಇದರಿಂದಾಗಿ ಅವರು ಕೂಡ ಬ್ಯಾಟ್ ಬದಲಿಸಬೇಕಾಯಿತು.

ಈ ಪಂದ್ಯದಲ್ಲಿ ಪಂಜಾಬ್ ಮೊದಲು ಬ್ಯಾಟಿಂಗ್ ಮಾಡಿ 111 ರನ್‌ಗಳ ಅಲ್ಪಮೊತ್ತ ಗಳಿಸಿತ್ತು. ಯಜುವೇಂದ್ರ ಚಾಹಲ್ (28ಕ್ಕೆ4) ಸ್ಪಿನ್ ಮೋಡಿಯ ಮುಂದೆ ಕೋಲ್ಕತ್ತ ತಂಡವು 95 ರನ್‌ಗಳಿಗೆ ಕುಸಿಯಿತು. ಪಂಜಾಬ್ 16 ರನ್‌ಗಳಿಂದ ಜಯಿಸಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,328
ಇಂದಿನ ಅಂತ್ಯ	23,437
▲	108
ದಿನದ ಕನಿಷ್ಠ	23,433

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹360-568
ದ್ವಿತಳಿ (ಬಿ.ವಿ) ₹426-705

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193
ಆರ್‌ಎಸ್‌ಎಸ್-5 ₹188
ಗುಡ್ ಲಾಟ್ ₹180
(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹28500
ಎಸಿ	₹16800
ಆರ್‌ಪಿ	₹23050
ಆರ್‌ಸಿ	₹12640

ಅಡಿಕೆ ಧಾರಣೆ (₹ಗಳಲ್ಲಿ)

ಸಿದ್ದಾಪುರ	
ಬಿಳಿಗೋಟು	25299-32559
ಚಾಲಿ	34369-42199
ಕೋಕ	16109-23299
ಹಳೇಚಾಲಿ	39649-40099
ಕೆಂಪುಗೋಟು	21319-22389
ರಾಶಿ	42689-49899
ತಟ್ಟಿಬೆಟ್ಟೆ	29099-44699

ಶಿವಮೊಗ್ಗ	
ಬೆಟ್ಟೆ	50599-58200
ಗೊರಬಲು	19869-30209
ರಾಶಿ	44569-57159
ಸರಕು	57669-95096

ಶಿರಸಿ	
ಬೆಟ್ಟೆ	27499-37099
ಬಿಳಿಗೋಟು	25191-33399
ಚಾಲಿ	35099-43200
ಕೆಂಪುಗೋಟು	16301-24999
ರಾಶಿ	42899-47669

10 ಗ್ರಾಂ ಚಿನ್ನದ ದರ ₹98,100

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಅಮೆರಿಕ ಮತ್ತು ಚೀನಾ ನಡುವೆ ತಲೆದೋರಿರುವ ಸುಂಕ ಸಮರದಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ದೃಷ್ಟಿ ನೆಟ್ಟಿದ್ದಾರೆ. ಇದರಿಂದ ಜಾಗತಿಕ ಮಟ್ಟದಲ್ಲೂ ಹಳದಿ ಲೋಹದ ಬೆಲೆಯಲ್ಲಿ ಹೆಚ್ಚಳವಾಗಿದೆ.

ಇದು ದೇಶೀಯ ಚಿನಿವಾರ ಪೇಟೆ ಮೇಲೂ ಪರಿಣಾಮ ಬೀರಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,650 ಏರಿಕೆಯಾಗಿದ್ದು, ₹98,100 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹97,650 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್‌ಗೆ (28.34 ಗ್ರಾಂ) 3,318 ಡಾಲರ್ (₹2.84 ಲಕ್ಷ) ಆಗಿದೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1,900 ಹೆಚ್ಚಳವಾಗಿದ್ದು, ₹99,400 ಆಗಿದೆ.

'ಚೀನಾ ಮೇಲೆ ಅಮೆರಿಕದ ಟ್ರಂಪ್ ಆಡಳಿತವು ರಫ್ತು ನೀತಿಗಳನ್ನು ಬಿಗಿಗೊಳಿಸಿದೆ. ಇದರಿಂದ ವ್ಯಾಪಾರ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಹಳದಿ ಲೋಹದ ಬೆಲೆ ಏರಿಕೆಯ ಹಾದಿ ಹಿಡಿದಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ವಿಶ್ಲೇಷಕ ಕಯ್ನಾತ್ ಚೈನ್ವಾಲಾ ಹೇಳಿದ್ದಾರೆ.

ಕರ್ನಾಟಕ: ಟೆಕ್ ನವೋದ್ಯಮಗಳಿಂದ ₹5,422 ಕೋಟಿ ಸಂಗ್ರಹ

ನವೋದ್ಯಮ: ತಗ್ಗಿದ ಹೂಡಿಕೆ

ನವದೆಹಲಿ (ಪಿಟಿಐ): ಕರ್ನಾಟಕದ ತಂತ್ರಜ್ಞಾನ ಆಧರಿತ ನವೋದ್ಯಮಗಳಲ್ಲಿ (ಟೆಕ್ ಸ್ಟಾರ್ಟ್‌ಅಪ್) ಬಂಡವಾಳ ಹೂಡಿಕೆ ಪ್ರಮಾಣ ಕಡಿಮೆಯಾಗಿದೆ ಎಂದು ಮಾರುಕಟ್ಟೆ ಸಂಶೋಧನೆ ಮತ್ತು ದತ್ತಾಂಶ ಸಂಗ್ರಹಣಾ ಸಂಸ್ಥೆ ಟ್ರ್ಯಾಕ್ಸನ್ ವರದಿ ಬುಧವಾರ ತಿಳಿಸಿದೆ.

2024ರ ನಾಲ್ಕನೇ (ಅಕ್ಟೋಬರ್‌ನಿಂದ ಡಿಸೆಂಬರ್) ತ್ರೈಮಾಸಿಕದಲ್ಲಿ ಟೆಕ್ ನವೋದ್ಯಮಗಳು ₹7,071 ಕೋಟಿ ಬಂಡವಾಳ ಸಂಗ್ರಹಿಸಿದ್ದವು. ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಜನವರಿಯಿಂದ ಮಾರ್ಚ್) ₹5,422 ಕೋಟಿ ಸಂಗ್ರಹಿಸಿವೆ. ಒಟ್ಟಾರೆ ಬಂಡವಾಳ ಸಂಗ್ರಹದಲ್ಲಿ ಶೇ 23ರಷ್ಟು ಇಳಿಕೆಯಾಗಿದೆ ಎಂದು ವರದಿಯು ವಿವರಿಸಿದೆ.

2024ರ ಮೊದಲ ತ್ರೈಮಾಸಿಕದಲ್ಲಿ ಟೆಕ್ ನವೋದ್ಯಮಗಳು ₹10,280 ಕೋಟಿ ಬಂಡವಾಳ ಸಂಗ್ರಹಿಸಿದ್ದವು ಎಂದು ಹೇಳಿದೆ.

1 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ ಹೆಚ್ಚಿನ (ಅಂದಾಜು ₹8,568 ಕೋಟಿ) ಮಾರುಕಟ್ಟೆ ಬಂಡವಾಳ ಹೊಂದಿರುವ ನವೋದ್ಯಮ ಕಂಪನಿಯನ್ನು 'ಯೂನಿಕಾರ್ನ್' ಎಂದು ಕರೆಯಲಾಗುತ್ತದೆ. ಕರ್ನಾಟಕದಲ್ಲಿ ಹಲವು ಯೂನಿಕಾರ್ನ್‌ಗಳಿವೆ. ಮೊದಲ ತ್ರೈಮಾಸಿಕದಲ್ಲಿ ಯಾವುದೇ ಹೊಸ ಅಥವಾ ಹಾಲಿ ಇರುವ ಯೂನಿಕಾರ್ನ್‌ಗಳು ಸಂಗ್ರಹಿಸಿರುವ ಬಂಡವಾಳ ಮೊತ್ತ ₹850 ಕೋಟಿ ದಾಟಿಲ್ಲ ಎಂದು ಹೇಳಿದೆ.

ತಂತ್ರಜ್ಞಾನ ಆಧರಿತ ನವೋದ್ಯಮಗಳಿಗೆ ಹೋಲಿಸಿದರೆ ಫಿನ್‌ಟೆಕ್ ಮತ್ತು ರಿಟೇಲ್ ವಲಯದ ನವೋದ್ಯಮಗಳ ಬಂಡವಾಳ ಸಂಗ್ರಹ ಸದೃಢವಾಗಿದೆ ಎಂದು ತಿಳಿಸಿದೆ.

ನವೋದ್ಯಮಗಳಿಗೆ ಆರ್ಥಿಕ ಬಲ ತುಂಬಲು ಆರಂಭಿಕ ಬಂಡವಾಳ (ಸೀಡ್ ಫಂಡ್) ಒದಗಿಸಲಾಗುತ್ತದೆ. ಸೀಡ್ ಫಂಡ್ ನೀಡಿಕೆಯಲ್ಲೂ ಇಳಿಕೆಯಾಗಿದೆ. ಒಟ್ಟು ₹490 ಕೋಟಿ ನೀಡಲಾಗಿದೆ. ಕಳೆದ ವರ್ಷದ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 14ರಷ್ಟು ಇಳಿಕೆಯಾಗಿದೆ ಎಂದು ವಿವರಿಸಿದೆ.

ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ನವೋದ್ಯಮಗಳ ಬಂಡವಾಳ ಸಂಗ್ರಹ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ವಲಯದ ನವೋದ್ಯಮಗಳು ₹2,558 ಕೋಟಿ, ಫಿನ್‌ಟೆಕ್ ನವೋದ್ಯಮ ₹1,894 ಕೋಟಿ ಹಾಗೂ ರಿಟೇಲ್ ವಲಯದ ನವೋದ್ಯಮಗಳು ₹1,880 ಕೋಟಿ ಬಂಡವಾಳ ಸಂಗ್ರಹಿಸಿವೆ.

ನವೋದ್ಯಮಗಳ ವಿಲೀನ ಮತ್ತು ಸ್ವಾಧೀನ ಪಡಿಸಿಕೊಳ್ಳುವಿಕೆಯಲ್ಲಿಯೂ ಏರಿಕೆಯಾಗಿದೆ. 21 ಟೆಕ್ ನವೋದ್ಯಮಗಳು ಈ ತ್ರೈಮಾಸಿಕದಲ್ಲಿ ವಿಲೀನಗೊಂಡಿವೆ. ಅಮೆಜಾನ್ ಕಂಪನಿಯು ₹1,285 ಕೋಟಿಗೆ ಫಿನ್‌ಟೆಕ್ ನವೋದ್ಯಮ ಆಕ್ಸಿಯೊ ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದೆ. ಆಕ್ಸೆಲ್, ಬ್ಲೂಮ್ ವೆಂಚರ್ಸ್ ಮತ್ತು ಸಿಕ್ವೊಯಾ ಕ್ಯಾಪಿಟಲ್ ಕಂಪನಿಯು, ಕರ್ನಾಟಕದ ಟೆಕ್ ನವೋದ್ಯಮಗಳಲ್ಲಿ ಹೂಡಿಕೆ ಮಾಡಿರುವ ಪ್ರಮುಖ ವೆಂಚರ್ ಕ್ಯಾಪಿಟಲ್ ಕಂಪನಿಗಳಾಗಿವೆ.

ಮುಖ್ಯಾಂಶಗಳು
- ಮೊದಲ ತ್ರೈಮಾಸಿಕದಲ್ಲಿ 21 ಟೆಕ್ ನವೋದ್ಯಮಗಳು ವಿಲೀನ
- ₹1,285 ಕೋಟಿಗೆ ಆಕ್ಸಿಯೊ ಕಂಪನಿ ಖರೀದಿಸಿದ ಅಮೆಜಾನ್

ಸಂಕ್ಷಿಪ್ತ ಸುದ್ದಿ

ಐಸಿಐಸಿಐ: ಉಳಿತಾಯ ಖಾತೆ ಬಡ್ಡಿ ಇಳಿಕೆ

ಮುಂಬೈ (ಪಿಟಿಐ): ದೇಶದ ಎರಡನೇ ಅತಿದೊಡ್ಡ ಖಾಸಗಿ ಬ್ಯಾಂಕ್ ಆದ ಐಸಿಐಸಿಐ ಬ್ಯಾಂಕ್, ಉಳಿತಾಯ ಖಾತೆ ಠೇವಣಿ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಬ್ಯಾಂಕ್‌ಗಳು ಠೇವಣಿ ಮೇಲಿನ ಬಡ್ಡಿದರ ಕಡಿತಕ್ಕೆ ಮುಂದಾಗಿವೆ. ಇತ್ತೀಚೆಗೆ ಎಚ್‌ಡಿಎಫ್‌ಸಿ ಬ್ಯಾಂಕ್ ಕೂಡ ಉಳಿತಾಯ ಖಾತೆಯ ಬಡ್ಡಿದರವನ್ನು ಕಡಿತಗೊಳಿಸಿದೆ.

ಐಸಿಐಸಿಐ ಬ್ಯಾಂಕ್‌ನ ಉಳಿತಾಯ ಖಾತೆದಾರರ ₹50 ಲಕ್ಷದವರೆಗಿನ ಮೊತ್ತಕ್ಕೆ ಶೇ 2.75ರಷ್ಟು ಹಾಗೂ ₹50 ಲಕ್ಷಕ್ಕಿಂತ ಹೆಚ್ಚು ಮೊತ್ತಕ್ಕೆ ಶೇ 3.25ರಷ್ಟು ಬಡ್ಡಿ ನಿಗದಿಪಡಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಉಳಿತಾಯ ಖಾತೆಯಲ್ಲಿನ ಮೊತ್ತಕ್ಕೆ ಶೇ 2.70ರಷ್ಟು ಬಡ್ಡಿ ನಿಗದಿಪಡಿಸಿದೆ.

ವಿಪ್ರೊ ಲಾಭ ಏರಿಕೆ

ನವದೆಹಲಿ (ಪಿಟಿಐ): 2024–25ನೇ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ನಾಲ್ಕನೇ ಅತಿಹೆಚ್ಚು ಐ.ಟಿ ಸೇವಾ ಕಂಪನಿ ವಿಪ್ರೊ ₹3,569 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2,834 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 26ರಷ್ಟು ಏರಿಕೆಯಾಗಿದೆ.

ಈ ತ್ರೈಮಾಸಿಕದಲ್ಲಿ ₹22,504 ಕೋಟಿ ವರಮಾನ ಗಳಿಸಿದೆ. ಪೂರ್ಣ ಆರ್ಥಿಕ ವರ್ಷದಲ್ಲಿ ₹89,088 ಕೋಟಿ ವರಮಾನ ಗಳಿಸಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಅಮೆರಿಕ ಅತಿದೊಡ್ಡ ಪಾಲುದಾರ ರಾಷ್ಟ್ರ

ನವದೆಹಲಿ (ಪಿಟಿಐ): ಅಮೆರಿಕವು ಸತತ ನಾಲ್ಕನೇ ವರ್ಷವೂ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮಿದೆ.

2024–25ನೇ ಆರ್ಥಿಕ ವರ್ಷದಲ್ಲಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ವಹಿವಾಟಿನ ಮೌಲ್ಯವು ₹11.28 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ. ಇದೇ ಅವಧಿಯಲ್ಲಿ ಚೀನಾದ ಜೊತೆಗಿನ ಭಾರತದ ವ್ಯಾಪಾರ ಕೊರತೆ ಅಂತರವು ₹8.49 ಲಕ್ಷ ಕೋಟಿ ಆಗಿದೆ. ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಈ ಅಂತರವನ್ನು ವ್ಯಾಪಾರ ಕೊರತೆ ಎಂದು ಅರ್ಥೈಸಲಾಗುತ್ತದೆ.

ಪಂಚವಟಿ ರೈಲಿನಲ್ಲಿ ಎಟಿಎಂ ಅಳವಡಿಕೆ

ಮುಂಬೈ (ಪಿಟಿಐ): 'ಮುಂಬೈ–ಮನಮಾಡ್ ನಡುವೆ ಸಂಚರಿಸುವ ಪಂಚವಟಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಾಯೋಗಿಕವಾಗಿ ಎಟಿಎಂ ಯಂತ್ರ ಅಳವಡಿಸಲಾಗಿದೆ' ಎಂದು ಕೇಂದ್ರ ರೈಲ್ವೆ ಪ್ರಕಟಿಸಿದೆ. ರೈಲಿನ ಎ.ಸಿ ಬೋಗಿಯಲ್ಲಿ ಖಾಸಗಿ ಬ್ಯಾಂಕ್‌ನ ಎಟಿಎಂ ಅಳವಡಿಸಿದ್ದು, ಶೀಘ್ರದಲ್ಲಿಯೇ ಪ್ರಯಾಣಿಕರಿಗೆ ಇದರ ಸೇವೆ ಲಭ್ಯವಾಗಲಿದೆ ಎಂದು ಹೇಳಿದೆ.

3ನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಬುಧವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿದಿದ್ದು, ಸೂಚ್ಯಂಕಗಳು ಏರಿಕೆ ಕಂಡಿವೆ.

ಬ್ಯಾಂಕಿಂಗ್ ಷೇರುಗಳ ಖರೀದಿ ಹೆಚ್ಚಳ ಹಾಗೂ ವಿದೇಶಿ ಬಂಡವಾಳದ ಒಳಹರಿವಿನ ಏರಿಕೆಯು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ನೆರವಾಯಿತು ಎಂದು ತಜ್ಞರು ತಿಳಿಸಿದ್ದಾರೆ.



ಚಿಲ್ಲರೆ ಹಣದುಬ್ಬರ ಇಳಿಕೆಯಾಗಿರುವುದರಿಂದ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಮುಂದಿನ ಸಭೆಯಲ್ಲಿ ಮತ್ತೆ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ. ಇದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದೆ ಎಂದು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 309 ಅಂಶ ಏರಿಕೆ ಕಂಡು 77,044 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಹೆಚ್ಚಳ ಕಂಡು, 23,437 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಇಂಡಸ್ ಇಂಡ್ ಬ್ಯಾಂಕ್ ಷೇರಿನ ಮೌಲ್ಯ ಶೇ 7.12ರಷ್ಟು ಹೆಚ್ಚಳವಾಗಿದೆ. ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹6,065 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ASTRO YATRA

11 ಗಂಟೆಯಲ್ಲಿ ಪರಿಹಾರ



ಮಹಾಗಣಪತಿ ಜ್ಯೋತಿಷ್ಯಂ
ಕೊಳ್ಳೆಗಾಲದ ಪ್ರಖ್ಯಾತ ಜ್ಯೋತಿಷ್ಯರು
ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿಗೆ 11 ಗಂಟೆಯಲ್ಲಿ 100% ಶಾಶ್ವತ ಪರಿಹಾರ
ಇವರು ಕೇರಳ, ಕೊಳ್ಳೆಗಾಲ, ಕಾಶಿ ಅಘೋರಿ ನಾಗಾ ಸಾಧುಗಳ ವಿದ್ಯೆಯನ್ನು ಸತತ 21 ವರ್ಷ ಅಧ್ಯಯನ ಮಾಡಿ ಲಕ್ಷಾಂತರ ಜನರ ಸಮಸ್ಯೆಗಳ ಪರಿಹಾರಕ್ಕೆ ಇಂದಿಗೂ ಕಾರಣಕರ್ತರಾಗಿದ್ದಾರೆ.
ಸ್ತ್ರೀ ಪುರುಷ ವಶೀಕರಣ 2 ಗಂಟೆಯಲ್ಲಿ ಮಾಡುತ್ತಾರೆ
ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರುಕಾಟ, ಲೈಂಗಿಕ ಸಮಸ್ಯೆ ಮತ್ತು ನೀವು ಯಾವುದೇ ಸಮಸ್ಯೆಗಳಿಂದ ನೊಂದಿದ್ದರೆ ಗುರೂಜಿಯವರನ್ನು ಸಂಪರ್ಕಿಸಿ
ಇಂದಿಗೂ ಸಾವಿರಾರು ಕುಟುಂಬಗಳು ಗುರೂಜಿಯವರಿಂದ ಪರಿಹಾರ ಪಡೆದುಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ.
ವಶೀಕರಣ ಸ್ಪೇಷಲಿಸ್ಟ್
ಪಂಡಿತ ಶ್ರೀ ಸೂರ್ಯನಾರಾಯಣ ಭಟ್ಟರು (ಗುರೂಜಿ)
ಮೊ : 9035405012

ಪ್ರವಾಸ
Travel

★ಶ್ರೇಯಸ್ ಟೂರ್ಸ್★
18.04.2025,09.05.2025
31.05.2025 9ದಿನಗಳು
ಈಶಾನ್ಯ ಭಾರತದ ನಾಗಲ್ಯಾಂಡ್ ಮಣಿಪುರ,ಮಿಜೋರಾಂ,ತ್ರಿಪುರ ರಾಜ್ಯದ ಧಿಮಾಪುರ ಕೋಹಿಮಾ,ಇಂಫಾಲ,ಮೋರೆ ಐಜ್ವಲ್,ಉನಕೋಟಿ,ಅಗರ್ತಲ ಮಾತಾಬರಿ,ನೀರ್‌ಮಹಲ್.
05.07.2025 ಅಮರನಾಥ್, ಅಮೃತ್‌ಸರ್,ವೈಷ್ಣೋದೇವಿ, ಲಡಾಕ್ 5/11/13ದಿನಗಳು.
14.05.2025 12ದಿನಗಳು ಆದಿಕೈಲಾಸ ಓಂಪರ್ವತ ಪಾತಾಳ,ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ.10.06.2025 10ದಿನಗಳು ನೇಪಾಳ ರಾಷ್ಟ್ರ ಪ್ರವಾಸ.29.05.2025, 12.06.2025 ಚಾರ್‌ದಾಮ್ ಯಾತ್ರೆ 12ದಿನಗಳು
9743351212
9206979202
9606032154

ನೇಪಾಳ ಪ್ರವಾಸ 10 ದಿನಗಳು 27/4/25 ಮುಕ್ತಿನಾಥ್ ಪಶುಪತಿನಾಥ ಕಟ್ಮಂಡು ಪೋಕ್ರ ಅಯೋಧ್ಯ ಲುಂಬಿನಿ ಜನಕಪುರ್ ಸ್ಥಳಗಳು ಸುವರ್ಣ ಯಾತ್ರ 6360146483/ 9480843945

14 ದಿನಗಳ ಚಾರ್ಧಾಮ್`ಯಾತ್ರ 29.5.2025. 8 ದಿನಗಳ ಅಮರನಾಥ್`ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಜುಲೈ 3 ರಿಂದ 13 ದಿನಗಳು ಅಮರ್ನಾಥ್, ಶ್ರೀನಗರ, ಅಮೃತಸರ, ವೈಷ್ಣೋಮಾತ, ಕುರುಕ್ಷೇತ್ರ. ಶ್ರೀಗಂಗಾ ಟೂರಿಸ್ಟ್ ಸಂಪರ್ಕಿಸಿ:9480253807, 8105522123.

ಉದ್ಯೋಗಾವಕಾಶ
General
Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ

BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
www.dhclassifieds.com
BOOK NOW
@ 750/-* PER SQCM
SINGLE / DOUBLE / MULTIPLE COLUMN
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | +91 9731810277

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಪ್ರಜಾ ಪ್ಲಸ್
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ

‘ಜೈಲರ್–2’ನಲ್ಲೂ ಶಿವರಾಜ್‌ಕುಮಾರ್

ರಜನಿಕಾಂತ್ ನಟನೆಯ, ನೆಲ್ಸನ್ ನಿರ್ದೇಶನದ ‘ಜೈಲರ್’ ಚಿತ್ರದ ಸೀಕ್ವೆಲ್‌ನಲ್ಲೂ ನಟ ಶಿವರಾಜ್‌ಕುಮಾರ್ ‘ನರಸಿಂಹ’ನಾಗಿ ಕಾಣಿಸಿಕೊಳ್ಳಲಿದ್ದಾರೆ. ‘45’ ಚಿತ್ರದ ಪ್ರಚಾರದ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ಇದನ್ನು ಖಚಿತಪಡಿಸಿದ್ದಾರೆ.

‘ಬಿಲ್ಲ ರಂಗ ಬಾಷಾ’ ಶೂಟಿಂಗ್ ಆರಂಭ

ಸುದೀಪ್

“20 ದಿನ ಮೊದಲ ಹಂತದ ಚಿತ್ರೀಕರಣ ನಡೆಸುತ್ತೇವೆ. ಚಿತ್ರದ ಪ್ರಮುಖ ಆ್ಯಕ್ಷನ್ ದೃಶ್ಯಗಳ ಚಿತ್ರೀಕರಣ ನಡೆಯಲಿದೆ. ಮೊದಲ ಹಂತದ ಚಿತ್ರೀಕರಣ ಮುಗಿಸಿದ ಬಳಿಕ ಬ್ರೇಕ್ ತೆಗೆದುಕೊಂಡು ಮುಂದಿನ ಹಂತದ ಶೂಟಿಂಗ್‌ಗೆ ಸಜ್ಜಾಗಲಿದ್ದೇವೆ.”

ಅನೂಪ್ ಭಂಡಾರಿ, ನಿರ್ದೇಶಕ

ಅನೂಪ್ ಭಂಡಾರಿ

‘ಮ್ಯಾಕ್ಸ್’ ಸಿನಿಮಾ ಬಳಿಕ ನಟ ಕಿಚ್ಚ ಸುದೀಪ್ ಹೊಸ ಪ್ರಾಜೆಕ್ಟ್ ಆರಂಭಿಸಿದ್ದಾರೆ. ‘ರಂಗಿತರಂಗ’, ‘ರಾಜರಥ’ ಹಾಗೂ ‘ವಿಕ್ರಾಂತ್ ರೋಣ’ ಸಿನಿಮಾ ನಿರ್ದೇಶಿಸಿದ್ದ ಅನೂಪ್ ಭಂಡಾರಿ ಆ್ಯಕ್ಷನ್ ಕಟ್ ಹೇಳುತ್ತಿರುವ ಪ್ಯಾನ್ ಇಂಡಿಯಾ ಸಿನಿಮಾ ‘ಬಿಲ್ಲ ರಂಗ ಬಾಷಾ–ಫಸ್ಟ್ ಬ್ಲಡ್’ ಶೂಟಿಂಗ್ ಬುಧವಾರ (ಏ.16) ಆರಂಭವಾಗಿದೆ. ಈ ಸಿನಿಮಾಗಾಗಿ ಕಳೆದ ಆರೇಳು ವರ್ಷಗಳಿಂದ ಅನೂಪ್–ಸುದೀಪ್ ಕೆಲಸ ಮಾಡಿದ್ದಾರೆ. ಇದು ಇವರ ಕಾಂಬಿನೇಷನ್‌ನ ಎರಡನೇ ಸಿನಿಮಾ. ಚಿತ್ರಕ್ಕಾಗಿ ಭರ್ಜರಿ ತಯಾರಿ ಮಾಡಿಕೊಂಡಿದ್ದಾರೆ ಸುದೀಪ್. ಎರಡು ಭಾಗಗಳಲ್ಲಿ ಈ ಚಿತ್ರ ತೆರೆಗೆ ಬರಲಿದೆ. ಸದ್ಯಕ್ಕೆ ಚಿತ್ರತಂಡ ಪಾತ್ರವರ್ಗದ ಬಗ್ಗೆ ರಹಸ್ಯ ಬಿಟ್ಟುಕೊಟ್ಟಿಲ್ಲ. ಕನ್ನಡ ಸೇರಿದಂತೆ ಇತರೆ ಭಾಷೆಗಳ ಪ್ರಮುಖ ಕಲಾವಿದರು ಚಿತ್ರದಲ್ಲಿ ಇರಲಿದ್ದಾರೆ ಎನ್ನಲಾಗಿದೆ.

2017ರಲ್ಲಿ ಈ ಸಿನಿಮಾದ ಕಥೆಯನ್ನು ಅನೂಪ್, ಸುದೀಪ್‌ಗೆ ಹೇಳಿದ್ದರು. 2018ರಲ್ಲಿ ಈ ಸಿನಿಮಾ ಘೋಷಣೆಯಾಗಿತ್ತು. ‘2021ರಲ್ಲಿ ನಾನು ‘ವಿಕ್ರಾಂತ್ ರೋಣ’ ಪೂರ್ಣಗೊಳಿಸಿದ್ದೆ. ಬಳಿಕ ಕೋವಿಡ್ ಸೋಂಕಿಗೆ ಒಳಗಾಗಿ ಹಲವು ತಿಂಗಳು ಚಿತ್ರೀಕರಣದಿಂದ ದೂರ ಉಳಿದಿದ್ದೆ. ನನ್ನ ಸಿನಿಮಾ ಪಯಣದ ಅತಿ ದೊಡ್ಡ ಚಿತ್ರ ಇದಾಗಿರಲಿದೆ. ಚಿತ್ರಕ್ಕಾಗಿ ಎಂಟು ಎಕರೆ ಜಾಗದಲ್ಲಿ ಬೃಹತ್ ಸ್ಟುಡಿಯೊ ನಿರ್ಮಾಣ ಮಾಡಿದ್ದೇವೆ. ಹೊಸ ಪ್ರಪಂಚವೇ ಅಲ್ಲಿ ಸೃಷ್ಟಿಯಾಗಿದೆ. 2209 ಎ.ಡಿ.ಯಲ್ಲಿ ನಡೆಯುವ ಕಥೆ ಇದಾಗಿದ್ದು, ಭವಿಷ್ಯದ ಪ್ರಪಂಚವನ್ನು ಅಲ್ಲಿ ನಿರ್ಮಾಣ ಮಾಡಿದ್ದೇವೆ. ಇದರಲ್ಲಿ ಒಂದೊಂದು ಪಾತ್ರ ಸಿದ್ಧವಾಗಲೂ ಸಮಯ ಬೇಕು’ ಎಂದು ಈ ಹಿಂದೆ ಸುದೀಪ್ ಹೇಳಿದ್ದರು.

‘ಬಿಲ್ಲ ರಂಗ ಬಾಷಾ’ ಸಿನಿಮಾವನ್ನು ಮಾಡಲು ಸಾಧ್ಯವೇ ಎನ್ನುವುದನ್ನು ನೋಡಲು ‘ವಿಕ್ರಾಂತ್ ರೋಣ’ ಸಿನಿಮಾವನ್ನು ಮಾಡಿದ್ದೆವು. ‘ಬಿಲ್ಲ ರಂಗ ಬಾಷಾ’ ಬಜೆಟ್, ಸ್ಕೇಲ್‌ಗೆ ಹತ್ತಿರವಾದ ಸಿನಿಮಾವಾಗಿ ‘ವಿಕ್ರಾಂತ್ ರೋಣ’ ಮಾಡಿದ್ದೆವು’ ಎಂದಿದ್ದ ಸುದೀಪ್, ಹೊಸ ಪ್ರಾಜೆಕ್ಟ್‌ನ ಸ್ಕೇಲ್ ತೆರೆದಿಟ್ಟಿದ್ದರು. ‘ಬಿಲ್ಲ ರಂಗ ಬಾಷಾ’ ಸಿನಿಮಾವನ್ನು ಪ್ರೈಂಶೋ ಎಂಟರ್‌ಟೈನ್‌ಮೆಂಟ್ ಪ್ರಸ್ತುತಪಡಿಸುತ್ತಿದ್ದು, ತೆಲುಗಿನ ಹಿಟ್ ಸಿನಿಮಾ ‘ಹನುಮಾನ್’ ನಿರ್ಮಾಣ ಮಾಡಿದ್ದ ಕೆ.ನಿರಂಜನ್ ರೆಡ್ಡಿ ಹಾಗೂ ಚೈತನ್ಯ ರೆಡ್ಡಿ ನಿರ್ಮಾಣ ಮಾಡುತ್ತಿದ್ದಾರೆ. ❖

ಎಐ ಬಳಸಿ ಕನ್ನಡ ಸಿನಿಮಾ ನಿರ್ಮಾಣ

ಸದ್ಯ ಎಲ್ಲಿ ನೋಡಿದರೂ ಎಐ (ಕೃತಕ ಬುದ್ಧಿಮತ್ತೆ) ಟ್ರೆಂಡ್. ಸಿನಿಮಾದ ಧ್ವನಿ, ಗ್ರಾಫಿಕ್ಸ್ ಮೊದಲಾದ ವಿಭಾಗಗಳಲ್ಲಿ ಎಐ ಈಗಾಗಲೇ ಕಾಲಿಟ್ಟಿದೆ. ಇದೀಗ ಪೂರ್ತಿ ಸಿನಿಮಾವೇ ಎಐನಲ್ಲಿ ನಿರ್ಮಾಣಗೊಂಡಿದೆ. ಅದೂ ಕನ್ನಡದ ಸಿನಿಮಾ!

ಎಐ ಚಿತ್ರದ ನಾಯಕಿ

‘ಲವ್ ಯು’ ಎಂಬ ಕನ್ನಡದ ಸಿನಿಮಾ ನಟ, ನಟಿಯರು, ತಂತ್ರಜ್ಞರ ಸಹಾಯವಿಲ್ಲದೆ ಪ್ರಾರಂಭದಿಂದ ಅಂತ್ಯದವರೆಗೂ ಎಐ ತಂತ್ರಜ್ಞಾನ ಬಳಸಿಕೊಂಡು ಸಿದ್ಧವಾದ ಚಿತ್ರ. ಈ ಹಿಂದೆ ‘ಗರುಡಾಕ್ಷ’, ‘ಕಂಟೈನರ್’ ಸಿನಿಮಾಗಳನ್ನು ಮಾಡಿದ್ದ ಎಸ್.ನರಸಿಂಹಮೂರ್ತಿ ಈ ಸಿನಿಮಾವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ.

‘ಈಗಾಗಲೇ ಜಗತ್ತಿನ ಚಿತ್ರರಂಗದಲ್ಲಿ ಸಿನಿಮಾಗಳ ವಿವಿಧ ವಿಭಾಗಗಳಲ್ಲಿ ಎಐ ತಂತ್ರಜ್ಞಾನವನ್ನು ಬಳಸಲಾಗಿದೆ. ಆದರೆ ಸಂಪೂರ್ಣವಾಗಿ ಎಐ ಮೂಲಕವೇ ಸಿನಿಮಾವನ್ನು ನಿರ್ಮಿಸುವ ಸಾಹಸ ಎಲ್ಲಿಯೂ ನಡೆದಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ ನಾವು ಆ ಸಾಹಸ ಮಾಡಿದ್ದೇವೆ. ಈ ಸಿನಿಮಾದ ನಿರ್ದೇಶಕರು, ನಿರ್ಮಾಪಕರನ್ನು ಹೊರತುಪಡಿಸಿದರೆ ಮತ್ತೆಲ್ಲ ಕೆಲಸಗಳನ್ನೂ ಈ ತಂತ್ರಜ್ಞಾನವೇ ನಿಭಾಯಿಸಿದೆ. ಬೇರೆ ಬೇರೆ ವಿಭಾಗಕ್ಕೆ ಬೇರೆ ಬೇರೆ ಎಐ ಸಾಫ್ಟ್‌ವೇರ್ ಬಳಸಿದ್ದೇವೆ. ಸುಮಾರು 20 ಎಐ ಟೂಲ್ ಬಳಸಿ ಸಿದ್ಧಗೊಂಡ ಚಿತ್ರ. ಕಥೆಯನ್ನು ಎಐಗೆ ಪ್ರಾಂಪ್ಟ್ ಮಾಡಿದರೆ ಉಳಿದೆಲ್ಲವನ್ನೂ ಅದೇ ಸಿದ್ಧಮಾಡಿಕೊಳ್ಳುತ್ತದೆ. ನಟ, ನಟಿಯರೂ ಬೇಕಿಲ್ಲ. ಅಷ್ಟರಮಟ್ಟಿಗೆ ತಂತ್ರಜ್ಞಾನ ಮುಂದುವರಿದಿದೆ. ಕಥೆ, ಸಂಕಲನ ಎರಡು ಮಾತ್ರ ನಮ್ಮದು’ ಎನ್ನುತ್ತಾರೆ ಎಸ್.ನರಸಿಂಹಮೂರ್ತಿ.

ಎಸ್.ನರಸಿಂಹಮೂರ್ತಿ

95 ನಿಮಿಷಗಳ ‘ಲವ್ ಯು’ ಸಿನಿಮಾದಲ್ಲಿ ಒಟ್ಟು 12 ಹಾಡುಗಳಿದ್ದು, ಅವೆಲ್ಲವನ್ನೂ ಎಐ ಸಂಯೋಜಿಸಿ, ಸಿದ್ಧಪಡಿಸಿದೆ. ಸೆನ್ಸಾರ್ ಮಂಡಳಿ ಚಿತ್ರಕ್ಕೆ ‘ಯು/ಎ’ ಪ್ರಮಾಣ ಪತ್ರವನ್ನು ನೀಡಿದ್ದು, ಸದ್ಯದಲ್ಲಿಯೇ ಚಿತ್ರ ತೆರೆಗೂ ಬರಲಿದೆ. ನೂತನ್, ಎಐ ಇಂಜಿನಿಯರ್ ತಾಂತ್ರಿಕ ವಿಭಾಗಗಳನ್ನು ನಿಭಾಯಿಸಿದ್ದಾರೆ.

‘ಇದು ಕೇವಲ ಸಿನಿಮಾ ಅಲ್ಲ, ಇದೊಂದು ಕ್ರಾಂತಿ. ಕಥೆ ಹೇಳುವ ಮತ್ತು ತಂತ್ರಜ್ಞಾನವನ್ನು ಸರಾಗವಾಗಿ ಬೆಸೆಯುವ ಹೊಸ ಯುಗವನ್ನು ನಾವು ಪ್ರವೇಶಿಸು-ತ್ತಿದ್ದೇವೆ. ತಂತ್ರಜ್ಞಾನದ ಟೂಲ್‌ಗಳಿಗೆ ಸುಮಾರು ₹10 ಲಕ್ಷ ಖರ್ಚು ಮಾಡಿದ್ದೇವೆ. ಒಟ್ಟಾರೆ ₹20 ಲಕ್ಷ ಬಜೆಟ್‌ನಲ್ಲಿ ಸಿನಿಮಾ ಸಿದ್ಧಗೊಂಡಿದೆ. ಕನ್ನಡ ಸಿನಿಮಾ ಜಾಗತಿಕ ಮಟ್ಟದಲ್ಲಿ ಇಂಥದ್ದೊಂದು ಬದಲಾವಣೆಗೆ ಸಾಕ್ಷಿಯಾಗಿದೆ. ಭವಿಷ್ಯದಲ್ಲಿ ಈ ಬದಲಾವಣೆಗೆ ಹೊಂದಿಕೊಂಡು ಚಿತ್ರರಂಗ ಅಭಿವೃದ್ಧಿ ಕಾಣಬೇಕಿದೆ’ ಎನ್ನುತ್ತಾರೆ ಅವರು. ❖

ವಂಶಿ ಪೈಡಿಪಲ್ಲಿ ಚಿತ್ರದಲ್ಲಿ ಅಮೀರ್ ಖಾನ್?



ಅಮೀರ್ ಖಾನ್

ಬಾಲಿವುಡ್‌ನ ಸ್ಟಾರ್ ನಟರು ದಕ್ಷಿಣ ಭಾರತದ ನಿರ್ದೇಶಕರತ್ತ ಒಲುವು ತೋರುತ್ತಿದ್ದಾರೆ. ದಕ್ಷಿಣದ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಾಲಿವುಡ್ ಚಿತ್ರಗಳಿಗಿಂತ ಹೆಚ್ಚು ಸದ್ದು ಮಾಡುತ್ತಿರುವುದೇ ಇದಕ್ಕೆ ಮುಖ್ಯ ಕಾರಣ. ಪ್ರಶಾಂತ್ ನೀಲ್, ಲೋಕೇಶ್ ಕನಕರಾಜು ಸೇರಿದಂತೆ ಕೆಲ ನಿರ್ದೇಶಕರು ಬಾಲಿವುಡ್‌ನಲ್ಲಿ ಸಿನಿಮಾ ಮಾಡಲಿದ್ದಾರೆ ಎಂಬ ವದಂತಿ ವರ್ಷಗಳಿಂದಲೂ ಇದೆ. ಆ ಸಾಲಿನಲ್ಲಿ ಈಗ ತೆಲುಗಿನ ಜನಪ್ರಿಯ ನಿರ್ದೇಶಕ ವಂಶಿ ಪೈಡಿಪಲ್ಲಿ ಹೆಸರು ಕೇಳಿ ಬಂದಿದೆ.

ಬಾಲಿವುಡ್‌ನ ಸೂಪರ್‌ಸ್ಟಾರ್ ಅಮೀರ್ ಖಾನ್, ವಂಶಿ ಪೈಡಿಪಲ್ಲಿ ಜೊತೆ ಕೈಜೋಡಿಸಲಿದ್ದಾರೆ ಎಂದು ತೆಲುಗು ಮಾಧ್ಯಮಗಳು ವರದಿ ಮಾಡಿವೆ. ತೆಲುಗಿನ ‘ಮಹರ್ಷಿ’, ತಮಿಳಿನ ‘ವಾರಿಸು’ ಮೊದಲಾದ ಮಾಸ್ ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಇದೀಗ ಅಮೀರ್, ವಂಶಿ ಜೋಡಿಯಾಗಿ ಪ್ಯಾನ್ ಇಂಡಿಯಾ ಸಿನಿಮಾ ಮಾಡಲು ಮುಂದಾಗಿದ್ದಾರೆ. ಇವರು ಈಗಾಗಲೇ ಒಂದೆಳೆ ಕಥೆಯನ್ನು ಅಮೀರ್ ಖಾನ್‌ಗೆ ಹೇಳಿದ್ದು, ಕಥೆ ವಿಸ್ತರಣೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.

ದಿಲ್ ರಾಜು ಚಿತ್ರಕ್ಕೆ ಬಂಡವಾಳ ಹೂಡಲಿದ್ದಾರೆ. ಇವರ ನಿರ್ಮಾಣದ ‘ಗೇಮ್ ಚೇಂಜರ್’ ಚಿತ್ರ ಅಷ್ಟೇನು ಯಶಸ್ಸು ಕಂಡಿರಲಿಲ್ಲ. ಹೀಗಾಗಿ ದಿಲ್ ರಾಜು ಮತ್ತೊಂದು ಹಿಟ್ ಕಾಂಬಿನೇಷನ್‌ಗೆ ಎದುರು ನೋಡುತ್ತಿದ್ದಾರೆ.

ಅಮೀರ್ ಖಾನ್ ಇತ್ತೀಚಿನ ಸಿನಿಮಾಗಳು ಕೂಡ ನಿರೀಕ್ಷಿತ ಯಶಸ್ಸು ಕಂಡಿಲ್ಲ. ಸದ್ಯ ಅವರು ‘ಸಿತಾರೆ ಜಮೀನ್ ಪರ್’ ಚಿತ್ರದಲ್ಲಿ ಮಗ್ನರಾಗಿದ್ದಾರೆ. ಜೊತೆಗೆ ರಜನಿಕಾಂತ್ ‘ಕೂಲಿ’ ಚಿತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ‘ಸಿತಾರೆ..’ ಬಳಿಕ ವಂಶಿ ಜೊತೆಗಿನ ಈ ಚಿತ್ರ ಪ್ರಾರಂಭವಾಗಲಿದೆ ಎಂಬ ಸುದ್ದಿಯಿದೆ. ❖

ಪ್ರತಿಸುಂಕ ಶೇ 245ಕ್ಕೆ ಏರಿಕೆ

ಅಮೆರಿಕದಿಂದ ಚೀನಾ ವಿರುದ್ಧದ ಸುಂಕ ಸಮರ ತಾರಕಕ್ಕೆ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಆಮದು ಮಾಡಿಕೊಳ್ಳುವ ಚೀನಾದ ಉತ್ಪನ್ನಗಳ ಮೇಲೆ ಶೇ 245ರಷ್ಟು ಪ್ರತಿಸುಂಕ ವಿಧಿಸಲಾಗುತ್ತದೆ ಎಂದು ಶ್ವೇತಭವನ ಹೇಳಿದೆ.

ಇದರಿಂದ ಪ್ರತಿಸುಂಕ ಕುರಿತು ಜಗತ್ತಿನ ಎರಡು ದೊಡ್ಡ ಆರ್ಥಿಕ ಶಕ್ತಿಗಳಾದ ಅಮೆರಿಕ ಮತ್ತು ಚೀನಾ ನಡುವಿನ ಸಂಘರ್ಷ ಮತ್ತಷ್ಟು ತಾರಕಕ್ಕೇರಿದಂತಾಗಿದೆ.

‘ಅಮೆರಿಕದ ಬೋಯಿಂಗ್ ಕಂಪನಿಯಿಂದ ವಿಮಾನಗಳನ್ನು ಪಡೆಯದಂತೆ ಚೀನಾ ತನ್ನ ವಿಮಾನಯಾನ ಸಂಸ್ಥೆಗಳಿಗೆ ಸೂಚನೆ ನೀಡಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ‘ಟ್ರೂತ್ ಸೋಷಿಯಲ್’ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಕಿಡಿಕಾರಿದ್ದಾರೆ.

‘ಈ ವ್ಯಾಪಾರ ಸಮರದಲ್ಲಿ ಅಮೆರಿಕ ಹಿತವನ್ನು ಕಾಪಾಡಲು ಪ್ರತಿಜ್ಞೆ ಮಾಡಿರುವುದಾಗಿ’ ಹೇಳಿದ್ದಾರೆ.

‘ದೇಶದ ಹೊಸ ವ್ಯಾಪಾರ ಒಪ್ಪಂದಗಳ ಕುರಿತು ಚರ್ಚಿಸಲು 75 ದೇಶಗಳು ಈಗಾಗಲೇ ಸಂಪರ್ಕ ಮಾಡಿವೆ. ಇದೆಲ್ಲದರ ಪರಿಣಾಮ, ಕೆಲ ಸರಕುಗಳ ಮೇಲಿನ ಗರಿಷ್ಠ ಪ್ರತಿಸುಂಕಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ. ಆದರೆ ಚೀನಾ ಮಾತ್ರ ಪ್ರತೀಕಾರ ತೀರಿಸಿಕೊಳ್ಳುತ್ತಿದೆ’ ಎಂದು ಶ್ವೇತಭವನ ದೂರಿದೆ.

‘ಇದೆಲ್ಲದರ ಪರಿಣಾಮ, ಅಮೆರಿಕವು ಆಮದು ಮಾಡಿಕೊಳ್ಳುವ ಸರಕುಗಳಿಗೆ ಸಂಬಂಧಿಸಿ ಚೀನಾ ಶೇ 245ರಷ್ಟು ಪ್ರತಿಸುಂಕ ಭರಿಸಬೇಕಾಗುತ್ತದೆ’ ಎಂದು ಅದು ಹೇಳಿದೆ.

ಅಮೆರಿಕದ ಪ್ರತಿಸುಂಕದ ನೀತಿ ವಿರುದ್ಧ ಪ್ರತೀಕಾರದ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಏಕೈಕ ದೇಶ ಚೀನಾ ಆಗಿದೆ. ಚೀನಾದಿಂದ ಆಮದಾಗುವ ಉತ್ಪನ್ನಗಳ ಮೇಲೆ ಅಮೆರಿಕ ಕೆಲ ದಿನಗಳ ಹಿಂದೆಯಷ್ಟೇ ವಿಧಿಸಿದ್ದ ಶೇ 145ರಷ್ಟು ಪ್ರತಿಸುಂಕಕ್ಕೆ ಪ್ರತೀಕಾರವಾಗಿ ಚೀನಾವು, ಅಮೆರಿಕದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಶೇ 125ರಷ್ಟು ಪ್ರತಿಸುಂಕ ವಿಧಿಸಿ ಆದೇಶಿಸಿತ್ತು. ಅಲ್ಲದೆ ಹೊಸ ಸುಂಕದ ಪ್ರಮಾಣ ಪ್ರಶ್ನಿಸಿ ಡಬ್ಲ್ಯುಟಿಒನಲ್ಲಿ ಕಾನೂನು ಸಮರವನ್ನೂ ಕೈಗೊಂಡಿದೆ.

ಸ್ವಯಂ ಗಡೀಪಾರು: ಹೊಸ ಯೋಜನೆ

ವಾಷಿಂಗ್ಟನ್(ರಾಯಿಟರ್ಸ್): ದಾಖಲೆರಹಿತ ವಲಸಿಗರು ಅಮೆರಿಕ ತೊರೆಯುವುದನ್ನು ಉತ್ತೇಜಿಸಲು ಹೊಸ ಕಾರ್ಯಕ್ರಮ ಜಾರಿಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ನೂತನ ‘ಸ್ವಯಂ ಗಡೀಪಾರು ಕಾರ್ಯಕ್ರಮ’ವು, ಅಮೆರಿಕ ತೊರೆಯುವ ವಲಸಿಗರಿಗೆ ಹಣಕಾಸು ನೆರವು, ವಿಮಾನ ಟಿಕೆಟ್ ಸೇರಿ ಹಲವು ಸೌಲಭ್ಯ ಒದಗಿಸಲಿದೆ ಎಂದು ಸಂದರ್ಶನವೊಂದರಲ್ಲಿ ಟ್ರಂಪ್ ಹೇಳಿದ್ದಾರೆ.

‘ದೇಶ ತೊರೆಯುವ ದಾಖಲೆರಹಿತ ವಲಸಿಗರಿಗೆ ಒಂದಿಷ್ಟು ಹಣ, ವಿಮಾನ ಟಿಕೆಟ್ ನೀಡಲಾಗುವುದು. ಒಂದು ವೇಳೆ ಅವರ ಚಾರಿತ್ರ್ಯ ಉತ್ತಮವಾಗಿದ್ದಲ್ಲಿ ಹಾಗೂ ಅವರ ಸೇವೆ ನಮಗೆ ಅಗತ್ಯವೆಂದು ಕಂಡುಬಂದಲ್ಲಿ, ತ್ವರಿತವಾಗಿ ಅವರನ್ನು ಮರಳಿ ಕರೆಸಿಕೊಳ್ಳಲಾಗುವುದು‘ ಎಂದು ಟ್ರಂಪ್ ವಿವರಿಸಿದ್ದಾರೆ.

ಪ್ರಾಚೀನ ಸಿಂಧೂ ಕಣಿವೆ ನಾಗರಿಕತೆಯ (ಐವಿಸಿ) ಪ್ರಮುಖ ನಗರಗಳಲ್ಲಿ ಒಂದಾದ ಲೋಥಲ್‌ನ ಪುರಾತತ್ವ ಸ್ಥಳಕ್ಕೆ ವಿದೇಶಾಂಗ ಸಚಿವ ಎಸ್‌. ಜೈಶಂಕರ್ ಬುಧವಾರ ಭೇಟಿ ನೀಡಿದರು ಪಿಟಿಐ ಚಿತ್ರ

‘ದೇಶದ ಅಭಿಲಾಷೆಯ ಪ್ರತಿನಿಧಿ’

ಅಹಮದಾಬಾದ್ (ಪಿಟಿಐ): ರಾಷ್ಟ್ರೀಯ ಕಡಲ ಪರಂಪರೆ ಸಂಕೀರ್ಣವು (ಎನ್‌ಎಂಎಚ್‌ಸಿ) ದೇಶದ ಕಡಲ ಪರಂಪರೆ ಮತ್ತು ಅಭಿಲಾಷೆಯನ್ನು ಪ್ರತಿನಿಧಿಸಲಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಬುಧವಾರ ತಿಳಿಸಿದ್ದಾರೆ.

ನಗರದಿಂದ 80 ಕಿ.ಮೀ. ದೂರದಲ್ಲಿರುವ ಪ್ರಾಚೀನ ಸಿಂಧೂ ಕಣಿವೆ ನಾಗರಿಕತೆಯ (ಐವಿಸಿ) ಪ್ರಮುಖ ನಗರಗಳಲ್ಲಿ ಒಂದಾದ ಲೋಥಲ್‌ನ ಪುರಾತತ್ವ ಸ್ಥಳಕ್ಕೆ ಹಾಗೂ ನಿರ್ಮಾಣ ಹಂತದಲ್ಲಿರುವ ಎನ್‌ಎಂಎಚ್‌ಸಿಗೆ ಭೇಟಿ ನೀಡಿದ ಸಂದರ್ಭ, ‘ಕಡಲ ಕ್ಷೇತ್ರದಲ್ಲಿನ ನಮ್ಮ ಸಂಶೋಧನೆ, ಯೋಜನೆ ಮತ್ತು ನಿರೂಪಣೆಗಳನ್ನು ಈ ಕೇಂದ್ರವು ಸಾಕಾರಗೊಳಿಸಲಿದೆ’ ಎಂದು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಉಲ್ಲೇಖಿಸಿದ್ದಾರೆ.

ಬಂದರು ಹಾಗೂ ಜಲಸಾರಿಗೆ ಸಚಿವಾಲಯವು ದೇಶದ 4,500 ವರ್ಷಗಳ ಹಳೆಯ ಕಡಲ ಪರಂಪರೆಯನ್ನು ಪ್ರದರ್ಶಿಸಲಿಕ್ಕಾಗಿ ಲೋಥಲ್‌ನಲ್ಲಿ ವಿಶ್ವದರ್ಜೆಯ ಎನ್‌ಎಂಎಚ್‌ಎಸ್ ಸ್ಥಾಪಿಸುತ್ತಿದೆ.

ಕೇಂದ್ರ ಸಚಿವ ಸಂಪುಟವು ಈ ಯೋಜನೆಗೆ 2024ರ ಅಕ್ಟೋಬರ್‌ನಲ್ಲಿ ಅನುಮೋದನೆ ನೀಡಿದ್ದು, ಎರಡು ಹಂತಗಳಲ್ಲಿ ಪೂರ್ಣಗೊಳ್ಳಲಿದೆ. ಮೊದಲ ಹಂತವು 2025ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಪ್ರಧಾನಿ ಜೊತೆ ಅಮೆರಿಕ ಉಪಾಧ್ಯಕ್ಷರ ಮಾತುಕತೆ

ಮುಂದಿನವಾರ ಭಾರತಕ್ಕೆ ಜೆ.ಡಿ.ವ್ಯಾನ್ಸ್ ಭೇಟಿ

ನವದೆಹಲಿ (ಪಿಟಿಐ): ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಅವರ ಪತ್ನಿ ಉಷಾ ಅವರು ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಭೇಟಿ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

‘ವ್ಯಾನ್ಸ್ ಅವರು ಗುರುವಾರದಿಂದ ಇಟಲಿ ಪ್ರವಾಸ ಕೈಗೊಳ್ಳಲಿದ್ದು, ನಂತರ ಭಾರತಕ್ಕೆ ಭೇಟಿ ನೀಡಲಿದ್ದಾರೆ’ ಎಂದು ಅವರ ವಕ್ತಾರರು ‘ಸಿಬಿಎಸ್ ನ್ಯೂಸ್’ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕೆಲ್ ವಾಲ್ಟ್ಜ್ ಅವರೂ ಮುಂದಿನ ವಾರ ಭಾರತಕ್ಕೆ ಭೇಟಿ ನೀಡುವ ಯೋಜನೆ ಹೊಂದಿದ್ದರು. ಆದರೆ ಸದ್ಯಕ್ಕೆ ಭೇಟಿ ಮುಂದೂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯು ಜಾಗತಿಕ ಮಟ್ಟದಲ್ಲಿ ಕಳವಳಕ್ಕೆ ಕಾರಣವಾಗಿರುವಾಗಲೇ ವ್ಯಾನ್ಸ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ.

ಜೆ.ಡಿ.ವ್ಯಾನ್ಸ್ ಮತ್ತು ಅವರ ಪತ್ನಿ ಉಷಾ

ಭಾರತ–ಇಯು ಸಂಬಂಧ ವೃದ್ಧಿಗೆ ಬೆಂಬಲ: ಭಾರತ–ಐರೋಪ್ಯ ಒಕ್ಕೂಟದ (ಇಯು) ಸಂಬಂಧ ವೃದ್ಧಿಗೆ ಬೆಂಬಲ ನೀಡುವುದಾಗಿ ಫಿನ್ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರು ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಿಳಿಸಿದರು.

ದೂರವಾಣಿ ಮೂಲಕ ಮಾತನಾಡಿದ ಉಭಯ ದೇಶಗಳ ನಾಯಕರು, ಡಿಜಿಟಲೀಕರಣ, ಸುಸ್ಥಿರತೆ ಮತ್ತಿತರ ವಲಯಗಳಲ್ಲಿ ಎರಡು ದೇಶಗಳ ಪಾಲುದಾರಿಕೆ ಬಗ್ಗೆ ಚರ್ಚಿಸಿದರು.

5ಜಿ, 6ಜಿ, ಕೃತಕ ಬುದ್ಧಿಮತ್ತೆ ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ಉಭಯ ದೇಶಗಳ ಪಾಲುದಾರಿಕೆಯನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುವ ಬದ್ಧತೆಯನ್ನು ಒತ್ತಿಹೇಳಿದರು.

‘ಭದ್ರತಾ ಮಂಡಳಿ ಸದಸ್ಯತ್ವಕ್ಕೆ ಧರ್ಮ ನಂಬಿಕೆಯ ಮಾನದಂಡ ಬೇಡ’

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯತ್ವ ನೀಡುವುದಕ್ಕೆ ಧರ್ಮ ಮತ್ತು ಧಾರ್ಮಿಕ ನಂಬಿಕೆಯಂತಹ ಹೊಸ ಮಾನದಂಡ ರೂಪಿಸುವ ಪ್ರಯತ್ನ ನಡೆಯುತ್ತಿರುವುದಕ್ಕೆ ಭಾರತ ಅಸಮಾಧಾನ ವ್ಯಕ್ತಪಡಿಸಿದೆ.

ಧರ್ಮ ಮತ್ತು ನಂಬಿಕೆ ಆಧಾರದಲ್ಲಿ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡುವುದು ಸರಿಯಲ್ಲ. ಪ್ರಾದೇಶಿಕತೆ ಆಧಾರದಲ್ಲಿ ಸದಸ್ಯತ್ವ ನೀಡಬೇಕು ಎಂಬ ಸ್ಥಾಪಿತ ಮಾನದಂಡಕ್ಕೆ ಈ ನಡೆ ವಿರುದ್ಧವಾಗಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಪಿ.ಹರೀಶ್ ಹೇಳಿದ್ದಾರೆ.

ಹೊಸ ಬದಲಾವಣೆಯು ಕಾಯಂ ಮತ್ತು ಕಾಯಂ ಅಲ್ಲದ ವಿಭಾಗಗಳಲ್ಲಿ ಯಾವುದೇ ಸುಧಾರಣೆಯನ್ನು ತರುವುದಿಲ್ಲ, ಬದಲಾಗಿ ಯಥಾಸ್ಥಿತಿಯೇ ಮುಂದುವರಿಯುವಂತೆ ಮಾಡಲಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿಇಸಿ ನೇಮಕಾತಿ: 14ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಮತ್ತು ಚುನಾವಣಾ ಆಯುಕ್ತ (ಇಸಿ) ಹುದ್ದೆಗಳಿಗೆ 2023ರ ಕಾಯ್ದೆ ಆಧರಿಸಿ ನೇಮಕ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ವಿವಿಧ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮೇ 14ರಂದು ನಡೆಸಲಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಾಂಕರ್ ದತ್ತಾ, ಉಜ್ಜಲ್ ಭುಯಾನ್ ಅವರ ನ್ಯಾಯಪೀಠ ವಿಚಾರಣೆಗೆ ದಿನಾಂಕ ನಿಗದಿ ಮಾಡಿತು.

ಹಾರ್ವರ್ಡ್ ಒಂದು ಜೋಕ್: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಪ್ರತಿಷ್ಠಿತ ಹಾರ್ವರ್ಡ್ ವಿಶ್ವವಿದ್ಯಾಲಯದ ವಿರುದ್ಧ ಬುಧವಾರ ವಾಗ್ದಾಳಿಯನ್ನು ತೀವ್ರಗೊಳಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ‘ಹಾರ್ವರ್ಡ್ ಒಂದು ಜೋಕ್ ಆಗಿದ್ದು, ಅಲ್ಲಿನ ಬೋಧಕರು ದ್ವೇಷ ಮತ್ತು ಮೂರ್ಖತನವನ್ನು ಕಲಿಸುತ್ತಾರೆ’ ಎಂದು ದೂರಿದ್ದಾರೆ.

‘ಇಂಥ ಸಂಸ್ಥೆಯು ಇನ್ನು ಮುಂದೆ ಫೆಡರಲ್ ನಿಧಿಗಳನ್ನು ಪಡೆಯಬಾರದು’ ಎಂದು ಅವರು ‘ಟ್ರೂತ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ದುಬೈ: ತೆಲಂಗಾಣದ ಇಬ್ಬರ ಹತ್ಯೆ

ಹೈದರಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಜೆಯೊಬ್ಬ ದುಬೈನ ಬೇಕರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ತೆಲಂಗಾಣ ಮೂಲದ ಇಬ್ಬರನ್ನು ಇರಿದು ಕೊಂದಿದ್ದಾನೆ. ಮತ್ತೊಬ್ಬರು ಗಾಯಗೊಂಡಿದ್ದಾರೆ.

ಮೃತಪಟ್ಟವರನ್ನು ತೆಲಂಗಾಣದ ನಿರ್ಮಲ್ ಜಿಲ್ಲೆಯ ಅಷ್ಟಪು ಪ್ರೇಮಸಾಗರ್ (35) ಹಾಗೂ ನಿಜಾಮಾಬಾದ್ ಜಿಲ್ಲೆಯ ಶ್ರೀನಿವಾಸ್ ಎಂದು ಗುರುತಿಸಲಾಗಿದೆ. ನಿಜಾಮಾಬಾದ್‌ನ ಸಾಗರ್ ಗಾಯಗೊಂಡಿದ್ದಾರೆ.

https://dhclassifieds.com
Book your Ad in 4 Easy Steps
--Select Category--
Book ad
1 Select Category
2 Publication & Date
3 Compose Your Ad
4 Payment



DH DECCAN HERALD | ಪ್ರಜಾವಾಣಿ

ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ
ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ
ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

COLLATERAL

40ನೇ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್: ಮಹಾರಾಷ್ಟ್ರ ತಂಡಕ್ಕೆ ಚಿನ್ನ

ಕರ್ನಾಟಕದ ಬಾಲಕಿಯರಿಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಪುದುಚೇರಿಯ ರಾಜೀವ್ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 40ನೇ ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿತು.

ಬುಧವಾರ ನಡೆದ ಫೈನಲ್ ಹಣಾಹಣಿಯಲ್ಲಿ ಮಹಾರಾಷ್ಟ್ರ 76–49ರಿಂದ ಕರ್ನಾಟಕ ತಂಡವನ್ನು ಮಣಿಸಿ ಚಿನ್ನದ ಪದಕ ಜಯಿಸಿತು.

ಸೆಮಿಫೈನಲ್‌ನಲ್ಲಿ ಛತ್ತೀಸಗಢ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದ ಕರ್ನಾಟಕದ ಬಾಲಕಿಯರು ಮಹಾರಾಷ್ಟ್ರ ತಂಡದ ಸಾಂಘಿಕ ಆಟದ ಎದುರು ನಿರುತ್ತರರಾದರು. ಕರ್ನಾಟಕ ಹೋದ ವರ್ಷ ಚಾಂಪಿಯನ್ ಆಗಿತ್ತು.

ಮಹಾರಾಷ್ಟ್ರ ಪರ ರೇವಾ ಕುಲಕರ್ಣಿ ಮತ್ತು ವೈಷ್ಣವಿ ಕ್ರಮವಾಗಿ 26 ಮತ್ತು 25 ಅಂಕ ಗಳಿಸಿ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಕರ್ನಾಟಕದ ಪರ ಮೆಹಕ್ ಶರ್ಮಾ 16, ನಾಯಕಿ ಅದಿತಿ ಸುಬ್ರಮಣ್ಯನ್ ಮತ್ತು ನಿರೀಕ್ಷಾ ಬಿ.ಸಿ ತಲಾ 10 ಪಾಯಿಂಟ್ಸ್ ಕಲೆ ಹಾಕಿದರು.

ರನ್ನರ್ಸ್ ಅಪ್ ಕರ್ನಾಟಕ ತಂಡಕ್ಕೆ ₹2 ಲಕ್ಷ ಬಹುಮಾನ ಲಭಿಸಿತು.

5 ಲಕ್ಷ ಪ್ರೋತ್ಸಾಹಧನ: ಬೆಳ್ಳಿ ಪದಕ ಗೆದ್ದ ಕರ್ನಾಟಕದ ಬಾಲಕಿಯರ ತಂಡವನ್ನು ಕರ್ನಾಟಕ ಒಲಿಂಪಿಕ್ಸ್ ಸಮಿತಿ ಮತ್ತು ಫಿಬಾ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್ ಅಭಿನಂದಿಸಿ, ₹5ಲಕ್ಷ ಪ್ರೋತ್ಸಾಹಧನ ಘೋಷಿಸಿದ್ದಾರೆ.

ರಾಷ್ಟ್ರೀಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕ ಬಾಲಕಿಯರ ತಂಡ. ಎಡದಿಂದ; (ನಿಂತವರು) ಮೆಹಕ್ ಶರ್ಮಾ, ಸಿರಿಶಾ ಎಸ್, ಶೀತಲ್ ಎಂ.ಆರ್, ಭಾವನಾ (ಮ್ಯಾನೇಜರ್), ಶ್ರೀನಿವಾಸಮೂರ್ತಿ ಎಚ್ (ಮುಖ್ಯ ಕೋಚ್), ಸತ್ಯನಾರಾಯಣ ಕೆ. (ಕೋಚ್), ಅದಿತಿ ಸುಬ್ರಮಣ್ಯನ್ (ನಾಯಕಿ), ನಿರೀಕ್ಷಾ ಬಿ.ಸಿ., ಶ್ರಾವಣಿ ಶಿವಣ್ಣ (ಮಂಡಿಯೂರಿದವರು) ಶಿವು ಬಾಯಿ, ಅನ್ವಿತಾ ಎಸ್, ಆಂಚಲ್ ಪಿ. ಸೀರ್ವಿ, ಸ್ವಾತಿ ಪ್ರಭು, ಅವನಿ ಮಾರ್ದ, ಹನೀಶಾ ಸಿಂಧೆ

ವೆನ್‌ಜುನ್‌ಗೆ ಮಹಿಳಾ ವಿಶ್ವ ಚೆಸ್ ಕಿರೀಟ

ಚೊಂಗ್‌ಕ್ವಿಂಗ್ (ಚೀನಾ): ಚೀನಾದ ಗ್ರ್ಯಾಂಡ್‌ಮಾಸ್ಟರ್ ಜು ವೆನ್‌ಜುನ್ ಅವರು ಸ್ವದೇಶದ ತಾನ್ ಝೊಂಗ್ವಿ ಅವರನ್ನು 6.5–2.5 ರಿಂದ ಸೋಲಿಸಿ ಸತತ ಐದನೇ ಬಾರಿ ಫಿಡೆ ಮಹಿಳಾ ವಿಶ್ವ ಚೆಸ್ ಕಿರೀಟ ಧರಿಸಿದರು.

ಬುಧವಾರ ನಡೆದ ಒಂಬತ್ತನೇ ಸುತ್ತಿನಲ್ಲಿ ವೆನ್‌ಜುನ್, ಎದುರಾಳಿಯ ಜೊತೆ ಡ್ರಾ ಮಾಡಿಕೊಂಡರು. ಇದರಿಂದ 12 ಸುತ್ತುಗಳ ಫೈನಲ್‌ನಲ್ಲಿ ಮೂರು ಸುತ್ತುಗಳಿರುವಂತೆ ಕಿರೀಟ ವೆನ್‌ಜುನ್ ಪಾಲಾಯಿತು. ಎರಡನೇ ಸುತ್ತಿನಲ್ಲಿ ವೆನ್‌ಜುನ್ ಸೋತಿದ್ದರು. ಆದರೆ 34 ವರ್ಷ ವಯಸ್ಸಿನ ಅನುಭವಿ ಆಟಗಾರ್ತಿ ಮೂರನೇ ಸುತ್ತಿನಲ್ಲಿ ಗೆದ್ದರಲ್ಲದೇ, ಐದನೇ ಸುತ್ತಿನಿಂದ ಸತತ ನಾಲ್ಕು ಗೆಲುವು ಸಾಧಿಸಿ ಪಾರಮ್ಯ ಮೆರೆದರು. ಮೂರು ಪಂದ್ಯಗಳು ಡ್ರಾ ಆದವು.

ಈ ಹಿಂದೆ ಝೆಕ್ ಆಟಗಾರ್ತಿ ವೆರಾ ಮೆಂಚಿಕ್, ಜಾರ್ಜಿಯಾದ (ಆಗಿನ ಸೋವಿಯತ್ ರಷ್ಯಾದ) ನೊನಾ ಗ್ಯಾಪ್ರಿಂದಶ್ವಿಲಿ ಮತ್ತು ಮಾಯಾ ಷಿಬುರ್ದನಿಡ್ಜ್ ಅವರು ಸತತ ಐದು ಬಾರಿ ವಿಶ್ವ ಚಾಂಪಿಯನ್ ಆಗಿದ್ದರು.

ಈ ಹಿಂದಿನ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ವೆನ್‌ಜುನ್, ಸ್ವದೇಶದ ತಾನ್ ವಿರುದ್ಧ (2018ರಲ್ಲಿ), ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ವಿರುದ್ಧ (2020ರಲ್ಲಿ), ಸ್ವದೇಶದ ಲೀ ಟಿಂಗ್ಜಿ ವಿರುದ್ಧ (2023ರಲ್ಲಿ) ಜಯಗಳಿಸಿದ್ದರು. ವೆನ್‌ಜುನ್ ಗೆಲುವಿಗಾಗಿ ₹2.92 ಕೋಟಿ ಬಹುಮಾನ ಪಡೆದರು. ರನ್ನರ್ ಅಪ್ ಆದ ತಾನ್ ಝೊಂಗ್ವಿ ₹1.94 ಕೋಟಿ ಬಹುಮಾನ ಪಡೆದರು.

ಅಗ್ರ ಬೋರ್ಡ್‌ಗಳಲ್ಲಿ ಹೆಚ್ಚಿನ ಪಂದ್ಯಗಳು ಡ್ರಾ

ಮುನ್ನಡೆಯಲ್ಲಿ 7 ಆಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನೆರಡು ಸುತ್ತುಗಳ ಆಟ ಬಾಕಿಯಿರುವಂತೆ, 'ನಮ್ಮ ಬೆಂಗಳೂರು ಇಂಟರ್ ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ'ಯಲ್ಲಿ ಅಗ್ರಸ್ಥಾನಕ್ಕೆ ಪೈಪೋಟಿ ತೀವ್ರಗೊಂಡಿದೆ. ಬುಧವಾರ ನಡೆದ ಎಂಟನೇ ಸುತ್ತಿನಲ್ಲಿ ಮೊದಲ 10 ಬೋರ್ಡ್‌ನ ಪಂದ್ಯಗಳಲ್ಲಿ ಏಳು ಡ್ರಾ ಆಗಿವೆ.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಏಳು ಮಂದಿ ಆಟಗಾರರು ತಲಾ 6.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಅಗ್ರ ಶ್ರೇಯಾಂಕದ ಪಾ ಇನಿಯನ್ (ತಮಿಳುನಾಡು), ಉಜ್ಬೇಕಿಸ್ತಾನದ ಮರಾತ್ ಝುಮಯೇವ್, ಮೂರನೇ ಶ್ರೇಯಾಂಕದ ಮ್ಯಾನುಯೆಲ್ ಪೆಟ್ರೋಸಿಯಾನ್ (ಅರ್ಮೇನಿಯಾ), ಕೇರಳದ ನಿತಿನ್ ಬಾಬು, ಜಾರ್ಜಿಯಾದ ಲೆವನ್ ಪೆಂಟ್ಸುಲಾಯಿಯಾ, ಐಎಂ ಶ್ರೀವತ್ಸ ಅನುಜ್ (ಮಧ್ಯಪ್ರದೇಶ), ಗೋವಾದ ಅಮೇಯ ಆದಿ ಅವರು ಮುನ್ನಡೆಯಲ್ಲಿ ಇರುವ ಆಟಗಾರರು.

15 ಆಟಗಾರರು ತಲಾ 6 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಮೊದಲ ಬೋರ್ಡ್‌ನಲ್ಲಿ ಪೆಟ್ರೋಸಿಯನ್ ಕೇವಲ 22 ನಡೆಗಳಲ್ಲಿ ಝುಮಯೇವ್ ವಿರುದ್ಧ ಡ್ರಾ ಮಾಡಿಕೊಂಡರು. ಎರಡನೇ ಬೋರ್ಡ್‌ನಲ್ಲಿ ನಿತಿನ್ ಬಾಬು (ರೇಟಿಂಗ್ 2242) ಅವರು ಐದನೇ ಶ್ರೇಯಾಂಕದ ಪೆಂಟ್ಸುಲಾಯಿಯಾ (2532) ನೀಡಿದ ಡ್ರಾ ಕೊಡುಗೆ ಒಪ್ಪಿಕೊಂಡರು.

ನಿತಿನ್ ಬಾಬು

ತಮಿಳುನಾಡಿನ ಪಾ.ಇನಿಯನ್ ಮೂರನೇ ಬೋರ್ಡ್‌ನಲ್ಲಿ ಗೋವಾದ ಇತನ್ ವಾಜ್ (6) ಅವರನ್ನು ಸೋಲಿಸಿದರು. ಮೊದಲ ಆರು ಬೋರ್ಡ್‌ಗಳಲ್ಲಿ ಈ ಪಂದ್ಯವೊಂದೇ ನಿರ್ಣಾಯಕ ಫಲಿತಾಂಶ ಕಂಡಿತು. ನಿತಿನ್ ಬಾಬು ಈಗ ಈ ಟೂರ್ನಿಯಲ್ಲಿ ಮೊದಲ 18 ಸ್ಥಾನ ಪಡೆದಿರುವ ಆಟಗಾರರಲ್ಲಿ ಕಡಿಮೆ ರೇಟಿಂಗ್ ಹೊಂದಿದ್ದಾರೆ.

ಕರ್ನಾಟಕದ ಆಟಗಾರರಿಬ್ಬರ ಹಣಾಹಣಿಯಲ್ಲಿ ಜಿಎಂ ಜಿ.ಎ.ಸ್ಟಾನಿ (6) ಅವರು ಐಎಂ ವಿಯಾನಿ ಡಿಕುನ್ಹ (6) ಜೊತೆ ಡ್ರಾ ಮಾಡಿಕೊಂಡರು. ಅಮೇಯ ಆದಿ ಅವರು ಒಡಿಶಾದ ಪದ್ಮಿನಿ ರಾವುತ್ (5.5) ಅವರನ್ನು ಮಣಿಸಿದರು. ಶ್ರೀವತ್ಸ ಅನುಜ್, ಮಹಾರಾಷ್ಟ್ರದ ಸುಯೋಗ್ ವಾಘ್ (5.5) ವಿರುದ್ಧ ಜಯ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಅಥ್ಲೆಟಿಕ್ಸ್: ನಿತಿನ್, ತನ್ನುಗೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ನಿತಿನ್ ಗುಪ್ತಾ ಅವರು ಸೌದಿ ಅರೇಬಿಯಾದ ದಮ್ಮಮ್‌ನಲ್ಲಿ ನಡೆಯುತ್ತಿರುವ ಆರನೇ ಏಷ್ಯನ್ 18 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 5000 ಮೀ. ರೇಸ್ ವಾಕ್‌ನಲ್ಲಿ ಬುಧವಾರ ಬೆಳ್ಳಿ ಪದಕ ಗೆದ್ದರು. ಮಹಿಳೆಯರ 400 ಮೀ. ಓಟದಲ್ಲಿ ತನ್ನು ಬೆಳ್ಳಿ ಗೆದ್ದರು.

17 ವರ್ಷ ವಯಸ್ಸಿನ ಗುಪ್ತಾ 20ನಿ.21.51 ಸೆಕೆಂಡುಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿ ಎರಡನೇ ಸ್ಥಾನ ಪಡೆದರು. ಚೀನಾದ ಝು ನಿಂಗ್‌ಹಾವೊ ಈ ದೂರವನ್ನು 20 ನಿ.21.50 ಸೆ.ಗಳಲ್ಲಿ ಪೂರೈಸಿ ಚಿನ್ನ ಗೆದ್ದರು.

ಪಟ್ನಾದಲ್ಲಿ ಕಳೆದ ತಿಂಗಳು ನಡೆದ ರಾಷ್ಟ್ರೀಯ ಯುವ ಅಥ್ಲೆಟಿಕ್ ಕೂಟದಲ್ಲಿ ಗುಪ್ತಾ ಈ ಸ್ಪರ್ಧೆಯನ್ನು 19ನಿ.24.48 ಸೆ.ಗಳಲ್ಲಿ ಕ್ರಮಿಸಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿದ್ದರು.

ತನ್ನು 400 ಮೀ. ಓಟವನ್ನು 57.63 ಸೆಕೆಂಡುಗಳಲ್ಲಿ ಕ್ರಮಿಸಿದರು. ಜಪಾನ್‌ನ ಇಮಾಮಿನಿ (57.27 ಸೆ.) ಚಿನ್ನ ಗೆದ್ದರು.

ಬ್ಲಿಟ್ಜ್ ತಂಡಕ್ಕೆ ಜಯ

ಬೆಂಗಳೂರು: ಮೃಣಾಲ್ ಗೌಡ ಅವರ ಆಟದ ಬಲದಿಂದ ಬ್ಲಿಟ್ಜ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್‌ನ ಪಂದ್ಯದಲ್ಲಿ 3–2 ಗೋಲುಗಳಿಂದ ರೂಟ್ಸ್ ಎಫ್‌ಎಸ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬ್ಲಿಟ್ಜ್ ಪರ ಮೃಣಾಲ್ (36ನೇ ಮತ್ತು 49ನೇ ನಿಮಿಷ) ಎರಡು ಗೋಲು ಗಳಿಸಿದರೆ, ವಿವೇಕ್ ಸಿಂಗ್ (17ನೇ) ಒಂದು ಗೋಲು ಗಳಿಸಿದರು.

ರೂಟ್ಸ್ ತಂಡದ ಸ್ಪರ್ಶ್ ದೇಸಾಯಿ (29ನೇ) ಒಂದು ಗೋಲು ಹೊಡೆದರೆ, ಮತ್ತೊಂದು ಗೋಲು ಬ್ಲಿಟ್ಜ್‌ನ ಚೇತನ್ ಭದ್ರಾಪುರ (89ನೇ) ಅವರಿಂದ 'ಉಡುಗೊರೆ'ಯಾಗಿ ಲಭಿಸಿತು.

ದಿನದ ಇನ್ನೊಂದು ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ ತಂಡವು 3–2 ಗೋಲುಗಳಿಂದ ಸ್ಟೈಪರ್ಸ್ ತಂಡವನ್ನು ಮಣಿಸಿತು.